ಮಾನವಿಕ ಕರ್ಣಾಟಕ

ಸಂಪುಟ ೫ ಸಂಚಿಕೆ ೪

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೫

ಈ ಸಂಚಿಕೆಯ ಲೇಖನಗಾರರು

ಶ್ರೀಯುತರಾದ

೧ ಎಲ್.ಜಿ. ಭಟ್, ಕಾರ್ಕಳದ (ದ.ಕ.) ಶ್ರೀ ಭುವನೇಂದ್ರ ಕಾಲೇಜಿನಲ್ಲಿ ಅಧ್ಯಾಪಕರು

೨ ಕೆ. ಉಮಾಪತಿಶೆಟ್ಟಿ (ಡಾ.), ಪ್ರಾಧ್ಯಾಪಕರು, ಗ್ರಂಥಾಲಯ ವಿಭಾಗ, ಆರ್ಟ್ಸ್ ಮತ್ತು ಸೈನ್ಸ್ ಕಾಲೇಜ್, ಪಹ್ಲವಿ ವಿಶ್ವವಿದ್ಯಾಲಯ, ಸಿರಾಜ್, ಇರಾನ್

೩ ಹ. ಕ. ರಾಜೇಗೌಡ, ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧನ ಸಹಾಯಕರು

೪ ಎಚ್. ವಿ. ನರಸಿಂಹಮೂರ್ತಿ, ಅಧ್ಯಾಪಕರು, ಭಂಡಾರ್ಕರ್ ಕಾಲೇಜು, ಕುಂದಾಪುರ (ದ. ಕ.)

೫ ಎಸ್. ಎನ್. ವೀರಪ್ಪ (ಡಾ.), ಮೈಸೂರಿನ ಶಿಕ್ಷಣ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಶ್ವಕೋಶದ ಜೀವಶಾಸ್ತ್ರ ವಿಭಾಗದ ಗೌರವ ಸಂಪಾದಕರು

೬ ಪಿ. ಆರ್. ತಿಪ್ಪೇಸ್ವಾಮಿ, ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಸ್ತುಸಂಗ್ರಹಾಲಯದ ಕ್ಯೂರೇಟರ್

೭ ಎಚ್. ಆರ್. ರಘುನಾಥ ಭಟ್, ಮಾನಸಗಂಗೋತ್ರಿಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದಲ್ಲಿ ಅಧ್ಯಾಪಕರು



ಎನ್. ವಿ. ಚಿನ್ನಾಚಾರ್, ಮೇಣದ ಕೃತಿಯ ರಚನೆಯಲ್ಲಿ

ಎಲ್. ಜಿ. ಭಟ್

ಹಾಲಕ್ಕಿ ಒಕ್ಕಲಿಗರ ಆಡಳಿತ ಪದ್ಧತಿ

ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿ, ಗಾಮೊಕ್ಕಲು, ಹರತಂತ್ರರು, ಸಿದ್ದಿಗಳು, ನಾಮಧಾರಿಗಳು, ವಾಲೆಕಾರರು, ಮುಕ್ರಿಗಳು, ಹಾಲಕ್ಕಿಗಳು ಮುಂತಾದ ಅನೇಕ ವರ್ಗಗಳು ಇರುವುದನ್ನು ನೋಡಬಹುದು. ಈ ಪ್ರತಿಯೊಂದು ವರ್ಗದ ಜನರೂ ತಮ್ಮವೇ ಆದ ಕೆಲವು ಪದ್ಧತಿಗಳನ್ನು ಅನುಸರಿಸುತ್ತಾರೆ. ಗಾಮೊಕ್ಕಲು, ಮುಕ್ರಿಗಳು, ಹಾಲಕ್ಕಿ ಒಕ್ಕಲಿಗರು ವಿಶಿಷ್ಟವಾದ ಆಡಳಿತ ಕ್ರಮವನ್ನು ಇಂದಿಗೂ ಅನುಸರಿಸುತ್ತಾರೆ.

ಹಾಲಕ್ಕಿ ಒಕ್ಕಲಿಗರು ಕದಂಬ ಮಯೂರ ಶರ್ಮನ ಕಾಲದಲ್ಲಿ, ಉತ್ತರ ಭಾರತದ ಅಹಿಚ್ಛತ್ರದಿಂದ, ಬ್ರಾಹ್ಮಣರೊಡನೆ ದಕ್ಷಿಣಕ್ಕೆ ಬಂದರೆಂದೂ ಮುಂದೆ ಇಲ್ಲಿಯೇ ಕೃಷಿನಿರತರಾದರೆಂದೂ ಕೆಲವರು ಹೇಳುತ್ತಾರೆ. ಇನ್ನು ಕೆಲವರು ಈ ಒಕ್ಕಲಿಗರು ಉತ್ತರ ಕನ್ನಡಜಿಲ್ಲೆಯ ಮೂಲನಿವಾಸಿಗಳೆಂದು ಅಭಿಪ್ರಾಯಪಡುತ್ತಾರೆ. ಇವರ ಆಡಳಿತ ಪದ್ಧತಿ, ಬೇಟೆಯಾಡುವ ನಿಯಮಗಳು ಮುಂತಾದವನ್ನು ಅವಲೋಕಿಸಿದಾಗ ಇವರು ಕ್ಷತ್ರಿಯರಾಗಿರಬಹುದು ಎಂದು ಅನಿಸಿದರೆ, ತಮ್ಮ ಪೂರ್ವಜರು ಜೈನ ಧರ್ಮಕ್ಕೆ ಸೇರಿದವರೆಂದು ಹಾಲಕ್ಕಿ ಪ್ರಮುಖರೊಬ್ಬರ[1] ಅಭಿಪ್ರಾಯ. ಹೀಗೆ ಇವರ ಮೂಲದ ಬಗ್ಗೆ ಇನ್ನೂ ಖಚಿತವಾದ ಅಭಿಪ್ರಾಯ ಇಲ್ಲ.

ಹಾಲಕ್ಕಿ ಎಂಬ ಹೆಸರು ಬಂದ ಬಗೆಯನ್ನು ಕುರಿತು ಈ ವರ್ಗದ ಕೆಲವು ಪ್ರಮುಖರನ್ನು ಕೇಳಿದಾಗ ಅನೇಕ ಅಭಿಪ್ರಾಯಗಳು ಕಂಡುಬಂದುವು. ಶಿವ ಒಂದಾನೊಂದು ಕಾಲದಲ್ಲಿ ಗದ್ದೆ ಉಳುತ್ತಿದ್ದ. ಪಾರ್ವತಿ ದಿನಾಲು ಶಿವನಿಗೆ ಅನ್ನ ತೆಗೆದುಕೊಂಡು ಹೋಗುತ್ತಿದ್ದಳು. ಎಂದಿನಂತೆ ಅನ್ನ ಮತ್ತು ಹಾಲನ್ನು ಒಯ್ಯುವಾಗ ದಾರಿಯಲ್ಲಿ ಪಾರ್ವತಿ ಕಾಲೆಡವಿ ಬಿದ್ದಳು. ಹಾಲು–ಅನ್ನ ಮಣ್ಣುಪಾಲಾಯಿತು. ಅವುಗಳಿಂದ ಪಾರ್ವತಿ ಎರಡು ಗೊಂಬೆಗಳನ್ನು ತಯಾರಿಸಿ, ಪುನಃ ಮನೆಗೆ ಬಂದಳು. ಗದ್ದೆ ಉಳುತ್ತಿದ್ದ ಶಿವ, ಪಾರ್ವತಿ ಎಂದಿನ ವೇಳೆಗೆ ಬರದೆ ಇದ್ದುದನ್ನು ನೋಡಿ ಉಳುವುದನ್ನು ಬಿಟ್ಟು ಗೃಹಾಭಿಮುಖವಾಗಿ ಬಂದ. ಬರುವಾಗ ಎಂದಿಲ್ಲದ ಎರಡು ಗೊಂಬೆಗಳನ್ನು ನೋಡಿದ ; ಅವನ್ನು ಸ್ಪರ್ಶಿಸಿದ. ಗೊಂಬೆಗಳು ಮಾತನಾಡಲಾರಂಭಿಸಿದುವು. ಇವೇ ಮುಂದೆ ಹಾಲಕ್ಕಿಗಳಾದುವು[2], ಎಂಬುದು ಒಂದು ಹೇಳಿಕೆ. ಹವ್ಯಕರ

---

[1] ಹಳದೀಪುರದ ಡಿಪ್ಪಣ್ಣಶೆಟ್ಟರು ಹೀಗೆ ಹೇಳುವರೆಂದು ಚಂದಾವುರ ಸೀಮೆಯ ಕೂಜಳ್ಳಿ ಗ್ರಾಮದ ಶ್ರೀ ಹನುಮಂತಗೌಡರು ಹೇಳಿದ್ದಾರೆ.

[2] ಇದು ಶ್ರೀ ಹನುಮಂತಗೌಡರ ಸ್ವಂತ ಅಭಿಪ್ರಾಯ. ಈ ಹೇಳಿಕೆಯನ್ನು ಅವರ ಅಜ್ಜ ಮುತ್ತಜ್ಜ ಹೇಳುತ್ತಿದ್ದರಂತೆ.

ಮದುವೆಗಳಲ್ಲಿ ಹಾಲಕ್ಕಿ ಒಕ್ಕಲಿಗರು ಹಾಲು ಮತ್ತು ಅಕ್ಕಿಯನ್ನು ದಿಬ್ಬಣಕ್ಕಿಂತಲೂ ಮುಂದಾಗಿ ಬೀರುತ್ತ ಹೋಗುತ್ತಿದ್ದರು. ಇದರಿಂದ ಹಾಲಕ್ಕಿಗಳು ಎಂಬ ಹೆಸರು ಬಂತು[3], ಎಂಬುದು ಇನ್ನೊಂದು ಹೇಳಿಕೆ. ನಮ್ಮ ಸಂಸ್ಕೃತಿಯಲ್ಲಿ ವೃತ್ತಿಪ್ರಧಾನವಾಗಿ ಅನೇಕ ಹೆಸರುಗಳು ಬಂದು ವೆಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಈ ಒಕ್ಕಲಿಗರು ಪಶುಪಾಲನೆ ಮತ್ತು ಬೇಸಾಯ ವೃತ್ತಿಯವರು. ಪಶುಪಾಲನೆಯಿಂದ ಹಾಲನ್ನೂ ಬೇಸಾಯದಿಂದ ಅಕ್ಕಿಯನ್ನೂ ಪಡೆಯು ತ್ತಿದ್ದದ್ದರಿಂದ ಹಾಲಕ್ಕಿ ಎಂಬ ಹೆಸರು ಬಂದಿರಬಹುದು ಎಂದು ಅನಿಸುತ್ತದೆ. ಸಾತವಾಹನರ ಕಾಲದಲ್ಲೇ ರೈತರಿಗೆ ಹಾಲಕ್ಕೀಯ ಎಂದು ಕರೆಯುತ್ತಿದ್ದರು ಎಂಬುದು ಇತಿಹಾಸದ ಪುಟಗಳಿಂದ ತಿಳಿದುಬರುವುದು ಇಲ್ಲಿ ಗಮನಾರ್ಹ ಅಂಶ.

ಹಾಲಕ್ಕಿ ಒಕ್ಕಲಿಗರು ತಮ್ಮ ಪದ್ಧತಿಗಳನ್ನು ಇಂದಿಗೂ ಉಳಿಸಿಕೊಂಡು ಬಂದ ಮುಖ್ಯ ವರ್ಗ. ಉತ್ತರ ಕನ್ನಡ ಜಿಲ್ಲೆಯಲ್ಲಿ ಅವರ ಆಡಳಿತ ಪದ್ಧತಿಯನ್ನು ಇಲ್ಲಿ ಸ್ಥೂಲವಾಗಿ ವಿವೇಚಿಸಲಾಗಿದೆ.

ಆಡಳಿತ ವಿಭಾಗಗಳು : ಇವರ ಆಡಳಿತ ಪದ್ಧತಿಯಲ್ಲಿ ಸೀಮೆ ಆಡಳಿತ, ಊರ ಆಡಳಿತ ಎಂಬ ಎರಡು ವಿಭಾಗಗಳನ್ನು ಮಾಡಬಹುದು. ಉತ್ತರ ಕನ್ನಡ ಜಿಲ್ಲೆಯಲ್ಲಿ ಚಂದಾವುರ[4] ಸೀಮೆ ಇವರ ಅತ್ಯಂತ ದೊಡ್ಡ ಸೀಮೆ. ಸೀಮೆಗಳನ್ನು ಅನೇಕ ಊರುಗಳನ್ನಾಗಿ ವಿಂಗಡಿಸಿದ್ದಾರೆ.

ಸೀಮೆ ಆಡಳಿತ : ಗುರುಗೌಡ, ಅರಸುಗೌಡ, ಪ್ರಧಾನಿ, ಸೀಮೆ ಬುದವಂತ, ಜನಮನೆ ಗೌಡ, ಮತ್ತು ಸೀಮೆ ಕೋಲಕಾರ ಇವರು ಸೀಮೆಯ ಮುಖ್ಯ ಅಧಿಕಾರಿಗಳು. ಈ ಎಲ್ಲ ಅಧಿಕಾರಿಗಳಿಗೂ ತಮ್ಮವೇ ಆದ ಹಕ್ಕು ಮತ್ತು ಕರ್ತವ್ಯಗಳು ಇವೆ.

ಗುರುಗೌಡ[5] : ಸೀಮೆಯ ಯಾವತ್ತೂ ಆಗು ಹೋಗುಗಳಿಗೆ ಗುರುಗೌಡನೇ ಜವಾಬ್ದಾರಿ. ಗುರುವಿನ ಅಪ್ಪಣೆಯನ್ನು ಯಾರೂ ಮೀರುವಂತಿಲ್ಲ. ಸೀಮೆಯ ಇತರ ಅಧಿಕಾರಿಗಳೂ ಈತನಿಗೆ ಕಾಣಿಕೆ ಸಲ್ಲಿಸಬೇಕು. ಅರಸುಗೌಡ ಮೃತನಾದರೆ ಆತನ ಮಗನನ್ನು ಆ ಸ್ಥಾನಕ್ಕೆ ತರುವುದು ರೂಢಿ. ಆಗ ಅರಸುಗೌಡನ ಮಗನನ್ನು ಗುರುಗೌಡನ ಮನೆಗೆ ಸೀನೆಬುದವಂತ ಕರೆದು ತಂದು, ಗುರುಕಟ್ಟೆ[6]ಯನ್ನು ಪೂಜಿಸಿ, ಗುರುಗೌಡನ ಮನೆಯ ತುಳಸಿಗೂ ಗುರುಗೌಡನಿಗೂ ತೆಂಗಿನ

---

[3] ಇದು ಹಾರೋಡಿ ಗೋಯ್ದು ಗೌಡರ ಅಭಿಪ್ರಾಯ. ಚಂದಾವುರ ಸೀಮೆಯ ಸೀಮೆ ಬುದವಂತರಾಗಿ, ಅನೇಕ ದಶಕಗಳ ವರೆಗೆ ಸಾಮರ್ಥ್ಯದಿಂದ ಕಾರ್ಯ ನಿರ್ವಹಿಸಿದ ವ್ಯಕ್ತಿ.

[4] ಚಂದಾವುರ ಕುಮಟೆಯಿಂದ 3–4 ಮೈಲು ಅಂತರದಲ್ಲಿದೆ. ಮುಸ್ಲಿಂ ಆಡಳಿತದಲ್ಲಿ ಇದು ಕೇಂದ್ರ ಸ್ಥಳವಾಗಿತ್ತು. ಈಗಲೂ ಹಾಳುಬಿದ್ದ ಕೋಟೆಯಿದೆ. ಐತಿಹಾಸಿಕ ಅಧ್ಯಯನ ನಡೆಸಬಹುದಾದಂಥ ಸ್ಥಳ.

[5] ಚಂದಾವುರ ಸೀಮೆಯ ಗುರು ಗೌಡರಾದ ಶ್ರೀ ನಾಗಪ್ಪ ಗೌಡರು ನೀಡಿದ ಹೇಳಿಕೆಯ ಮುಖ್ಯಾಂಶವನ್ನು ಇಲ್ಲಿ ಕೊಡಲಾಗಿದೆ.

[6] ಒಮ್ಮೆ ಹವ್ಯಕ ಮಠಾಧೀಶ್ವರರಿಗೂ, ಹಾಲಕ್ಕಿ ಗುರು ಗೌಡನಿಗೂ ವಿವಾದವಾಯಿತಂತೆ. ಒಂದು ಕಾಲದಲ್ಲಿ ಹಾಲಕ್ಕಿ ಒಕ್ಕಲಿಗರು ತಮ್ಮ ಮಠಕ್ಕೆ ಕಾಣಿಕೆ ನೀಡುತ್ತಿದ್ದರು. ಈಗಲೂ

ಫಲಗಳನ್ನು ಅರ್ಪಿಸಬೇಕು. ಚಪ್ಪರ ಕೂಟದಲ್ಲಿ (ಸೀಮೆ ಸಭೆ) ಗುರುಗೌಡನಿಗೆ ಉನ್ನತ ಸ್ಥಾನ ಇದೆ. ಗುರುಗೌಡನ ಅಂಕಿತದಲ್ಲಿ ಕೆಲವು ಹಳ್ಳಿಗಳಿರುತ್ತವೆ. ಆ ಹಳ್ಳಿಗಳಿಗೆ ಗುರುಗೌಡನೇ ಊರ ಗೌಡನೂ ಹೌದು. ಗುರುವಿನ ಸಮ್ಮತಿಯಿಂದ ಮಾತ್ರ ವಿಧವಾ ವಿವಾಹ ಸಾಧ್ಯ.

ಹಾಲಕ್ಕಿ ಒಕ್ಕಲಿಗರಲ್ಲಿ ಇದ್ದಂತೆ, ಜಿಲ್ಲೆಯ ಇತರ ವರ್ಗಗಳಾದ ಮುಕ್ರಿ, ಗಾಮವೊಕ್ಕಲಿಗರಲ್ಲಿ ಗುರುವಿನ ಪಟ್ಟ ಇಲ್ಲದೆ ಇರುವುದು ಇಲ್ಲಿ ಗಮನಿಸಬೇಕಾದ ವಿಷಯ. ಚಂದಾವರ ಸೀಮೆಯ ಗುರುಗೌಡ ನಾಗಪ್ಪಗೌಡ. ಈತ ತಲಗೆರೆ ಎಂಬ ಗ್ರಾಮದಲ್ಲಿ ಇರುತ್ತಾನೆ. ಈತನ ಬಳಿ ಒಂದು ತಾಮ್ರಶಾಸನವಿದೆ. ಕೆಳದಿ ಶಿವಪ್ಪನಾಯಕನ ರುಜು ಇರುವ ಈ ಶಾಸನ ಈ ದಿಸೆಯಲ್ಲಿ ಹೆಚ್ಚಿನ ಬೆಳಕು ಬೀರುವುದು. 'ಮೊಗಲರ ದಂಡು ದಕ್ಷಿಣಕ್ಕೆ ಬಂದಾಗ, ಕೆಲವು ಮೊಗಲ ಸೈನಿಕರನ್ನು ಹಾಲಕ್ಕಿಗಳು ಸೆರೆಹಿಡಿದು ಮಿರ್ಜಾನಿಗೆ[7] ಪುಟೇನಾಯಕನಿಗೆ ಒಪ್ಪಿಸಿದರು. ಪುಟೇನಾಯಕ ಈ ಹಾಲಕ್ಕಿಗಳನ್ನು ಕೆಳದಿ ಶಿವಪ್ಪನಾಯಕನಿಗೆ ಭೇಟಿ ಮಾಡಿಸಿದ. ಶಿವಪ್ಪನಾಯಕ ಸಂತೋಷದಿಂದ ಹಾಲಕ್ಕಿಗಳ ಮುಖ್ಯಸ್ಥನ ಕುರಿತಾಗಿ 'ಬೇಕಾದ್ದು ಬೇಡಿಕೋ' ಎಂದ. ಆಗ ಅವನು ತನ್ನ ಜಾತಿಗೇ ತಾನು ಗುರುವಾಗಿ ಅಗ್ರಸ್ಥಾನವನ್ನು ಪಡೆಯಲು ಇಚ್ಛಿಸಿದ. ಶಿವಪ್ಪ ನಾಯಕ ಈ ಬೇಡಿಕೆಯನ್ನು ಮನ್ನಿಸಿ, ತಲಗೆರೆ ಗ್ರಾಮವನ್ನು ಉಂಬಳಿಯಾಗಿ ನೀಡಿದ,' ಎಂಬುದು ಈ ಶಾಸನದ ಮುಖ್ಯಾಂಶ. ಅಂದರೆ ಗುರುಪಟ್ಟ ಈ ವರ್ಗಕ್ಕೆ ಶಿವಪ್ಪನಾಯಕನಿಂದ ಕೊಡಲ್ಪಟ್ಟಿತು ಎಂದು ತಿಳಿಯುವುದು. ಈ ಹೇಳಿಕೆಯನ್ನು ಗಮನಿಸಿದಾಗ, ಶಿವಪ್ಪನಾಯಕನ ಕಾಲದಿಂದ 'ಗುರು' ಎಂಬ ಅಧಿಕಾರಿ ಇವರಲ್ಲಿ ಬಂದಿರಬೇಕು ಎಂದು ತಿಳಿಯುವುದು. ಈ ಹೇಳಿಕೆಯನ್ನು ಸಮರ್ಥಿಸುವ ಕೆಲವು ಹೇಳಿಕೆಗಳೂ ನನ್ನ ಸಂಗ್ರಹದಲ್ಲಿವೆ. ಇವರು ಕೆಲವು ಕಾಲ ಹವ್ಯಕ ಮಠಾಧೀಶ್ವರರ ಅಂಕಿತದಲ್ಲಿಯೂ, ಕೆಲವು ಕಾಲ ಜೈನಗುರುಗಳ[8] ಅಂಕಿತಲ್ಲಿಯೂ

ನೀಡಬೇಕು ಎಂದು ಹವ್ಯಕ ಮಠಾಧೀಶ್ವರರು ಹೇಳಿದರಂತೆ. ಇಬ್ಬರಲ್ಲೂ ಭಿನ್ನಾಭಿಪ್ರಾಯ ಮೂಡಿತು. ಧಾರೇಶ್ವರದ ಬಳಿ ಸತ್ತ್ವಪರೀಕ್ಷೆ ನಡೆಯಿತಂತೆ.

ಹವ್ಯಕ ಮಠಾಧೀಶ್ವರರು ಮೆಣಸಿನ ಚಟ್ನಿಯ ಏಳು ಮುದ್ದೆಗಳನ್ನುಮಾಡಿ, ತಿನ್ನಲು ಹೇಳಿದರಂತೆ. ಹಾಲಕ್ಕಿ-ಗುರು ಐದು ಮುದ್ದೆಗಳನ್ನು ತಿಂದು ಮುಗಿಸುವಾಗ, 'ನೀನೇ ನಿನ್ನ ಸಮಾಜಕ್ಕೆ ಗುರು' ಎಂದರಂತೆ. ಆ ಮೆಣಸಿನ ಮುದ್ದೆಗಳನ್ನು ತಿಂದು ಗುರುಗೌಡ ಮರಣ ಹೊಂದಿದ. ಅವನ ಸ್ಮಾರಕಕ್ಕಾಗಿ ಕಟ್ಟಿದ ಕಟ್ಟೆ ಗುರುಕಟ್ಟೆ. ಇದು ತಲಗೆರೆ ಗ್ರಾಮದಲ್ಲಿದೆ.

[7] ಕುಮಟೆಯಿಂದ ಆರೇಳು ಮೈಲಿ ದೂರದಲ್ಲಿ ಮಿರ್ಜಾನಿಗೆ ಇದೆ. ಇಲ್ಲಿ ಐತಿಹಾಸಿಕ ಕೋಟೆಯಿದೆ.

[8] ಹಾರೋಹಿ ಗೋಯ್ದುಗೌಡರ ಅಜ್ಜನ ಕಾಲದಲ್ಲಿ ಒಬ್ಬ ಜೈನ ಸನ್ಯಾಸಿಗಳು ಬಂದು, ಸೀಮೆ ಬುದವಂತನಿಗೆ ಕರೆಕಳಿಸಿದರಂತೆ. ವರ್ಷಂಪ್ರತಿ ಪ್ರತಿಯೊಬ್ಬರೂ ನಾಲ್ಕಾಣೆ ಕಾಣಿಕೆ ಸಲ್ಲಿಸಬೇಕೆಂದೂ ಅದು ಹಿಂದಿನಿಂದ ಬಂದ ಪದ್ಧತಿಯೆಂದೂ ಹೇಳಿದರಂತೆ. ಈ ಗೌಡ, ನಾನೊಬ್ಬನೇ ಏನೂ ಹೇಳಲಾರೆ, ಸಮಾಜ ಒಪ್ಪಿದರೆ ಅಡ್ಡಿಯಿಲ್ಲ ಎಂದು ಹೇಳಿ ಸಭೆ ಕರೆದನಂತೆ. ಸಭೆಯ ಸದಸ್ಯರು ಕಾಣಿಕೆ ಕೊಡಲು ನಿರಾಕರಿಸಿದರು. ಆ ನಿರ್ಣಯವನ್ನು ಬುದವಂತ ಜೈನ ಗುರುಗಳಿಗೆ ತಿಳಿಸಿದನೆಂದೂ ಮುಂದೆ ಅದೇ ಕಾರಣದಿಂದಲೇ ಮೃತಪಟ್ಟನೆಂದೂ ಜನ ಹೇಳುತ್ತಿದ್ದರು ಎಂಬುದಾಗಿ ಪ್ರಮುಖರ ಅಭಿಪ್ರಾಯ.

ಇದ್ದರಂತೆ. ಪ್ರಾಯಶಃ ತಮ್ಮ ಸಮಾಜಕ್ಕೆ ಪ್ರತ್ಯೇಕ ಗುರು ಬೇಕೆಂದು ಇವರಿಗೆ ಅನಿಸಿರಬೇಕು. ಆದ್ದರಿಂದಲೇ 'ಗುರು' ಪಟ್ಟವನ್ನು ಶಿವಪ್ಪನಾಯಕನ ಬಳಿ ಕೇಳಿರಬಹುದು.

ಅರಸು ಗೌಡ : ಇಂದು ಅರಸು ಗೌಡ ಕೇವಲ ಹೆಸರಿಗೆ ಮಾತ್ರ ಎಂದು ಅನೇಕ ಹಾಲಕ್ಕಿ ಒಕ್ಕಲಿಗರು ಹೇಳುತ್ತಾರೆ. ಈತನ ಪಟ್ಟವೂ ವಂಶಪಾರಂಪರ್ಯವಾದುದು. ಈತ ಸೀಮೆಯಲ್ಲಿ ಸವಾರಿ ಹೋಗುತ್ತಿದ್ದನೆಂದು ಕೆಲವರು ಹೇಳುತ್ತಾರೆ. ಈತನ ಅಂಕಿತದಲ್ಲಿಯೂ ಕೆಲವು ಹಳ್ಳಿಗಳು ಇರುತ್ತವೆ.

ಪ್ರಧಾನಿ ಗೌಡ : ಅರಸನಿಗೆ ಸಲಹೆ ನೀಡುವುದು, ಅರಸ ಮೃತನಾದರೆ ಆ ಪಟ್ಟವನ್ನು ತುಂಬುವ ವರೆಗೆ ಅರಸನ ಕಾರ್ಯಕಲಾಪಗಳನ್ನು ನೆರವೇರಿಸುವುದು ಈತನ ಕರ್ತವ್ಯ. ಈತನ ಅಂಕಿತದಲ್ಲಿಯೂ ಕೆಲವು ಹಳ್ಳಿಗಳು ಇರುತ್ತವೆ.

ಸೀಮೆ ಬುದವಂತ : ಸೀಮೆಯ ಆಡಳಿತ ಫಲಪ್ರದವಾಗುವುದು ಈತನ ವ್ಯಕ್ತಿತ್ವವನ್ನು ಅವಲಂಬಿಸಿದೆ. ಸಾಮಾನ್ಯವಾಗಿ ಒಳ್ಳೆಯ ಮಾತುಗಾರನಾದ ಈತ ಅನುಭವಿಯೂ ಆಗಿರುತ್ತಾನೆ. ಗಾಮಪೊಕ್ಕಲಿಗರು ಮತ್ತು ಮುಕ್ರಿ ವರ್ಗಗಳಲ್ಲಿಯೂ ಬುದವಂತನ ಪಾತ್ರ ಹಿರಿದಾಗಿದೆ.

ಸೀಮೆಯ ಸಭೆಯನ್ನು ಕರೆಯುವ, ಕಾರ್ಯವಿಧಾನಗಳನ್ನು ನಿರೂಪಿಸುವ, ವಿಸರ್ಜಿಸುವ ಹಕ್ಕು ಈತನದಾಗಿರುತ್ತದೆ. ಜಾತಿಗೆ ಸಂಬಂಧಿಸಿದ ಸಾಮಾನ್ಯ ನಿರ್ಣಯವಾಗಲಿ, ಚರ್ಚೆಯಾಗಲಿ ಈತನಿಲ್ಲದೆ ನಡೆಯುವಂತಿಲ್ಲ.

ಸೀಮೆ ಕೋಲಕಾರ : ಈತ ದೂತನಂತೆ ಕಾರ್ಯವೆಸಗುತ್ತಾನೆ. ಅಧಿಕಾರಿಗಳ ಆಜ್ಞೆಯನ್ನು ಸಂಬಂಧಿಸಿದವರಿಗೆ ಮುಟ್ಟಿಸುವುದು ಈತನ ಮುಖ್ಯ ಕರ್ತವ್ಯ. ಮುಕ್ರಿ, ಗಾಮ ಪೊಕ್ಕಲಿಗ ವರ್ಗಗಳಲ್ಲಿಯೂ ಈ ಅಧಿಕಾರಿಯನ್ನು ನೋಡಬಹುದು.

ಚಪ್ಪರ ಕೂಟ : 'ಕೂಟ' ಎಂದರೆ ಸಭೆ, ಚಪ್ಪರ ಕೂಟ ವೆಂದರೆ ಸೀಮೆಯ ಸಭೆ. ಹಾಲಕ್ಕಿ ಒಕ್ಕಲಿಗರಲ್ಲಿ ಎರಡು ವರ್ಷಗಳಿಗೊಮ್ಮೆ ಚಪ್ಪರ ಕೂಟ ಕೂಡುವ ಪದ್ಧತಿ ಇತ್ತು. ಇಂದು ಈ ಅವಧಿಯನ್ನು ನಿರ್ದಿಷ್ಟವಾಗಿ ಕಾದುಕೊಂಡಿಲ್ಲ. ಚಪ್ಪರ ಕೂಟದಲ್ಲಿ ಸೀಮೆಗೆ ಸಂಬಂಧಿಸಿದ ಎಲ್ಲ ಊರುಗಳ ಊರ ಗೌಡ, ಬುದವಂತ ಗೌಡ, ಮತ್ತು ಕೋಲಕಾರರು ಉಪಸ್ಥಿತರಿರಬೇಕು. ಎಲ್ಲ ಊರುಗಳೂ ವೆಚ್ಚವನ್ನು ಸಮನಾಗಿ ಭರಿಸಬೇಕು.

ಚಪ್ಪರ ಕೂಟದಲ್ಲಿ ಅಧಿಕಾರಿಗಳು ಕೂಡುವ ಕ್ರಮ ಕುತೂಹಲಕಾರಿಯಾದುದು. ಸೀಮೆ ಬುದವಂತ ಈ ಕೂಟವನ್ನು ಕೂಡಿಸುತ್ತಾನೆ. ಸಮಾಜದ ಎಲ್ಲ ಆಗುಹೋಗುಗಳನ್ನೂ ಇಲ್ಲಿ ಚರ್ಚಿಸುತ್ತಾರೆ. ಚಪ್ಪರ ಕೂಟದ ನಿರ್ಣಯ ಎಲ್ಲ ಹಳ್ಳಿಗಳೂ ತಟ್ಟುತ್ತದೆ. ಬಹಿಷ್ಕಾರ ಕೊಡುವ ಪದ್ಧತಿ ಇತ್ತೀಚಿನ ವರೆಗೂ ಇತ್ತು ; ಈಗ ಇಲ್ಲ. ತಪ್ಪುಗಾರರಿಗೆ ದಂಡಮಾಡುವ ಪದ್ಧತಿಯೂ ಇದೆ. ಚಪ್ಪರ ಕೂಟದಲ್ಲಿ ಊರಗೌಡನಿಗೆ ದಂಡ ಮಾಡಿದ ಉದಾಹರಣೆಯೂ ಇದೆ. ಸದಸ್ಯರು ನಿರ್ಭೀತಿಯಿಂದ ಚರ್ಚಿಸಬಹುದು. ಸೀಮೆಯ ಅಧಿಕಾರಿಗಳ ವರ್ತನೆಯನ್ನು ನಿರ್ದಾಕ್ಷಿಣ್ಯವಾಗಿ ಟೀಕಿಸಬಹುದು. ಸಾಕ್ಷಿ ಒದಗಿಸುವ ಪದ್ಧತಿಗೂ ಅವಕಾಶ ಇದೆ. ರಾಜಕೀಯ–ಸಾಮಾಜಿಕ, ಆರ್ಥಿಕ, ಧಾರ್ಮಿಕ ಪ್ರಶ್ನೆಗಳನ್ನೂ, ವ್ಯಕ್ತಿಗತ ಪ್ರಶ್ನೆಗಳನ್ನೂ ಚರ್ಚಿಸಬಹುದು. ಒಮ್ಮೆ

ಯಂತೂ, ಗುರು ಗೌಡ ಊರ ಗೌಡನ ಅಧಿಕಾರ ಕ್ಷೇತ್ರದಲ್ಲಿ ಅನಧಿಕೃತವಾಗಿ ಪ್ರವೇಶಿಸಿದನೆಂಬ ಆರೋಪ ಹೊರಿಸಿದ್ದರು.

ಚರ್ಚೆಯ ವಿಧಾನ : ಯಾವುದೇ ಸಮಸ್ಯೆಯನ್ನು ಮೊದಲು ಸಂಬಂಧಿಸಿದವರು ಸೀಮೆ ಬುದವಂತನಿಗೆ ತಿಳಿಸಬೇಕು. ಆತ ಆ ಪ್ರಶ್ನೆ ಸೀಮೆ ಕೂಟದಲ್ಲಿ ಚರ್ಚಿಸಲ್ಪಡಬಹುದೇ ಇಲ್ಲವೇ ಎಂದು ನಿರ್ಧರಿಸುತ್ತಾನೆ. (ಆದರೆ ಸದಸ್ಯರು ಚರ್ಚಿಸಲೇಬೇಕೆಂದು ಪಟ್ಟು ಹಿಡಿದರೆ ಸೀಮೆ ಬುದವಂತ ಒಪ್ಪಲೇಬೇಕು.) ಅನಂತರ ಇಂಥ ಒಂದು ಸಮಸ್ಯೆ ಇದೆ ಎಂದು ಸಂಬಂಧಿಸಿದ ಸದಸ್ಯರ ವರದಿಯನ್ನು ಮಂಡಿಸುತ್ತಾನೆ. ಸಂಬಂಧಿಸಿದವರಿಗೆ ಪ್ರಶ್ನೆಗಳನ್ನು ಕೇಳುತ್ತಾನೆ. ಅಂತೂ ಸತ್ಯ ಸಂಗತಿ ತಿಳಿದುಕೊಳ್ಳಲು ಪ್ರಯತ್ನಿಸುತ್ತಾನೆ. ಚರ್ಚೆವಿಚರ್ಚೆಗಳು ಆದನಂತರ, ತಪ್ಪಿಗೆ ತಕ್ಕ ಶಿಕ್ಷೆ ವಿಧಿಸುವಲ್ಲಿ ಕೂಡ ಸೀಮೆ ಬುದವಂತನೇ ಮುಖ್ಯ. ಹಿಂದಿನ ಅಂಥ ಪ್ರಸಂಗಗಳ ಉದಾಹರಣೆಯೊಡನೆ ಈ ರೀತಿ ಶಿಕ್ಷೆ ವಿಧಿಸಬಹುದೆಂದು ಸೂಚಿಸುತ್ತಾನೆ, ಪ್ರಧಾನಿಗೆ. ಪ್ರಧಾನಿ ಅದನ್ನು ಒಪ್ಪಬಹುದು ಇಲ್ಲವೆ ಪುನಃ ಸೀಮೆ ಬುದವಂತನೊಡನೆ ಚರ್ಚಿಸಬಹುದು. ಅನಂತರ ತಪ್ಪುಗಾರನಿಗೆ ಈ ರೀತಿ ಶಿಕ್ಷೆ ವಿಧಿಸು ಎಂದು ಪ್ರಧಾನಿ ಅರಸನಿಗೆ ಹೇಳುತ್ತಾನೆ. ಈ ಶಿಕ್ಷೆ ಗುರು ಗೌಡನ ಮುಖೇನ ಉಚ್ಚಾರವಾಗಬೇಕು. ಅಂದರೆ ಗುರು ಗೌಡ, ಸಭೆಯ ನಿರ್ಣಯದಂತೆ ಈ ರೀತಿ ತಪ್ಪುಗಾರನಿಗೆ ಶಿಕ್ಷೆ ವಿಧಿಸಿದ್ದೇವೆ ಎಂದು ಹೇಳುತ್ತಾನೆ. ತಪ್ಪುಗಾರನಿಗೆ ದಂಡಮಾಡಿದರೆ, ಆ ದಂಡದ ಮೊಬಲಗನ್ನು ಆತ ಅರಸನಿಗೆ ಅರ್ಪಿಸುತ್ತಾನೆ. ಈ ರೀತಿ ಚಪ್ಪರ ಕೂಟದ ಕಾರ್ಯವಿಧಾನ ಸಾಗುವುದು.

ಚಪ್ಪರ ಕೂಟದಲ್ಲಿ ಮೇಲಿನ ಅಧಿಕಾರಿಗಳಲ್ಲದೆ ಚಾಪೆ ಹಾಸುವ, ಊಟಕ್ಕೆ ಬಡಿಸುವ ಕಾರ್ಯಗಳನ್ನು ನಿರ್ದಿಷ್ಟ ಮನೆತನಗಳು ನೋಡಿಕೊಳ್ಳುತ್ತವೆ.

ಊರ ಆಡಳಿತ

ಪ್ರತಿ ಊರಿನಲ್ಲಿಯೂ ಊರ ಗೌಡ, ಊರ ಬುದವಂತ, ಮತ್ತು ಕೋಲಕಾರ ಎಂಬ ಅಧಿಕಾರಿಗಳು ಇರುತ್ತಾರೆ.

ಊರ ಗೌಡ : ಈತ ಊರಿಗೇ ಮುಖ್ಯಸ್ಥ. ಈ ಸಮಾಜಕ್ಕೆ ಸಂಬಂಧಿಸಿದ ಸಾಮಾನ್ಯ ವಿಷಯಗಳು ಚಪ್ಪರ ಕೂಟದಲ್ಲಿ ಚರ್ಚಿತವಾಗಬಹುದು. ಆದರೆ ಒಂದು ಊರಿಗೆ ಸಂಬಂಧಿಸಿದ ವಿಷಯಗಳನ್ನು ಊರ ಗೌಡನೇ ಊರ ಕೂಟದಲ್ಲಿ ನಿರ್ಣಯಿಸುವ ಅಧಿಕಾರಿ. ಊರ ಗೌಡ ಈ ಪಟ್ಟವನ್ನು ಗುರುವಿನಿಂದ ಪಡೆಯಬೇಕು. ಅಂದರೆ, ಊರ ಗೌಡನ ಮರಣದ ಅನಂತರ ಆತನ ಮಗನನ್ನು ಗೌಡನೆಂದು ಗುರು ಪರಿಗಣಿಸಬೇಕು. ಪಟ್ಟ ವಂಶಪಾರಂಪರ್ಯವಾದುದರಿಂದ ಗುರುಗೌಡ ಆತನ ಮಗನ ಹೊರತು ಇತರರನ್ನು ನೇಮಿಸಲು ಬರುವಂತಿಲ್ಲವೆಂಬುದನ್ನು ಇಲ್ಲಿ ಗಮನದಲ್ಲಿಡಬೇಕು. ಊರಿನಲ್ಲಿ ನಡೆಯುವ ಎಲ್ಲ ಮದುವೆಯಲ್ಲಿ ಊರ ಗೌಡನೇ ನೇತೃತ್ವ ವಹಿಸಬೇಕು. ಜವುಳಿ ತರುವ ದಿನದಿಂದ ಹಿಡಿದು ಮದುವೆ ಮುಗಿಯುವ ವರೆಗೂ ಆತನ ಯಾ ಆತನ ಪ್ರತಿನಿಧಿಯ ಹಾಜರಾತಿ ಅವಶ್ಯ. ಇದಕ್ಕೆ ಪ್ರತಿಯಾಗಿ ಮದುವೆಯ ಎರಡೂ ಕಡೆಯವರು ಉಡುಗೊರೆಗಳನ್ನು ಈತನಿಗೆ ನೀಡುತ್ತಾರೆ.[9] ಗಂಗಾಷ್ಟಮಿ, ದೀಪಾವಳಿ ಪಾಡ್ಯಗಳಂದು

---

[9] 'ಹಾಲಕ್ಕಿ ಒಕ್ಕಲಿಗರ ಮದುವೆ ಪದ್ಧತಿ', 'ಜಾನಪದ' ಸಂ ೫, 32-44

ಬೇಟೆಯಾಡಲು ಹೋಗುವಾಗ ಊರ ಗೌಡನೇ ಮುಂದಾಳು. ಬೇಟೆಯಲ್ಲಿ ಮೃಗಗಳನ್ನು ಕೊಂದರೆ ಈತನಿಗೆ ಒಂದು ವಿಶಿಷ್ಟಪಾಲು ಇದೆ. ಸುಗ್ಗಿಯಲ್ಲಿ ಕರೀಗುತ್ತಿನ ಪೂಜೆಯನ್ನು ಮಾಡುವುದೂ ಈತನದೇ ತೇಜ.[10] ಗೌಡನ ಕುಂಚವೆಂಬ ಒಂದು ಕುಂಚವೂ ಇದೆ. ಹಗಣದಲ್ಲಿ[11], ಬೇರೆ ಹಾಲಕ್ಕಿ ಊರುಗಳಿಂದ ಆಮಂತ್ರಣ ಬಂದಲ್ಲಿ, ಊರ ಗೌಡನೇ ತನ್ನ ಊರಿನ ಕೆಲವರನ್ನು ಕಳಿಸಬೇಕು, ಪಾತ್ರಧಾರಿಗಳಾಗಿ. ಚಪ್ಪರ ಕೂಟಕ್ಕೆ ತನ್ನೂರಿನಿಂದ ಸಲ್ಲಿಸಬೇಕಾದ ಅಕ್ಕಿ-ತೆಂಗಿನಕಾಯಿ ಮುಂತಾದವನ್ನು ಜನರಿಂದ ಸಂಗ್ರಹಿಸಿ, ಸಂಬಂಧಿಸಿದವರಿಗೆ ತಲುಪಿಸುವ ಭಾರ ಈತನದು. ಸುಗ್ಗಿಯಲ್ಲಿ ಬೇರೆ ಊರಿನವರು ಮೇಳ ತಂದಾಗ, ತನ್ನ ಮನೆಯಲ್ಲಿ ಕುಣಿಸಿ, ಅಂದು ಊಟ ಹಾಕುವ ಕರ್ತವ್ಯವೂ ಇವನದೇ ಆಗಿರುತ್ತದೆ. ಅಲ್ಲದೆ ತನ್ನೂರಿನ ಸುಗ್ಗಿಯ ಮುಖಂಡನಾಗಿ ಹೋಗಬೇಕು, ಇಲ್ಲವೆ ತನ್ನ ಪ್ರತಿನಿಧಿಗಳನ್ನು ಕಳಿಸಬೇಕು. ಊರಿನಲ್ಲಿ ವರ್ಷಂಪ್ರತಿ ನಡೆಯುವ ಸಾಮಾಜಿಕ ಧಾರ್ಮಿಕ ಕಾರ್ಯಗಳನ್ನು ಈತನೇ ಮುಂದಾಗಿ ನಿರ್ವಹಿಸುತ್ತಾನೆ. ಆದರೆ ಈತ ತಾನೇ ತಾನಾಗಿ ವರ್ತಿಸಲು ಬರುವುದಿಲ್ಲ. ಊರ ಕೂಟದಲ್ಲಿ ಸಭಾಸದಸ್ಯರ ನಿಂದೆಗೆ ಒಳಗಾಗಬಹುದಾದ ಪ್ರಸಂಗಗಳೂ ಇವೆ.

ಊರ ಬುದವಂತ : ಸೀಮೆಗೆ ಸೀಮೆ ಬುದವಂತನಿದ್ದಂತೆ ಊರಿಗೆ ಊರ ಬುದವಂತ ಇರುತ್ತಾನೆ. ಈತ ಊರ ಗೌಡನ ಸರಿಸಾಟಿಯಾಗಿ, ಆತನಿಗೆ ಬಲ ಭುಜದಂತೆ ನಿಂತು, ಆತನಿಗೆ ಸಲಹೆಗಳನ್ನು ನೀಡುತ್ತಾನೆ. ಸಾಮಾನ್ಯವಾಗಿ ಊರ ಗೌಡನ ತಪ್ಪು ಈತನ ತಪ್ಪು ಎಂಬ ಅಭಿಪ್ರಾಯವಿದೆ. ದೂತನ ಕೆಲಸವನ್ನು ಊರ ಕೋಲಕಾರ ನಿರ್ವಹಿಸುತ್ತಾನೆ.

ಪ್ರತಿ ಊರಿಗೂ ಊರ ಕೂಟವಿರುತ್ತದೆ. ಈ ಕೂಟಕ್ಕೆ ಸಾಮಾನ್ಯವಾಗಿ ಜಾತಿ ಕೂಟ ಎಂದೂ ಹೇಳುತ್ತಾರೆ. ವಿಧವೆ ಅಥವಾ ಕುಮಾರಿ ಗರ್ಭಿಣಿಯಾಗುವುದನ್ನು ತೀರ ಗಂಭೀರವಾಗಿ ಪರಿಗಣಿಸುತ್ತಾರೆ. ಅಂಥವರಿಗೆ ಊರ ಕೂಟ ಬಹಿಷ್ಕಾರ ನೀಡಿದ ನಿದರ್ಶನಗಳು ಇವೆ. ಈ ಕೂಟ ಸಾಮಾನ್ಯವಾಗಿ ಊರ ಗೌಡನ ಮನೆಯಲ್ಲಿಯೇ ಕೂಡುತ್ತದೆ. ಮನೆಗೊಬ್ಬರಂತೆ (ಮುಖ್ಯವಾಗಿ ಮನೆಯ ಯಜಮಾನ) ಈ ಕೂಟದಲ್ಲಿ ಭಾಗವಹಿಸಬೇಕು. ಇಲ್ಲದಿದ್ದರೆ, ಸಭೆ ಅಂಥವರಿಗೆ ಶಿಕ್ಷೆ ವಿಧಿಸುವುದು. ಊರಿನ ಎಲ್ಲ ವಯಸ್ಕ ಗಂಡಸರೂ ಸಭೆಗೆ ಸದಸ್ಯರಾಗಿ ಬರಬಹುದು.

ಈ ಪದ್ಧತಿ ಮುಕ್ರಿ ಮತ್ತು ಗಾಮೊಕ್ಕಲು ವರ್ಗಗಳಲ್ಲಿಯೂ ಇದೆ. ಸಭೆಯೇ ಇವರ ಕಾರ್ಯಾಂಗ ಮತ್ತು ನ್ಯಾಯಾಂಗ. ಸಭೆಯೇ ಇವರ ಶಾಸಕಾಂಗವೂ ಹೌದು. ಅಧಿಕಾರಿಗಳ ನಿರಂಕುಶತ್ವವನ್ನು ಪದ್ಧತಿ ಹತ್ತಿಕ್ಕುತ್ತದೆ. ಊರ ಕೂಟದ ಕ್ಷೇತ್ರಗಾತ್ರ ಕಿರಿದಾಗಿರುವುದರಿಂದ, ಅಪರಾಧಿಗಳು ಸಾಕ್ಷಿ ಒದಗಿಸುವ ಪ್ರಸಂಗವೇ ಬರುವುದಿಲ್ಲ. ಏಕೆಂದರೆ, ಸದಸ್ಯರೆಲ್ಲರಿಗೂ ಅಪ

---

[10] 'ಹಾಲಕ್ಕಿ ಪಾಯಸ', ಸಂ. ಎಲ್.ಜಿ. ಭಟ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಪು. 12-18

[11] ಅದೇ, ಪು 3-8 ಮತ್ತು 'ಪಗರಣ (ಹಗರಣ) ಇತಿಹಾಸದಲ್ಲಿ ಮತ್ತು ಸಮಕಾಲೀನದಲ್ಲಿ' (ಸಂಶೋಧನೆ), ಎಂ. ಚಿದಾನಂದಮೂರ್ತಿ, ಪ್ರಬುದ್ಧ ಕರ್ಣಾಟಕ, ಸಂ. 55, ಸಂ. 4, ಪು. 61-63

ರಾಧಿ ಯಾರು, ಅಪರಾಧ ಏನು, ಮುಂತಾದವು ಗೊತ್ತಿರುತ್ತವೆ. ಹೀಗಾಗಿ ಸುಳ್ಳನ್ನು ನಿಜಪಡಿಸುವ, ನಿಜವನ್ನು ಸುಳ್ಳೆಂದು ಸಾಧಿಸುವ ಪ್ರವೃತ್ತಿ ಈ ಕೂಟದ ಮಟ್ಟಿಗೆ ಇಲ್ಲವೆಂದೇ ಹೇಳಬಹುದು. ಯಾವುದೇ ಒಂದು ಅಪರಾಧದ ಸಮಸ್ಯೆಗೆ ಕೂಟದಲ್ಲಿ ಭಿನ್ನಾಭಿಪ್ರಾಯ ಬಂದರೆ, ಅಥವಾ ನಿರ್ಣಯ ನೀಡಲು ಅಶಕ್ಯವಾದರೆ, ಸಂಬಂಧಿಸಿದವರು ದೇವರ ಮುಂದೆ ನಿಂತು ಪ್ರಮಾಣ ಮಾಡಬೇಕಾಗುತ್ತದೆ. ಚಂದಾವುರದ ಸೀಮೆಯ ಹಾಲಕ್ಕಿ ಒಕ್ಕಲಿಗರು ಚಂದಾವುರದ ಹನುಮಂತ ದೇವಸ್ಥಾನದಲ್ಲಿ ಹನುಮಂತನ[12] ಮುಂದೆ ನಿಂತು ಪ್ರಮಾಣ ಮಾಡಬೇಕು.

ಸೀಮೆ ಆಡಳಿತದಲ್ಲಾಗಲಿ, ಊರ ಆಡಳಿತದಲ್ಲಾಗಲಿ ಸ್ತ್ರೀಯರಿಗೆ ಸ್ಥಾನವಿಲ್ಲ. ಸ್ತ್ರೀಯರು ಸಭಾಸದಸ್ಯರಾಗಲಾರರು. ಮದುವೆ ಮುಂತಾದ ಕಾರ್ಯಗಳಲ್ಲಿ ಅಧಿಕಾರಿಗಳ ಪತ್ನಿಯರಿಗೆ ವಿಶೇಷ ಉಡುಗೊರೆಗಳು ಇವೆ. ಮದುಮಗಳಿಗೆ ಸ್ನಾನಮಾಡಿಸಿ ತಲೆಗೆ ಎಣ್ಣೆಹಚ್ಚಿ ತಲೆಬಾಚುವ ಕೆಲಸ ಅನುಕ್ರಮವಾಗಿ ಊರ ಗೌಡ, ಊರ ಬುದವಂತ, ಊರ ಕೋಲಕಾರ ಇವರ ಹೆಂಡಂದಿರದು.

ಸೀಮೆ ಕೂಟದಲ್ಲಾಗಲಿ, ಊರ ಕೂಟದಲ್ಲಾಗಲಿ ಎಲ್ಲ ಸದಸ್ಯರೂ ಸರಿಸಮಾನ ಹಕ್ಕು ಬಾಧ್ಯತೆಗಳನ್ನು ಪಡೆಯುತ್ತಾರೆ. ರಾಜಕೀಯ ಸಮಾನತೆ ಇಲ್ಲಿ ಎದ್ದುಕಾಣುವ ಮುಖ್ಯ ವೈಶಿಷ್ಟ್ಯವಾಗಿದೆ.

ಸೀಮೆಯ ಯಾ ಊರಿನ ಅಧಿಕಾರಿಗಳು ಮೃತರಾದಾಗ ಅವರ ಮಕ್ಕಳನ್ನು ಆ ಹುದ್ದೆಗೆ ತರುವಾಗ ಅನುಸರಿಸುವ ಅನೇಕ ವಿಧಾನಗಳು ಇವೆ. ಪುಣ್ಯೋದಕದ ಸ್ನಾನವಾಗಬೇಕು. ಸಭೆ ಸೇರಬೇಕು. ಸಭೆಯಲ್ಲಿ ಇತರ ಸದಸ್ಯರು ಮತ್ತು ಅಧಿಕಾರಿಗಳ ಎದುರು ಮೃತನ ಮಗ ತಂದೆಯ ಸ್ಥಳವನ್ನು ಅಲಂಕರಿಸಬೇಕು. ಆಗ ಇವನು ಅವರದೇ ಆದ ರೀತಿಯಲ್ಲಿ ಪ್ರತಿಜ್ಞಾ ಸ್ವೀಕಾರವನ್ನೂ ಕೈಗೊಳ್ಳಬೇಕು.

ಒಬ್ಬ ಅಧಿಕಾರಿ ದಕ್ಷನಾಗಿರಲಿ, ಇಲ್ಲದಿರಲಿ, ಆತನನ್ನು ಅಧಿಕಾರದಿಂದ ಕಿತ್ತೆಸೆಯಲು ಜನರಿಗಾಗಲಿ, ಇತರ ಅಧಿಕಾರಿಗಳಿಗಾಗಲಿ, ಸಭೆಗಾಗಲಿ ಅಧಿಕಾರವಿಲ್ಲ. ಇತರರು ಅವನಿಗೆ ಮಾರ್ಗದರ್ಶನ ನೀಡಿ, ಕಾರ್ಯ ನಿರ್ವಹಿಸಬೇಕು. ಇದರಿಂದಾಗಿ ಒಬ್ಬನ ಸ್ಥಾನವನ್ನು ತಾನು ಗಿಟ್ಟಿಸಬೇಕೆಂಬ ದುರಾಶೆಗಾಗಲಿ, ಸ್ಪರ್ಧೆಗಾಗಲಿ ಇಲ್ಲಿ ಅವಕಾಶವೇ ಇಲ್ಲ. ಇದರಿಂದಾಗಿ, ಆಡಳಿತ ವ್ಯವಸ್ಥೆ ಸುಗಮವಾಗಿ ಸಾಗುವುದು. ಹೀಗೆ ಅನೇಕ ಗುಣಾವಗುಣಗಳನ್ನೊಳಗೊಂಡ ಒಂದು ಆಡಳಿತ ಪದ್ಧತಿಯನ್ನು ಹಾಲಕ್ಕಿ ಒಕ್ಕಲಿಗರಲ್ಲಿ ನೋಡಬಹುದು.

---

12 ಚಂದಾವುರ ಸೀಮೆಯ ಹಾಲಕ್ಕಿ ಒಕ್ಕಲಿಗರಿಗೆ ಚಂದಾವುರದ ಹನುಮಂತ ಕುಲದೇವರು. ವಡಗೇರೆ ಎಂಬ ಗ್ರಾಮದಲ್ಲಿ ಒಮ್ಮೆ ಒಬ್ಬ ತರಗೆಲೆಗಳನ್ನು ತರಲು ಬೆಟ್ಟಕ್ಕೆ ಹೋಗಿದ್ದನಂತೆ. ಅವನು ತರಗೆಲೆಗಳನ್ನು ತುಂಬುವಾಗ, ಆ ಬಲೆಯಲ್ಲಿಯೇ (ಕಲ್ಲಿ) ಹನುಮಂತನ ಮೂರ್ತಿ ಸೇರಿತೆಂದೂ ಅವನಿಗೆ ಅತಿ ಭಾರವಾಗಿ, ಕಾರಣವನ್ನು ನೋಡಲಾಗಿ, ಆ ಮೂರ್ತಿಯೇ ಅಷ್ಟು ಭಾರವಾಗಿತ್ತೆಂದೂ ಅನಂತರ ಊರ ಜನರೆಲ್ಲಾ ಕೂಡಿ ಅದಕ್ಕೆ ದೇಗುಲ ಕಟ್ಟಿಸಿದರೆಂದೂ ಅಂದಿನಿಂದ ಈ ಹಾಲಕ್ಕಿ ಒಕ್ಕಲಿಗರಿಗೆ ಹನುಮಂತ ಕುಲದೇವನಾದನೆಂದೂ ಪ್ರತೀತಿ ಇದೆ. ಇಂದಿಗೂ ಈ ಗುಡಿಯ ಮೇಲ್ವಿಚಾರಕರು ಈ ಒಕ್ಕಲಿಗರು. ಈ ದೇವನ ಸವಾರಿ ಮುಖ್ಯವಾಗಿ ಹಾಲಕ್ಕಿ ಒಕ್ಕಲಿಗರ ಮನೆಗೆ ವರ್ಷಕ್ಕೊಮ್ಮೆ ಬಂದೇ ಬರುತ್ತದೆ.

ಪ್ರತಿಯೊಂದು ಸಮಾಜವೂ ಪರಿವರ್ತನಶೀಲವಾದುದು. ಆದರೆ ಹಲವು ಆದಿವಾಸಿ ಸಮಾಜಗಳಲ್ಲಿ ಸಂಪ್ರದಾಯದ ಪ್ರಭಾವವು ಹೆಚ್ಚಾಗಿರುವುದರಿಂದ, ಅವುಗಳಲ್ಲಿ ಯಾವ ಬದಲಾವಣೆಯೂ ಆಗುತ್ತಿಲ್ಲವೆಂಬ ಭಾವನೆ ಮೂಡುತ್ತದೆ. ಆದರೆ ಸೂಕ್ಷ್ಮವಾಗಿ ಪರಿಶೀಲಿಸಿದರೆ ಅವುಗಳಲ್ಲಿಯೂ ಬದಲಾವಣೆಗಳು ಗೋಚರಿಸುತ್ತವೆ. ಅವುಗಳ ತೀವ್ರತೆ ಮತ್ತು ವ್ಯಾಪಕತೆಗಳು ಆಧುನಿಕ ಸಮಾಜದಲ್ಲಿರುವಷ್ಟು ಇರುವುದಿಲ್ಲ. ಇಂದಿನ ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳ ವೇಗವು ಸಾಮಾಜಿಕ ಪರಿವರ್ತನೆಯು ಆಧುನಿಕ ಸಮಾಜದಲ್ಲಿ ಮಾತ್ರ ನಡೆಯುತ್ತಿರುವ ವಿಷಯವೆಂಬ ಭ್ರಾಂತಿಯನ್ನು ಮೂಡಿಸುತ್ತದೆ. ಈ ಅನಂತ ಬದಲಾವಣೆಗಳು ನಮ್ಮನ್ನು ದಿಗ್ಭ್ರಮೆಗೊಳಿಸಿ ಸಮಾಜವು ಗುರಿ ಇಲ್ಲದ ಚಲನೆಗೆ ತುತ್ತಾಗಿದೆ ಎಂಬ ಭಾವನೆಯನ್ನು ಮೂಡಿಸುತ್ತವೆ. ಆದರೆ ಪ್ರತಿಯೊಂದು ಸಮಾಜದಲ್ಲಿ ಬದಲಾವಣೆಯು ಹೇಗೆ ನೈಜವೋ, ಹಾಗೆಯೇ ಸ್ಥಿರತೆಯ ಅಂಶ ಅದರ ಜೀವನದ ಹಾಸುಹೊಕ್ಕಾಗಿರುತ್ತದೆ. ಸಮಾಜವು ನಿತ್ಯ ಪರಿವರ್ತನಶೀಲವಾದರೂ, ಅದರ ಸಂಗಡ ಸ್ಥಿರತೆಯು ಅದರ ಅವಿಭಾಜ್ಯ ಅಂಶವಾಗಿರುತ್ತದೆ. ಸಮಾಜವು ವಿವಿಧ ನಿಯಂತ್ರಣ ಸಾಧನಗಳ ಮೂಲಕ ತನ್ನ ಸ್ಥಿರತೆಯನ್ನು ಕಾಪಾಡಿಕೊಂಡು ಬರುತ್ತದೆ. ಸಮಾಜದ ಸಮಸ್ಥಿತಿಯು ಚಲನಾತ್ಮಕವಾದುದು. ಅದು ನಿರ್ಜೀವ ವಸ್ತುವಿನ ಜಡ ಸಮಸ್ಥಿತಿಯಲ್ಲ. ಸಮಾಜವು ನಿತ್ಯಪರಿವರ್ತನ ಶೀಲವಾದ ಪ್ರಕ್ರಿಯೆಯಾದುದರಿಂದ ಅದು ಚಲನಾತ್ಮಕ ಸಮಸ್ಥಿತಿಯನ್ನು ಹೊಂದಿರುತ್ತದೆ.

ಎಚ್. ಎಂ. ಸದಾಶಿವಯ್ಯ*

---

*'ಸಾಮಾಜಿಕ ಪರಿವರ್ತನೆ: ಒಂದು ತಾತ್ತ್ವಿಕ ವಿಶ್ಲೇಷಣೆಗೆ', ಸಾಮಾಜಿಕ ಪರಿವರ್ತನೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. 2

ಡಾ. ಕೆ. ಉಮಾಪತಿ ಶೆಟ್ಟಿ

ಪುಸ್ತಕೋದ್ಯಮ ಹಾಗೂ ಗ್ರಂಥಪಾಲ

ಪುಸ್ತಕ ಬರೆದ ಲೇಖಕ, ಪ್ರಕಟಿಸಿದ ಪ್ರಕಾಶಕ, ಅದನ್ನು ಮಾರುವ ಪುಸ್ತಕ ವ್ಯಾಪಾರಿ, ಪುಸ್ತಕ ಕೊಳ್ಳುವ ಓದುಗ—ಇವರೆಲ್ಲ ಪುಸ್ತಕೋದ್ಯಮದ ಆಧಾರಸ್ತಂಭಗಳೆಂಬುದು ಎಲ್ಲರಿಗೂ ತಿಳಿದ ಸಂಗತಿ. ಆದರೂ ಗ್ರಂಥಾಲಯಗಳು ಹಾಗೂ ಗ್ರಂಥಪಾಲರು ಪುಸ್ತಕೋದ್ಯಮದಲ್ಲಿ ಅಷ್ಟೇಮಟ್ಟಿನ ಶ್ರದ್ಧಾವಂತ ಪಾಲುದಾರರು ಎಂಬ ಅಂಶ ನಮ್ಮ ಜನಮನಕ್ಕೆ ಅರಿವಾಗಿಲ್ಲ. ಗ್ರಂಥಪಾಲ ಆಧುನಿಕ ಸಮಾಜದಲ್ಲಿ ಜ್ಞಾನ ಪ್ರಸಾರ ಹಾಗೂ ಜನ ಜೀವನಕ್ಕೆ ಅಗತ್ಯ ಎನಿಸುವ ಯಾವುದೇ ಸುದ್ದಿಯನ್ನು ಸಕಾಲದಲ್ಲಿ ಸುಲಭವಾಗಿ ಒದಗಿಸುವ ಗುರಿ ಉಳ್ಳ ವಿಜ್ಞಾನಿ. ಇಂದಿನ ಪ್ರಪಂಚದಲ್ಲಿ ಪುಸ್ತಕಗಳೇ ಜ್ಞಾನವಾಹಿನಿಗಳು. ನಮ್ಮ ದೇಶವಲ್ಲಂತೂ ನಾನಾ ವಿಷಯಗಳಿಗೆ ಸಂಬಂಧಿಸಿದ ಜ್ಞಾನ ಲಭ್ಯವಿರುವುದು ಪುಸ್ತಕ ರೂಪದಲ್ಲಿಯೇ. ಆದ್ದರಿಂದಲೇ ಗ್ರಂಥಪಾಲರಿಗೆ ಪುಸ್ತಕಗಳಲ್ಲಿ ಅಪಾರ ಶ್ರದ್ಧೆ, ಗೌರವ. ಅವೇ ಅವರ ಕೆಲಸದ ಸಾಧನಗಳು. ಪುಸ್ತಕಭಾಗ್ಯವಿಲ್ಲದಲ್ಲಿ ಗ್ರಂಥಾಲಯಗಳಿಲ್ಲ. ಗ್ರಂಥಾಲಯಗಳಿಲ್ಲದಲ್ಲಿ ಗ್ರಂಥಪಾಲರೂ ಇಲ್ಲ. ಆದರಿಂದಲೇ ಪುಸ್ತಕೋದ್ಯಮದ ಅಭಿವೃದ್ಧಿ, ಪುಸ್ತಕ ಪ್ರಚಾರ, ಪುಸ್ತಕಗಳಲ್ಲಿ ಆಸಕ್ತಿ ಹೊಂದಿರುವ ಹೆಚ್ಚು ಹೆಚ್ಚು ಮಂದಿ ಓದುಗರ ಹಾಗೂ ಪುಸ್ತಕ ಕೊಳ್ಳುವ ಪೋಷಕರ ಸೃಷ್ಟಿ ಕಾರ್ಯದಲ್ಲಿ ಗ್ರಂಥಪಾಲರಿಗೆ ಅತಿಶಯ ಶ್ರದ್ಧೆ. ಅದು ಅವರ ಪ್ರಿಯವಾದ ಮೊದಲ ಕೆಲಸ : ಸ್ವಾಮಿಕಾರ್ಯವೂ ಹೌದು, ಸ್ವಕಾರ್ಯವೂ ಹೌದು. ಇಷ್ಟಾದರೂ ಪುಸ್ತಕೋದ್ಯಮಕ್ಕೆ ಸಂಬಂಧಪಟ್ಟವರಲ್ಲಿ ಹಾಗೂ ಗ್ರಂಥಪಾಲರಲ್ಲಿ ಈ ಬಗೆಯ ಪರಸ್ಪರ ತಿಳಿವು, ಸಹಕಾರ ಸಾಕಷ್ಟಿಲ್ಲ.

ಲೇಖಕ ಬರೆದ ಪುಸ್ತಕದ ಸಾರ್ಥಕತೆ ಇರುವುದು ಅದು ಸಹೃದಯ ವಾಚಕನ ಕೈಸೇರಿದಾಗ. ಅಲ್ಲಿಯ ವರೆಗೂ ಅದು ಎಷ್ಟೇ ಉತ್ತಮ ಪುಸ್ತಕ ಆಗಿರಲಿ, ಅಂದ ಚೆಂದವಾಗಿ ಮುದ್ರಿತವಾಗಿರಲಿ, ಬೆಲೆ ಎಲ್ಲರಿಗೂ ಎಟಕಿಸುವಂತಿರಲಿ ಅಥವಾ ಹೆಚ್ಚೇ ಇರಲಿ, ಅದಕ್ಕೆ ಅಂಥ ಅರ್ಥ ಇಲ್ಲ. ಪ್ರಕಟವಾದ ಪುಸ್ತಕ ಓದುಗನ ಕೈಸೇರಲು ಪ್ರಮುಖವಾಗಿ ಆಗಬೇಕಾದ್ದು ಪ್ರಚಾರ ಕಾರ್ಯ. ಇಂದು ನಮ್ಮಲ್ಲಿ ನಡೆಯುತ್ತಿರುವ ಪುಸ್ತಕ ಪ್ರಚಾರಕಾರ್ಯ ತೀರ ಸೀಮಿತವಾದ್ದು. ಕೇವಲ ಆರ್ಥಿಕ ದಾರಿದ್ರ್ಯ, ಪುಸ್ತಕ ಕೊಳ್ಳುವ ಯೋಚನೆ ಮಾಡುವಂಥ ವಾಚಕ ವರ್ಗದ ಅಭಾವ—ಇಷ್ಟೇ ಇದಕ್ಕೆ ಕಾರಣವಲ್ಲ. 'ಕೂಸು ಹುಟ್ಟುವುದಕ್ಕೆ ಮೊದಲು ಕುಲಾವಿ ಹೊಲಿಸುವ' ಬುದ್ಧಿವಂತಿಕೆಯನ್ನು ಹಲವರು ಪ್ರಶ್ನಿಸುವರಾದರೂ ಪುಸ್ತಕಪ್ರಚಾರ ಕಾರ್ಯದಲ್ಲಿ ಇಂಥ ಬುದ್ಧಿವಂತಿಕೆ ಅತ್ಯಗತ್ಯ. ಪುಸ್ತಕ ಪ್ರಕಟವಾಗುವುದಕ್ಕೆ ಸಾಕಷ್ಟು ಮುಂಚೆಯೇ ಅದರ ಪ್ರಚಾರಕ್ಕೆ ವ್ಯವಸ್ಥೆ ಇರಬೇಕು. ನಾನಾ ವೃತ್ತಿಗಳಲ್ಲಿರುವ ಓದುಬರಹ ಬಲ್ಲವರ ಸಂಖ್ಯೆ ಸಾವಿರಗಟ್ಟಲೆಯಲ್ಲಿ ಬೆಳೆಯುತ್ತಿದೆ, ಇಂಥವರ ವಿಳಾಸಗಳನ್ನು ಸಂಗ್ರಹಿಸಿ ಪ್ರತಿ ಪುಸ್ತಕ ಪ್ರಕಟವಾದಾಗಲೂ ಕರ್ನಾ

ಟಕಾದ್ಯಂತ ಇರುವ ಕನಿಷ್ಠ ಒಂದು ಸಾವಿರ ಮಂದಿಗೆ ಅದರ ವಿವರಗಳನ್ನುಳ್ಳ ಪ್ರಚಾರ ಪತ್ರ ವನ್ನು ಕಳುಹಿಸುವುದರಿಂದ 'ನೇರಪ್ರಚಾರ' ತಂತ್ರವನ್ನು ಕ್ರಮಬದ್ಧವಾಗಿ ಉಪಯೋಗಿಸುವ ದಿಕ್ಕಿನಲ್ಲಿ ಒಂದು ಹೆಜ್ಜೆ ಇಟ್ಟಂತಾಗುತ್ತದೆ. ಪುಸ್ತಕ ಪ್ರಕಟಣೆಯ ಅನಂತರ ಬರುವ ಅಲ್ಪ ಸ್ವಲ್ಪ ಪ್ರತಿಕಾ ಜಾಹೀರಾತುಗಳನ್ನು ಕೈಬಿಡದೆಯೇ ಇಂಥ ಪ್ರಯತ್ನ ಮಾಡಬಹುದು. ಅನೇಕ ದೇಶಗಳಲ್ಲಿ ಇಂಥ ಪ್ರಯತ್ನ ಪುಸ್ತಕ ಮಾರಾಟದಲ್ಲಿ ಯಶಸ್ಸು ತಂದಿದೆ.

ಪುಸ್ತಕೋದ್ಯಮಿಗಳು, ಗ್ರಂಥಪಾಲರು ಪರಸ್ಪರ ಸಹಕಾರದಿಂದ ಪುಸ್ತಕ ಕೂಟಗಳನ್ನು (ಬುಕ್ ಕ್ಲಬ್) ಪ್ರಾರಂಭಿಸಿ ಪ್ರೋತ್ಸಾಹಿಸುವುದರಿಂದ ಪುಸ್ತಕ ವ್ಯಾಸಂಗವೂ ಮಾರಾಟವೂ ಹೆಚ್ಚುವ ಅವಕಾಶ ಇದೆ. ಅಮೆರಿಕೆಯಲ್ಲಿ ಬುಕ್ ಆಫ್ ದಿ ಮಂತ್ ಕ್ಲಬ್‌ನಂಥ ಪುಸ್ತಕ ಕೂಟ ಗಳು ಪ್ರತಿ ತಿಂಗಳೂ ಸಹಸ್ರ ಸಂಖ್ಯೆಯ ಪುಸ್ತಕಗಳ ಮಾರಾಟಕ್ಕೆ ಕಾರಣ ಆಗಿರುವುವಲ್ಲದೆ ಸಕಾರಣ ಬೆಲೆಯಲ್ಲಿ ಉತ್ತಮ ಪುಸ್ತಕಗಳು ಬಹು ಜನರ ಕೈಸೇರುವಂತಾಗಲು ಶ್ರಮಿಸುತ್ತಿವೆ. ಕಡಿಮೆ ಬೆಲೆಯ ಕೈಹೊತ್ತಗೆಗಳನ್ನು ಕರ್ನಾಟಕದಲ್ಲಿ ಪ್ರಥಮವಾಗಿ ವಾಹಿನಿ ಪ್ರಕಾಶನದ ಶ್ರೀ ಚಿಂತಾಮಣಿಯವರು ತಂದಾಗ ಪುಸ್ತಕ ಪ್ರಕಾಶನ ಹಾಗೂ ಮಾರಾಟಗಳಲ್ಲಿ ಗಮನಾರ್ಹ ಪ್ರಗತಿ ಆದುದನ್ನು ಸ್ಮರಿಸಿದಾಗ ಪುಸ್ತಕ ಕೂಟಗಳ ಸ್ಥಾಪನೆ, ಬೆಳವಣಿಗೆಗಳಿಗೆ ಧಾರಾಳವಾದ ಅವಕಾಶ ಇದೆ ಎನ್ನಿಸುತ್ತದೆ.

ಪತ್ರಿಕೆಗಳಲ್ಲಿ ಪ್ರಕಟವಾಗುವ ಪುಸ್ತಕ ವಿಮರ್ಶೆಗಳೇ ಪ್ರಕಟವಾಗುವ ಪುಸ್ತಕಗಳು ಜನ ಸಾಮಾನ್ಯರ ಗಮನಕ್ಕೆ ಬರುವ ಸಾಮಾನ್ಯ ವಿಧಾನ. ಪುಸ್ತಕ ವಿಮರ್ಶೆ ಪ್ರಕಟವಾಗುವ ವೇಳೆಗೆ ಪುಸ್ತಕ ಪ್ರಕಟವಾಗಿ ಸಾಕಷ್ಟು ಕಾಲ ಆಗಿದ್ದು 'ಹೊಸತನ' ಅಳಿಸಿ ಹೋಗಿರುತ್ತದೆ. ಹಲವು ಬಾರಿ ಪತ್ರಿಕಾ ವಿಮರ್ಶೆ ಓದಿ ಪುಸ್ತಕ ಗುರುತಿಸಿ, ಕೊಳ್ಳಲು ಹೋದರೆ ಅದು ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿರುವ ಅನುಭವವೂ ಉಂಟು. ಅಲ್ಲದೆ ಪುಸ್ತಕ ವಿಮರ್ಶೆಗೆಂದೇ ಮೀಸಲಾದ ಸಮರ್ಥ ಪತ್ರಿಕೆಗಳು ಕನ್ನಡದಲ್ಲಾಗಲಿ, ಇಂಗ್ಲಿಷ್‌ನಲ್ಲಾಗಲಿ ಇನ್ನೂ ಬರಬೇಕಾಗಿದೆ. ಇಂಥ ಪತ್ರಿಕೆಗಳ ರೂಪುಗೊಳಿಕೆಯಲ್ಲೂ ಗ್ರಂಥಪಾಲರು ಹಾಗೂ ಪುಸ್ತಕೋದ್ಯಮಿಗಳು ಸಹಕರಿಸಿ ಕೆಲಸ ಮಾಡಬಹುದಾಗಿದೆ.

ಪುಸ್ತಕೋದ್ಯಮದ ಇನ್ನೊಂದು ಕೊರತೆಯೆಂದರೆ ಪ್ರಕಟವಾದ ಮತ್ತು ಮಾರಾಟಕ್ಕೆ ಲಭ್ಯವಿರುವ ಪುಸ್ತಕಗಳ ಲೇಖಕರ ಹೆಸರು, ಪುಸ್ತಕದ ಹೆಸರು, ಪ್ರಕಾಶಕರ ವಿಳಾಸ, ಬೆಲೆ, ಪ್ರತಿಗಳು ದೊರೆಯುವ ಸ್ಥಳ ಇತ್ಯಾದಿ ವಿವರಗಳ ಸಮಗ್ರ ಮಾಹಿತಿ ಒಂದೇ ಕಡೆ ದೊರೆಯುವಂಥ ವ್ಯವಸ್ಥೆ ಇಲ್ಲದಿರುವುದು. ಅಮೆರಿಕೆಯ ಎಲ್ಲ ಪುಸ್ತಕ ಪ್ರಕಾಶಕರೂ ತಮ್ಮ ತಮ್ಮ ಪ್ರಕಟಣೆ ಗಳ ಪಟ್ಟಿಗಳನ್ನು ಕ್ರೋಡೀಕರಿಸಿ ಪ್ರತಿವರ್ಷ ಪ್ರಕಟಿಸುವ 'ಪಬ್ಲಿಷರ್ಸ್ ಟ್ರೇಡ್ ಲಿಸ್ಟ್ ಆನ್ಯುಯಲ್' ಹಾಗೂ ಮಾರಾಟಕ್ಕೆ ಲಭ್ಯವಿರುವ ಎಲ್ಲ ಗ್ರಂಥಗಳ ಪಟ್ಟಿ, ಬುಕ್ಸ್ ಇನ್ ಪ್ರಿಂಟ್ ಇವು ಇಂಥ ಪ್ರಯತ್ನದ ಯಶಸ್ವಿ ಉದಾಹರಣೆಗಳು. ಪುಸ್ತಕದ ಹೆಸರಾಗಲಿ, ಲೇಖಕರ ಹೆಸರಾಗಲಿ ಪುಸ್ತಕದ ವಿಷಯ ಯಾವುದೆಂಬ ತಿಳಿವಾಗಲಿ ಇದ್ದರೆ ಸಾಕು—ಈ ಪ್ರಕಟಣೆಗಳು ನಮಗೆ ಬೇಕಾದ ವಿವರಗಳನ್ನು ಒದಗಿಸುತ್ತವೆ. ಇಂಥ ಸೌಲಭ್ಯ ಹಲವಾರು ದೇಶಗಳ ಪ್ರಕಟಣ ಪ್ರಪಂಚದಲ್ಲುಂಟು. ನಮ್ಮ ರಾಜ್ಯದ ಪ್ರಕಾಶಕರೂ ಇಂಥ ಯೋಚನೆ ಮಾಡುವುದು ಆವಶ್ಯಕ. ಇದಕ್ಕೆ ಬೇಕಾದ ಸಹಕಾರ ಮನೋಭಾವ, ಜೊತೆಗೂಡಿ ಕೆಲಸಮಾಡುವ ಪ್ರವೃತ್ತಿಗಳನ್ನು ನಮ್ಮ ಪುಸ್ತಕೋದ್ಯಮಿಗಳು ರೂಢಿಸಿಕೊಳ್ಳಬೇಕು. ಇಂಥ ಪ್ರಯತ್ನಗಳಲ್ಲಿ ಗ್ರಂಥಪಾಲರು ನೆರವು ನೀಡಬಲ್ಲರು.

ಪುಸ್ತಕೋದ್ಯಮ ಹೆಮ್ಮರವಾಗಿ ಬೆಳೆದು ನಿಂತಿರುವ ಅಮೆರಿಕೆಯಂಥ ದೇಶದಲ್ಲಿ ಯಾವುದೇ ವಿಷಯ ಕುರಿತು ಒಳ್ಳೆಯ ಪುಸ್ತಗಳ ಪಟ್ಟಿಗಳು ಅಲ್ಲಿಯ ಗ್ರಂಥಪಾಲರ ಪರಿಶ್ರಮದಿಂದಾಗಿ ಸಾರ್ವಜನಿಕರಿಗೆ ಧಾರಾಳವಾಗಿ, ಅನೇಕ ವೇಳೆ ಪುಕ್ಕಟೆಯೇ, ದೊರೆಯುತ್ತವೆ. ಪ್ರತಿವರ್ಷ ಪ್ರಕಟವಾಗುವ ಸಾವಿರಾರು ಗ್ರಂಥಗಳಲ್ಲಿ ಒಂದು ನೂರು ಶ್ರೇಷ್ಠ ಗ್ರಂಥಗಳ ಪಟ್ಟಿಯನ್ನು ಅಮೆರಿಕೆಯ ಲೈಬ್ರರಿ ಅಸೋಸಿಯೇಷನ್ ಸಾರ್ವಜನಿಕರಿಗೆ ಒದಗಿಸುತ್ತದೆ. ಅನೇಕ ಗ್ರಂಥಾಲಯಗಳು ಪುಸ್ತಕಗಳನ್ನು ಕುರಿತ ಪ್ರದರ್ಶನ, ಚರ್ಚೆ, ಪ್ರವಚನಗಳನ್ನು ಸತತವಾಗಿ ಏರ್ಪಡಿಸುತ್ತವೆ. ಒಂದು ಕಾಲೇಜು ಗ್ರಂಥಾಲಯು ಹೊಸದಾಗಿ ಆರಂಭ ಆಗಬೇಕಾದರೆ ಇದ್ದೇ ತೀರಬೇಕಾದ 5,000 ಪುಸ್ತಕಗಳ ಪಟ್ಟಿ, ಸಾರ್ವಜನಿಕ ಗಂಥಾಲಯದಲ್ಲಿ ಅತ್ಯಗತ್ಯ ಎನಿಸುವ ಹಲವು ಸಾವಿರ ಪುಸ್ತಕಗಳ ಪಟ್ಟಿ, ವೇದಾಂತ ಅಥವಾ ಯಾವುದೇ ವಿಷಯದಲ್ಲಿ ಆಸಕ್ತಿ ಇರುವವರು ಓದಬಹುದಾದ ಹತ್ತಾರು ಉತ್ತಮ ಪುಸ್ತಕಗಳ ಪಟ್ಟಿಗಳು ಧಾರಾಳಾವಾಗಿ ಸಿಕ್ಕುತ್ತವೆ. ಇಂಥ ಅನೇಕ ಪ್ರಕಟನೆಗಳು ಪುಸ್ತಕೋದ್ಯಮಿಗಳ ಹಾಗೂ ಗ್ರಂಥಪಾಲರ ಸಂಯುಕ್ತ ಪ್ರಯತ್ನ-ಸಹಕಾರಗಳಿಂದ ರೂಪುಗೊಂಡಿವೆ. ಇದರಿಂದ ಉತ್ತಮ ಪುಸ್ತಕಗಳ ಪ್ರಚಾರ ಆಗುವುದಲ್ಲದೆ, ನಂಬಿಕೆಗೆ ಅರ್ಹವಾದ ಪರಿಣತರ ಸಲಹೆ ಸಾಮಾನ್ಯ ಜನರಿಗೆ ಸಿಗುತ್ತದೆ. ಕರ್ನಾಟಕ ಗ್ರಂಥಾಲಯ ಸಂಘ, ರಾಜ್ಯದ ಸಾರ್ವಜನಿಕ ಗ್ರಂಥಲಯಗಳು ಹೊಂದಿರಬೇಕಾದಂಥ 1,000 ಉಪಯುಕ್ತ ಗ್ರಂಥಗಳ ಪಟ್ಟಿ ರೂಪಿಸಿಸುವ ಯೋಜನೆ ಇಟ್ಟುಕೊಂಡಿದೆಯಾದರೂ ಈ ದಿಶೆಯಲ್ಲಿ ಪುಸ್ತಕೋದ್ಯಮಿಗಳ ಹಾಗೂ ಗ್ರಂಥಪಾಲರ ಅಪೇಕ್ಷಣೀಯ ಸಹಕಾರ ವ್ಯಕ್ತಿ ಮಟ್ಟದಲ್ಲಾಗಲಿ, ಸಂಘಮಟ್ಟದಲ್ಲಾಗಲಿ ಇದ್ದಂತಿಲ್ಲ. ಇಂಥ ಯೋಜನೆಗಳ ಯಶಸ್ಸಿಗೆ ಸಹಕಾರವೇ ಅಡಿಗಲ್ಲು. ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಸುತ್ತಿರುವ ಸಾಹಿತ್ಯ ವಾರ್ಷಿಕ ಈ ದಿಕ್ಕನಲ್ಲಿ ಒಂದು ಸ್ವಾಗತಾರ್ಹ ಪ್ರಯತ್ನ. ಮೈಸೂರು ವಿಶ್ವವಿದ್ಯಾನಿಲಯ ಪ್ರಟಿಸುತ್ತಿರುವ ಕನ್ನಡ ಗ್ರಂಥಸೂಚಿ ಇನ್ನೊಂದು ಸ್ವಾಗತಾರ್ಹ ಬೆಳವಣಿಗೆ. ನಮ್ಮ ಗ್ರಂಥಾಲಯಗಳು ಪುಸ್ತಕ ಪ್ರಚಾರ ಕಾರ್ಯದಲ್ಲಿ ಶ್ರದ್ಧೆಯಿಂದ ಭಾಗವಹಿಸಬೇಕಾಗಿದೆ; ಇತರ ಸಂಘ ಸಂಸ್ಥೆ ವ್ಯಕ್ತಿಗಳೊಡನೆ ಸಹಕರಿಸಿ ಕೆಲಸ ಮಾಡಬೇಕಾಗಿದೆ. ನಮ್ಮ ಹಲವು ಪತ್ರಿಕೆಗಳು ಅತ್ಯಂತ ಜನಪ್ರಿಯವಾಗಿ ಹೆಚ್ಚು ಪ್ರತಿ ಮಾರಾಟ ಆಗುವ 5-10 ಪ್ರಕಟಣೆಗಳ ಪಟ್ಟಿಯನ್ನು ಪ್ರಕಟಿಸಬಹುದು. ಇದನ್ನು ನಿರ್ಧರಿಸುವ ಸರ್ವಸಮ್ಮತ ಸೂತ್ರವನ್ನು ರೂಪಿಸಬಹುದು.

ಕರ್ನಾಟಕದಲ್ಲಿ ಪುಸ್ತಕ ಪ್ರಕಟಣೆ ಎರಡು ಶತಮಾನಗಳಿಂದ ನಡೆಯುತ್ತಿದ್ದರೂ, ಇತ್ತೀಚಿನ ವರ್ಷಗಳಲ್ಲಿ ಓದುಬರಹ ಬಲ್ಲವರ ಸಂಖ್ಯೆ ಗಮನಾರ್ಹವೇಗದಲ್ಲಿ ಹೆಚ್ಚುತ್ತಿದ್ದರೂ, ಜನರ ಅರ್ಥಿಕಸ್ಥಿತಿ ಅಷ್ಟಿಷ್ಟು ಉತ್ತಮಗೊಳ್ಳುತ್ತಿದ್ದರೂ, ಜನ ಎಂಥ ಪುಸ್ತಕಗಳನ್ನು ಅಪೇಕ್ಷಿಸುತ್ತಾರೆ, ಎಂಥ ಗ್ರಂಥಗಳು ಜನಪ್ರಿಯವಾಗಿವೆ ಅಥವಾ ಆಗಿಲ್ಲ—ಎಂಬುದನ್ನು ತಿಳಿಯುವ ವೈಜ್ಞಾನಿಕ ವಿಚಾರ ವಿಮರ್ಶೆಯ ಆರಂಭ ಇನ್ನೂ ಆಗಿಲ್ಲದಿರುವುದು ಪುಸ್ತಕೋದ್ಯಮದ ಮತ್ತೊಂದು ಕೊರತೆ. ಇಂಥ ಸಂಶೋಧನೆಗಳನ್ನು ಕರ್ನಾಟಕ ಗ್ರಂಥಾಲಯ ಸಂಘ, ಕರ್ನಾಟಕ ಪುಸ್ತಕೋದ್ಯಮಿಗಳ ಪರಿಷತ್ತು, ಕನ್ನಡ ಸಾಹಿತ್ಯ ಪರಿಷತ್ತು, ರಾಜ್ಯದ ವಿಶ್ವವಿದ್ಯಾಲಯಗಳ ಗ್ರಂಥಾಲಯ ವಿಜ್ಞಾನ ವಿಭಾಗಗಳು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಸಹಾಯದಿಂದ ನಡೆಸಬಹುದು. ಇಂಥ ಸಂಶೋಧನೆಗಳು ಪುಸ್ತಕೋದ್ಯಮದ ಬೆಳವಣಿಗೆಗೆ ಪ್ರಮುಖ ಪ್ರೇರಣೆ

ಒದಗಿಸಬಲ್ಲವು. ಗ್ರಂಥಪಾಲರು, ಗ್ರಂಥಾಲಯ ವಿಜ್ಞಾನಿಗಳು ಇಂಥ ಸಂಶೋಧನೆಗಳಲ್ಲಿ ಅಪಾರ ಸೇವೆ ಸಲ್ಲಿಸಬಲ್ಲರು. ಪುಸ್ತಕಗಳು ಒಂದಕ್ಕಿಂತ ಹೆಚ್ಚು ಬಾರಿ ಮಾನವ ಜೀವನದ ಮೇಲೆ ಅಚ್ಚಳಿಯದ ಪ್ರಭಾವ ಬೀರಿರುವುದನ್ನು ಗಮನಿಸಿದರೆ ಇಂಥ ಪ್ರಯತ್ನಗಳ ಆವಶ್ಯಕತೆ, ಸೂಕ್ತತೆ ಅರಿವಾಗದಿರದು.

ಹ. ಕ. ರಾಜೇಗೌಡ

ಯಲಹಂಕ ನಾಡ ಪ್ರಭುಗಳು ಹೊರಗಿನಿಂದ ಬಂದವರೆ?

ಕನ್ನಡ ನಾಡಿನ ರಾಜಧಾನಿಯಾದ ಬೆಂಗಳೂರಿನ ನಿರ್ಮಾಪಕನಾದ ಒಂದನೆಯ ಕೆಂಪೇಗೌಡ ಮತ್ತು ಅವನ ವಂಶದ ಮೂಲಪುರುಷರು ಹೊರಗಿನಿಂದ ಬಂದವರೆಂದೂ ಮೂಲತಃ ತೆಲುಗರೆಂದೂ ಈವರೆವಿಗೆ ಅವರನ್ನು ಕುರಿತು ಬರೆದ ಚರಿತ್ರಕಾರರೆಲ್ಲರೂ ಅಭಿಪ್ರಾಯಪಟ್ಟಿದ್ದಾರೆ. ಈ ವಂಶದ ಕೆಲವರನ್ನು, ಅದರಲ್ಲಿಯೂ ವಿಶೇಷವಾಗಿ ಬೆಂಗಳೂರು ನಿರ್ಮಾಪಕ ಕೆಂಪೇಗೌಡನನ್ನು, ಕುರಿತು ನಾಟಕ, ಕಾದಂಬರಿ ಮತ್ತಿತರ ಸಾಹಿತ್ಯ ಕೃತಿಗಳನ್ನು ರಚಿಸಿದ ಕನ್ನಡದ ಹಿರಿಯ ಲೇಖಕರೂ ಬಹುಮಟ್ಟಿಗೆ ಚರಿತ್ರಕಾರರ ಅಭಿಪ್ರಾಯವನ್ನೇ ಒಪ್ಪಿದಂತೆ ಕಂಡುಬರುತ್ತದೆ. ಏಕೆಂದರೆ ಈ ವಂಶದವರು ಮೂಲತಃ ಕನ್ನಡಿಗರೆಂಬುದನ್ನು ಪ್ರತಿಪಾದಿಸಲು ಸರಿಯಾದ ಆಧಾರಗಳನ್ನು ಒದಗಿಸಿಲ್ಲ. ಯಲಹಂಕ ನಾಡಿನ ದೊರೆಗಳ ವಂಶದ ಮೂಲಪುರುಷರು ಹೊರಗಿನಿಂದ ಬಂದವರೆಂದು ಹೇಳುವ ಕಥೆ ಹೀಗಿದೆ : "ಸುಮಾರು ಹದಿನಾಲ್ಕನೆಯ ಶತಮಾನದಲ್ಲಿ ಮದ್ರಾಸು ಪ್ರಾಂತದ ಕಂಚಿಯ ಸಮೀಪದ ಯಣಮಂಜಿಪುತ್ತೂರು ಎಂಬ ಊರಿನಿಂದ ಏಳು ಜನ ರೈತರು ಕುಟುಂಬಸಮೇತರಾಗಿ ನಂದಿದುರ್ಗದ ಬಳಿಯ ರಾಮಸ್ವಾಮಿ ಬೆಟ್ಟದ ಬಳಿ ಬಂದು ತಂಗಿದರು. ಅವರು ಮೂಲತಃ ತೆಲುಗರು. ಅವರಿದ್ದ ಯಣಮಂಜಿಗೆ ಮೊರಸು ನಾಡೆಂದು ಹೆಸರು. ಮೊರಸು ನಾಡಿನಿಂದ ಬಂದವರಾದ ಕಾರಣ ಮೈಸೂರು ಪ್ರಾಂತದ ಪೂರ್ವಭಾಗಕ್ಕೆ ಬಂದ ಈ ನೆಲಸಿಗರಿಗೆ ಮೊರಸು ಒಕ್ಕಲಿಗರೆಂದು ಹೆಸರು. ಇವರು ಭೈರವದೇವನ ಆರಾಧಕರು. ಇವರು ತಮ್ಮ ಮಗಳಂದಿರ ವಿವಾಹಕ್ಕೆ ಪೂರ್ವದಲ್ಲಿ ಅವರ ಕಿರುಬೆರಳನ್ನೂ ಉಂಗುರದ ಬೆರಳನ್ನೂ ಕತ್ತರಿಸುತ್ತಿದ್ದರಂತೆ.[1]" ಈ ಕಥೆಯಿಂದ ಯಾವ ಚಾರಿತ್ರಿಕ ಆಧಾರಗಳೂ ದೊರೆಯುವುದಿಲ್ಲ. ಬಹುಶಃ ಇದೊಂದು ವಂಶದ ಮೂಲದ ಬಗೆಗೆ ತಲೆತಲಾಂತರಗಳಿಂದ ಹರಿದುಬಂದ ಕಟ್ಟುಕಥೆಯಾಗಿರಬೇಕು. ಏಕೆಂದರೆ ಕನ್ನಡನಾಡಿನ ಒಕ್ಕಲಿಗ ಜನಾಂಗದ ಮತ್ತು ಇತರ ಬ್ರಾಹ್ಮಣೇತರ ಜನಾಂಗಗಳ ಮೂಲದ ಬಗೆಗೂ ಇಂಥವೇ ಕಥೆಗಳು ಕಂಡುಬರುತ್ತವೆ. ಆದರೆ ಒಂದು ವ್ಯತ್ಯಾಸ. ಈ ಕಥೆಗಳೆಲ್ಲ ನಮ್ಮ ಪೂರ್ವಿಕರು ಬಡಗ ದೇಶದಿಂದ ಬಂದು ಇಲ್ಲಿ ತರಗು ಗುಡಿಸಿ ನೆಲೆ ನಿಂತರೆಂದು ಹೇಳುತ್ತವೆ. ಈ ಹೇಳಿಕೆಯಲ್ಲಿ ಉತ್ತರದಿಂದ ಆರ್ಯರು ದಕ್ಷಿಣದತ್ತ ವಲಸೆ ಬಂದ ಸೂಚನೆ ಕಂಡುಬರುತ್ತದೆ. ಆದರೆ, ಈ ಕಥೆಯಲ್ಲಿ ದಕ್ಷಿಣದಿಂದ ವಲಸೆ ಬಂದಂತೆ ಸೂಚಿತವಾಗಿದೆ.

---

[1] ಕರ್ನಾಟಕ ಇತಿಹಾಸದರ್ಶನ, ಸಂ. ಎಂ. ವಿ. ಕೃಷ್ಣರಾವ್ ಮತ್ತು ಟಿ. ಕೇಶವಭಟ್ಟ, ಪುಟ 36

ಆವತಿ, ಯಲಹಂಕ, ಬೇಗಳೂರು ಮತ್ತು ಮಾಗಡಿಗಳನ್ನು ಅನುಕ್ರಮವಾಗಿ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಈ ರಾಜರುಗಳು ಮೂಲತಃ ಕನ್ನಡ ನಾಡಿನವರೇ, ಕನ್ನಡಿಗರೇ ಎಂಬುದಕ್ಕೆ ವಿಪುಲವಾದ ಆಧಾರಗಳು ದೊರೆಯುತ್ತವೆ. ಆದರೂ ಈ ವಂಶದವರು ಹೊರಗಿನಿಂದ ಬಂದವರೆಂದು ಯಾವ ಕಾರಣದಿಂದ ಈ ವಿದ್ವಾಂಸರು ತೀರ್ಮಾನಿಸಿದರೊ ತಿಳಿಯದಾಗಿದೆ. ಸುಮಾರು ಹನ್ನೆರಡು ಹದಿಮೂರನೆಯ ಶತಮಾನಗಳಿಂದಲೂ ಯಲಹಂಕ ನಾಡ ಪ್ರಭುಗಳು ಹಾಕಿಸಿದ ಶಾಸನಗಳು ದೊರೆಯುತ್ತವೆ. ಸುಮಾರು ಹದಿನಾಲ್ಕನೆಯ ಶತಮಾನದಲ್ಲಿ ಈ ವಂಶದ ಮೂಲ ಪುರುಷನೆಂದು ಚರಿತ್ರಕಾರರು ಊಹಿಸಿರುವ ರಣಭೈರೇಗೌಡನು ಯಣ ಮಂಜಿ ಪುತ್ತೂರಿನಿಂದ ಬಂದನೆಂಬುದನ್ನು ಒಪ್ಪಿದರೆ ಆಗ ಈ ಭಾಗ ಅಪ್ಪಟ ತಮಿಳು ನೆಲೆ ಯಾಗಿದ್ದಿತು. ಹೀಗಾಗಿ ಅವರನ್ನು ತೆಲುಗರು ಎಂದು ಹೇಳಲಾಗುವುದಿಲ್ಲ. ಈ ವಂಶದವರು ಮೂಲತಃ ಕನ್ನಡ ನಾಡಿನವರೆ ಎಂಬುದಕ್ಕೆ ಇವರ ಮನೆದೇವತೆಯಾದ ಕೆಂಪಮ್ಮನೂ ಒಂದು ಪ್ರಬಲವಾದ ಕಾರಣ. ಏಕೆಂದರೆ ಕನ್ನಡ ನಾಡಿನ ಒಕ್ಕಲಿಗರೆಲ್ಲರ ಮನೆದೇವತೆಯಾದ ಈ ಕೆಂಪಮ್ಮನೇ ಯಲಹಂಕ ನಾಡ ಪ್ರಭುಗಳಿಗೂ ಮನೆದೇವತೆಯಾಗಿರುವುದು ಇವರು ಕನ್ನಡಿಗ ರೆಂಬುದನ್ನು ಶ್ರುತಪಡಿಸುತ್ತದೆ. ಅಲ್ಲದೆ ರಣಭೈರೇಗೌಡ ಈ ವಂಶದ ಮೂಲಪುರುಷ ಎಂಬುದಕ್ಕೆ ಯಾವ ಆಧಾರವೂ ಇಲ್ಲ. ಈ ವಂಶದವರು ತಮ್ಮ ಹಿರಿಯರ ಹೆಸರಿನಲ್ಲಿ ನೂರಾರು ದತ್ತಿಗಳನ್ನು ಬಿಟ್ಟು ಹಾಕಿಸಿರುವ ಯಾವ ಶಾಸನದಲ್ಲಿಯೂ ರಣಭೈರೇಗೌಡ ಎಂಬ ಹೆಸರು ಬರುವುದಿಲ್ಲ. ಈ ಕಾರಣದಿಂದ ಯಲಹಂಕ ನಾಡ ಪ್ರಭುಗಳ ವಂಶದ ಮೂಲಪುರುಷ ರಣಭೈರೇಗೌಡ ಎಂಬುದನ್ನು ಒಪ್ಪಲು ಆಗುವುದಿಲ್ಲ.

ಚರಿತ್ರಕಾರರು ಹೇಳುವ ರಣಭೈರೇಗೌಡ ಈ ಭಾಗದ ಒಬ್ಬ ಪಾಳೆಯಗಾರನ ಹೆಸರೂ ಆಗಿದೆ. ಈತ ಇತ್ತೀಚಿನವನು. ಯಲಹಂಕ ವಂಶದ ರಾಜರ ಮೂರನೆಯ ತಲೆಮಾರಿನ ಬಂಡಿ ಕುಲತಿಲಕ ಭೈರದೇವನಿಗೆ ರಣಭೈರೇಗೌಡ ಎಂಬ ಹೆಸರಿದ್ದಂತೆ ಕಂಡುಬರುವುದಿಲ್ಲ. ಮೇಲೆ ಸೂಚಿಸಿದ ಪಾಳೆಯಗಾರ ಹೊಳವನಹಳ್ಳಿಯಲ್ಲಿ ಆಳುತ್ತಿದ್ದ ರಣಭೈರೇಗೌಡ. ಇವನು ಯಲಹಂಕ ರಾಜವಂಶದ ಮೂಲ ಪುರುಷನೆಂದು ಹೇಳಲು ಬರುವುದಿಲ್ಲ. ಈ ಭಾಗದ ದೊಡ್ಡ ಬಳ್ಳಾಪುರ, ಚಿಕ್ಕಬಳ್ಳಾಪುರ, ಹೊಸಕೋಟೆ, ಸುಗಟೂರು ಮತ್ತು ಹೊಳವನಹಳ್ಳಿಯ ಪಾಳೆಯಗಾರರೆಲ್ಲ ಒಕ್ಕಲಿಗರೇ ಆದುದರಿಂದ ಹೆಸರಿನ ಸಾಮ್ಯ ಇವರೆಲ್ಲ ಸಹೋದರರೆಂಬ ಊಹೆಗೆ ಕಾರಣವಾಗಿರಬೇಕೆಂದು ತೋರುತ್ತದೆ. ನಮ್ಮ ನಾಡಿನ ಪಾಳೆಯಗಾರರ ಚರಿತ್ರೆ ಗಳನ್ನು ಗಮನಿಸಿದಾಗ ಒಂದು ಅಂಶ ಗೋಚರವಾಗುತ್ತದೆ. ಅದೆಂದರೆ ಇವರೆಲ್ಲರೂ ಮೊದ ಮೊದಲಿಗೆ ಸೇನೆಯಲ್ಲಿ ಸೈನಿಕರಾಗಿದ್ದವರು. ಕ್ರಮೇಣ ಇಂಥವರು ತಮ್ಮ ದಣಿಗಳ ಪ್ರೀತಿಗೆ ಪಾತ್ರರಾಗಿ ದಾನದತ್ತಿಗಳನ್ನು ಪಡೆದು ಪಾಳೆಯಗಾರರಾಗಿರುವುದು ಕಂಡುಬರುತ್ತದೆ. ಇಂಥವರಲ್ಲಿ ಶಕ್ತರಾದವರು ಅಕ್ಕಪಕ್ಕದವರನ್ನು ಹತ್ತಿಕ್ಕಿ ಸಾಮಂತರಾಜರಾಗಿರುವುದೂ ಅಪ ರೂಪವೇನಲ್ಲ. ಯಲಹಂಕ ರಾಜರ ವಂಶದವರೂ ಆವತಿಯ ಪಾಳೆಯಗಾರರಾಗಿದ್ದು ಕ್ರಮೇಣ ಮೇಲೆ ಬಂದು ರಾಜರಾದವರೆಂಬುದರಲ್ಲಿ ಅನುಮಾನವಿಲ್ಲ. ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಯಣಮಂಜಿಪುತ್ತೂರಿನಿಂದ ವಲಸೆ ಬಂದ ರಣಭೈರೇಗೌಡ ಇಲ್ಲಿ ನೆಲಸಿದಾಗ ಈ ಪ್ರದೇಶ ಕಾಡಾಗಿತ್ತೆಂದು ಚರಿತ್ರಕಾರರ ಅಭಿಮತ. ಆದರೆ ಆವತಿ, ಯಲಹಂಕ, ಹೊಸಕೋಟೆ

ಮುಂತಾದುವೆಲ್ಲ ಗಂಗರ ಕಾಲದಿಂದಲೂ ಊರಾಗಿದ್ದ ಬಗೆಗೆ ಆಧಾರಗಳಿವೆ. ಈ ಎಲ್ಲಾ ಕಾರಣಗಳಿಂದಾಗಿ ಯಲಹಂಕ ನಾಡಿನ ರಾಜರು ಮತ್ತು ಅವರ ಮೂಲಪುರುಷರು ಕನ್ನಡ ನಾಡಿನವರೇ, ಕನ್ನಡಿಗರೇ ಎಂದು ಖಚಿತವಾಗಿ ಹೇಳಬಹುದು.

ಕ್ರಿ. ಶ. 350ರ ಸುಮಾರಿಗೆ ಕನ್ನಡ ನಾಡಿನಲ್ಲಿ ಗಂಗರು ಪ್ರಬುದ್ಧಮಾನಕ್ಕೆ ಬಂದರೆಂದು ಹೇಳಬಹುದು. ಕ್ರಿ.ಶ. 350ರಿಂದ 400ರ ವರೆಗೆ ಆಳಿದ ದೀಡಿಗ ಅಥವಾ ದಡಿಗ ಈ ವಂಶದ ಸ್ಥಾಪಕನೆಂಬುದು ಇತಿಹಾಸ ತಜ್ಞರ ಅಭಿಪ್ರಾಯವಾಗಿದೆ. ಗಂಗರ ಬಗೆಗೂ ಅನೇಕ ರೀತಿಯ ಕಥೆಗಳಿವೆ. ಇವರು ಹೊರಗಿನಿಂದ ಬಂದವರೆಂದು ಕೆಲವರು, ಇವರು ಕನ್ನಡ ನಾಡಿನವರೆ ಎಂದು ಮತ್ತೆ ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಗಂಗರ ವಂಶದ ಮೂಲದಂತೆಯೇ ಅವರ ಮತ ಧರ್ಮಗಳ ವಿಚಾರವಾಗಿ ಕೂಡ ತೀವ್ರವಾದ ವಿರುದ್ಧಾಭಿಪ್ರಾಯಗಳು ಕಂಡುಬರುತ್ತವೆ. "ಸುಮಾರು ನಾಲ್ಕನೆಯ ಶತಮಾನದಲ್ಲಿ ಇಕ್ಷ್ವಾಕುವಂಶಕ್ಕೆ ಸೇರಿದ ಸೋದರರಿಬ್ಬರು ಆ ಬಗೆಯ ಮಹತ್ವಾಕಾಂಕ್ಷೆಯಿಂದ ಪ್ರೇರಿತರಾಗಿ ಪೆರೂರಿಗೆ ಬಂದು ಗಂಗವಂಶ ಸ್ಥಾಪನೆಗೆ ಅಸ್ತಿವಾರ ಹಾಕಿದರು. ದೀಡಿಗ (ದಡಿಗ) ಮತ್ತು ಮಾಧವ ಎಂಬ ಹೆಸರಿನ ಈ ರಾಜಕುಮಾರರು ಇಕ್ಷ್ವಾಕುವಂಶದ ವಿಘಟನಾನಂತರ ದಕ್ಷಿಣಾಭಿಮುಖವಾಗಿ ಹೊರಟು ಗಂಗ ಪೆರೂರಿಗೆ ಬಂದಾಗ, ಅಲ್ಲಿ ಅವರಿಗೆ ಜೈನಾಚಾರ್ಯನಾದ ಸಿಂಹನಂದಿಯ ದರ್ಶನವಾಯಿತು. ಜೈನಾಚಾರ್ಯ ಈ ವರ್ಚಸ್ವೀ ಸೋದರರನ್ನು ಕಂಡು ಅವರಲ್ಲಿ ಆಸಕ್ತನಾಗಿ ಅವರ ಪೂರ್ವೋತ್ತರಗಳನ್ನು ತಿಳಿದುಕೊಂಡು ಅವರಿಗೆ ರಾಜೋಚಿತ ವಿದ್ಯಾಸಂಸ್ಕಾರವನ್ನು ನೀಡಿದುದಲ್ಲದೆ ಸ್ಥಳದೇವತೆಯಾದ ಪದ್ಮಾವತಿ ದೇವಿಯಿಂದ ವರಪ್ರಸಾದವನ್ನು ಕೊಡಿಸಿದನಂತೆ. ತತ್ಫಲವಾಗಿ ಅವರಿಗೆ ಖಡ್ಗಾಯುಧವೂ ರಾಜ್ಯಲಾಭದ ಭರವಸೆಯೂ ದೊರೆತುವಂತೆ.[2]" ಮೇಲಿನ ಹೇಳಿಕೆ ಯಾವುದೇ ಖಚಿತವಾದ ಚಾರಿತ್ರಿಕ ಅಂಶವನ್ನು ಪ್ರತಿಪಾದಿಸುವುದಿಲ್ಲ. ಈ ಹಿಂದೆಯೇ ಹೇಳಿರುವಂತೆ ಇವೆಲ್ಲಾ ಪ್ರತಿ ರಾಜವಂಶದ ಬಗೆಗೂ ಹುಟ್ಟಿಕೊಂಡಿರುವ ಕಥೆಗಳು. ಯಲಹಂಕ ನಾಡ ಪ್ರಭುಗಳ ಮೂಲಪುರುಷರ ಬಗೆಗಿನ ವಲಸೆಯ ಕಥೆಯೂ ಇಂಥದೆ ಆಗಿದೆ. ಇಂತಹ ಕಟ್ಟು ಕಥೆಗಳನ್ನು ಅಧಿಕೃತ ಚಾರಿತ್ರಿಕ ದಾಖಲೆಯಾಗಿ ಈಗಲೂ ಪರಿಗಣಿಸಬೇಕೆ ಎಂಬುದನ್ನು ವಿದ್ವಾಂಸರು ತೀವ್ರವಾಗಿ ಯೋಚಿಸಬೇಕಾಗಿದೆ. ಏಕೆಂದರೆ ಒಂದು ಸಾಮಾನ್ಯ ಘಟನೆ ಕಾಲಕಳೆದಂತೆ ಅದರಲ್ಲಿ ಪಾಲುಗೊಂಡ ವ್ಯಕ್ತಿ ದೊಡ್ಡವನಾಗಿದ್ದರೆ ನಾನಾ ರೀತಿಯ ಅವೈಜ್ಞಾನಿಕ ಕಲ್ಪನೆಗಳಿಗೆ ಎಡೆಮಾಡಿಕೊಡುತ್ತದೆ. ದಡಿಗ ಮತ್ತು ಮಾಧವ ಜೈನಾಚಾರ್ಯ ಸಿಂಹನಂದಿಯ ಸಹಾಯ ಪಡೆದಿರಬಹುದು. ಏಕೆಂದರೆ ಆಗ ಜೈನ ಧರ್ಮ ಪ್ರಬಲವಾಗಿದ್ದಿತು. ಆದರೆ ಪದ್ಮಾವತಿಯ ವರ ಮತ್ತು ಇಕ್ಷ್ವಾಕುವಂಶದ ಕಥೆಗಳು ಅವರು ರಾಜರಾದನಂತರ ಜನಸಾಮಾನ್ಯರಿಂದ ತಮ್ಮನ್ನು ಬೇರ್ಪಡಿಸಿ ಉನ್ನತವಾದ ಸ್ಥಾನ ದಲ್ಲಿಡಲು ಕಲ್ಪಿಸಿದುವೆಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಆದುದರಿಂದ ಕನ್ನಡ ನೆಲದ

---

[2] ಕರ್ನಾಟಕ ಇತಿಹಾಸ ದರ್ಶನ, ಸಂ. ಡಾ. ಎಂ.ವಿ. ಕೃಷ್ಣರಾವ್ ಮತ್ತು ಟಿ. ಕೇಶವ ಭಟ್ಟ, ಪುಟ 37

ಲ್ಲಿಯೇ ಜನಿಸಿದ ಇಬ್ಬರು ಯುವಕರು(ದಡಿಗ ಮತ್ತು ಮಾಧವ) ಜೈನಾಚಾರ್ಯ ಸಿಂಹನಂದಿಯ ಸಹಾಯದಿಂದ ರಾಜ್ಯಸ್ಥಾಪನೆ ಮಾಡಿರಬೇಕು.

ಭಾರತೀಯ ಮಾನವಶಾಸ್ತ್ರವನ್ನು ಗಮನಿಸಿದವರಿಗೆ ಈ ದೇಶದ ಬಹುಪಾಲು ಜನರು ಚತುರ್ವರ್ಣದವರಾಗಿ ವ್ಯವಸಾಯನಿರತರಾಗಿದ್ದುದು ಕಂಡುಬರುತ್ತದೆ. ಸಿಂಧು ಕಣಿವೆಯ ನಾಗರಿಕತೆಯ ಆಧಾರದಿಂದ ಹೇಳಬಹುದಾದರೆ ಆರ್ಯರು ಭಾರತಕ್ಕೆ ಬರುವುದಕ್ಕೆ ಮುಂಚೆಯೂ ಈ ಜನರು ವ್ಯವಸಾಯನಿರತರೇ ಆಗಿದ್ದರು. ಮುಂದೆ ರಾಜಸಂತತಿಗಳು ತಲೆ ಎತ್ತಿಕೊಂಡು ಆಳಲು ಆರಂಭಿಸಿದಾಗ ಇವರಲ್ಲಿ ಬಹುಪಾಲು ಯುದ್ಧಕಾಲದಲ್ಲಿ ರಾಜರಿಗೆ ಸಹಾಯ ಮಾಡುತ್ತ ಶಾಂತಿಕಾಲದಲ್ಲಿ ವ್ಯವಸಾಯ ನಿರತರಾಗಿ ಬದುಕುತ್ತಿದ್ದರೆಂದು ಕಂಡು ಬರುತ್ತದೆ. ಇವರಲ್ಲಿ ಅನೇಕರು ನಾಡು ಊರು ಮತ್ತು ದೇಶದ ಗೌಡರುಗಳಾಗಿರುತ್ತಿದ್ದರು. ಅಂತಹವರಲ್ಲಿ ರಾಜನಿಗೆ ನಿಷ್ಠರಾಗಿದ್ದವರಿಗೆ ರಾಜರು ಆಯಾ ಪ್ರಾಂತವನ್ನೇ ದತ್ತಿಯಾಗಿ ಕೊಡುತ್ತಿದ್ದರು. ಶಕ್ತಿಯುದ್ದವನು ಸಾಮಂತ ರಾಜನಾಗುತ್ತಿದ್ದ. ಕೇಂದ್ರ ದುರ್ಬಲವಾದಾಗ ಇಂತಹ ಸಾಮಂತರು ಸ್ವತಂತ್ರವಾಗಿ ಮುಂದೆ ಅವರೇ ರಾಜರೂ ಚಕ್ರವರ್ತಿಗಳೂ ಆಗುತ್ತಿದ್ದರು. ಹೀಗೆ ಮೇಲೇರಿದವರು ಕೂಡಲೇ ತಮ್ಮ ವಂಶದ ಬಗೆಗೆ ಉತ್ಪ್ರೇಕ್ಷೆಯ ಕಟ್ಟು ಕಥೆಗಳನ್ನು ಬರೆಯಿಸುವುದು ಅಥವಾ ಆ ಕಾಲಕ್ಕೆ ಪ್ರಬಲವಾಗಿದ್ದ ಧರ್ಮದ ಗುರುಗಳಿಗೆ ಶಿಷ್ಯರಾಗುವುದು–ಹೀಗೆ ಮಾಡಿ ತಮ್ಮ ಭದ್ರತೆಯನ್ನು ಕಾಪಾಡಿಕೊಳ್ಳುವ ಪ್ರಯತ್ನ ಮಾಡುತ್ತಿದ್ದರು. ಗಂಗರಾಜ್ಯಸ್ಥಾಪಕರಾಗಲಿ, ಯಲಹಂಕ ನಾಡಪ್ರಭುಗಳ ಮೂಲಪುರುಷರಾಗಲಿ ಹೀಗೆ ಜನಮಧ್ಯದಿಂದ ಬಂದವರೆಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಇಂತಹ ಕಥೆಗಳ ಆಧಾರಗಳಷ್ಟರಿಂದಲೇ ಯಾವುದೇ ಒಂದು ರಾಜವಂಶದ ಮತವಿಚಾರವನ್ನು ನಿರ್ಧರಿಸುವುದು ಸಾಧ್ಯವಲ್ಲದ ಮಾತು. ಅಲ್ಲದೆ ಮತ ಮತ್ತು ಧರ್ಮಗಳಿಗೆ ಅಸಾಧ್ಯವಾದ ಅಂತರವಿದೆ. ಜೈನರಲ್ಲದವರು ಜಿನನಿಗೆ, ಬ್ರಾಹ್ಮಣರಲ್ಲದವರು ಶಿವ, ವಿಷ್ಣುಗಳಿಗೆ ನಡೆದುಕೊಂಡಿರುವ ಉದಾಹರಣೆಗಳಿಗೆ ನಮ್ಮಲ್ಲಿ ಕೊರತೆಯೇನಿಲ್ಲ. ಕನ್ನಡ ಜನಪದ ಸಾಹಿತ್ಯದಲ್ಲಿ ದಂಡಿಗೆ ಹೋಗಿ ಸತ್ತು ಅಮರರಾದ, ಜಯಿಸಿ ರಾಜರಾದ, ಕೆಲವು ದುರಂತಗಳಿಗೆ ಒಳಗಾದ ಕಥೆಗಳು ಹೇರಳವಾಗಿವೆ. ಈ ಕಾರಣದಿಂದಾಗಿ ರಾಜವಂಶಗಳ ಬಗೆಗಿನ ಕಥೆಗಳನ್ನು ಚಾರಿತ್ರಿಕ ಆಧಾರಗಳಾಗಿ ತಗೆದುಕೊಳ್ಳುವಾಗ ತುಂಬಾ ಎಚ್ಚರಿಕೆಯಿಂದ ಇರಬೇಕಾಗುತ್ತದೆ.

ಕರ್ನಾಟಕದಲ್ಲಿ ಒಂದು ಪ್ರಮುಖ ಜನಾಂಗವಾಗಿರುವ ಒಕ್ಕಲಿಗರ ಮೂಲದಿಂದ ಗಂಗರು ಬಂದರೆಂಬ ವಾದವಿದೆ. ಗಂಗಡಿಕಾರ ಎಂಬುದು ದೇಶಸೂಚಕ ಗಂಗವಾಡಿಕಾರ ಎಂಬುದರಿಂದ ಬಂದಿದೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಅದೇನೇ ಇರಲಿ, ಗಂಗರು ಮೂಲತಃ ಜೈನರಲ್ಲ ಎಂಬುದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತವೆ. ಗಂಗರಸ ದುರ್ವಿನೀತನ ಶಾಸನವೊಂದರ ಬಗೆಗೆ ಇತಿಹಾಸ ತಜ್ಞರು ಬರೆಯುತ್ತಾ. "All these records are very late in date and in the face of the early evidence of the genuine grants it is not possible to assert that the early Gangas were Jains, though as tolerant monarchs they made donations to Jaina gurus and temples........There is no evidence that the

early Gangas were personally Jains. On the contrary they were followers of the Vedic religion, celeberating sacrifices which involved the immolation of animals and worshiping of Shiva, Vishnu, Kathyayani and other deities"[3] ಎಂದು ಅಭಿಪ್ರಾಯಪಟ್ಟಿದ್ದಾರೆ. ಗಂಗರು ಧರ್ಮಸಮನ್ವಯದವರೆಂದೂ, ಪ್ರಾಣಿಬಲಿಯಲ್ಲಿ ನಿರತರಾಗಿದ್ದುದ್ದರಿಂದ ಇವರು ಚತುರ್ಥವರ್ಣಕ್ಕೆ ಸೇರಿದವರೆಂದೂ ಆಗುತ್ತದೆ. ಗಂಗಡಿಕಾರ ಒಕ್ಕಲಿಗರು ಸಹ ಶಿವ ಮತ್ತು ವಿಷ್ಣುವನ್ನು ಪೂಜಿಸುತ್ತಾರೆ. "Gangadikaras worship both Shiva and Vishnu and have also family gods to whom they show special reverence. They worship minor gods and goddeses, such as Munisvara, Maramma and Durgamma. Bhaire Devaru of Chunchanagiri near Nagamangala is the family god of many of them[4] ಮೇಲಿನ ಹೇಳಿಕೆಯಲ್ಲಿ ಧಾರ್ಮಿಕ ನಡವಳಿಕೆಯಲ್ಲಿ ಗಂಗರಿಗೂ ಗಂಗಡಿಕಾರ ಒಕ್ಕಲಿಗರಿಗೂ ಇರುವ ಸಾಮ್ಯವನ್ನು ಕಾಣಬಹುದು. ಗಂಗಡಿಕಾರ ಒಕ್ಕಲಿಗರು ಆನೆಕುಲದವರೆಂದು ಇಂದಿಗೂ ಹೇಳಿಕೊಳ್ಳುತ್ತಾರೆ. ಗಂಗರ ಲಾಂಛನ ಆನೆ ಎಂಬುದನ್ನು ಗಮನಿಸಿದಾಗ ಗಂಗರು ಗಂಗಡಿಕಾರ ಕುಲದವರಾಗಿದ್ದು, ಈ ಹಿಂದೆ ಸೂಚಿಸಿರುವಂತೆ ರಾಜಗದ್ದುಗೆ ಏರಿರಬೇಕೆಂದು ಊಹಿಸಲು ಅವಕಾಶವಿದೆ.*

ಬೆಂಗಳೂರು, ಕೋಲಾರ, ಚಿತ್ರದುರ್ಗ ಜಿಲ್ಲೆಯ ಒಕ್ಕಲಿಗರನ್ನು ಮೊರಸೊಕ್ಕಲಿಗರೆಂದು ಕರೆಯುತ್ತಾರೆ. ಇದರ ಬಗೆಗೂ ದೇಶಸೂಚಕ ಮೊರಸುನಾಡಒಕ್ಕಲು ಮೊರಸೊಕ್ಕಲಾಗಿದೆ ಎಂದು ಅಭಿಪ್ರಾಯವಿದೆ. ಅದೇನೇ ಇರಲಿ, ಗಂಗರು ಜೈನರೆಂಬ ಬಗೆಗೆ ಈ ಹಿಂದೆ ಹೇಳಿದ ಉದಾಹರಣೆಗೆ ಪೋಷಕವಾಗಿ ಈ ಭಾಗದ ಉದಾಹರಣೆಯೊಂದು ಸ್ವಾರಸ್ಯಪೂರ್ಣವಾಗಿದೆ. ಈ ಭಾಗದ ಒಕ್ಕಲಿಗರ ಒಂದು ಪಂಗಡ ಜೈನರಾದ ಬಗೆಗೆ ಒಂದು ಕಥೆ ಹೀಗಿದೆ : ಶಿವ ಭಸ್ಮಾಸುರನಿಗೆ ಕೇಳಿದ ವರ ಕೊಟ್ಟ. ಅವನು ಅದನ್ನು ಶಿವನ ಮೇಲೆಯೇ ಪ್ರಯೋಗಿಸಲು ಆಶಿಸಿದ. ಅಪಾಯವರಿತ ಶಿವ ಭೂಲೋಕದತ್ತ ಓಡಿದ. ಆದರೆ ಭಸ್ಮಾಸುರ ಅವನನ್ನು ಹಿಂಬಾಲಿಸಿದ. ಶಿವ ಹೊಲವೊಂದರ ರಾಗಿ ತೆಂಡೆಯಲ್ಲಿ ಅವಿತ. ಅಲ್ಲಿಗೆ ಬಂದ ಭಸ್ಮಾಸುರ ಶಿವನ ಬಗೆಗೆ ಅಲ್ಲಿಯೆ ಇದ್ದ ಒಕ್ಕಲಿಗನನ್ನು ಕೇಳಿದ. ಅವನಿಗೆ ಧರ್ಮಸಂಕಟಕ್ಕಿಟ್ಟುಕೊಂಡಿತು. ನಿಜ ಹೇಳುವಂತಿಲ್ಲ, ಸುಳ್ಳು ಹೇಳುವಂತಿಲ್ಲ. ಕಡೆಗೆ ತನ್ನ ಉಂಗುರ ಬೆರಳನ್ನು ರಾಗಿ ತೆಂಡೆಯತ್ತ ತೋರಿ ನಿಂತ. ಅದರಿಂದ ಶಿವನ ಸುಳಿವರಿತ ರಾಕ್ಷಸ ಅತ್ತ ನುಗ್ಗಿದ, ಅಷ್ಟರಲ್ಲಿ ಅಪಾಯವರಿತ ವಿಷ್ಣು ಮೋಹಿನಿ ರೂಪತಾಂತು ಬಂದು ಶಿವನನ್ನು ಪಾರುಮಾಡಿದ. ಅಪಾಯದಿಂದ ಪಾರಾದ ಶಿವ ಮೋಹಿನಿಯ ರೂಪಿಗೆ ಮಾರುಹೋದ. ಅವರಿಬ್ಬರೂ ಕೂಡಿದರು. "and the result was immediate production of three lingas, respectively called Jinnelinga Kallelinga,

---

[3] *Early Gangas of talkad*, S. Srikanta Sastry, p. 45

[4] *Mysore Tribes and Casts*, Vol. 3, page 183

* ಇತ್ತೀಚಿಗೆ ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ History of the Western Gangas ಗ್ರಂಥದಲ್ಲಿ ಗಂಗರು, ಗಂಗಡಿಕಾರ ಒಕ್ಕಲಿಗರೆಂದು ಒಪ್ಪಲಾಗಿದೆ.

and Bhairavalinga which was the very embodiment of Shiva's essence. He thereupon assigned the first to the Jainas, the second to the Kurabas and the third to the Marasu Vakkaligaru for worship"[5] ಈ ಎಲ್ಲಾ ಹೇಳಿಕೆಗಳೂ ಗಂಗರು, ಗಂಗಡಿಕಾರರು ಮತ್ತು ಮರಸುಒಕ್ಕಲಿಗರ ದೇವರು ಮತ್ತು ಸಂಪ್ರದಾಯಗಳಲ್ಲಿ ಸಾಮ್ಯವಿರುವುದನ್ನು ಸ್ಫುಟಪಡಿಸುತ್ತವೆ. ಕೋಲಾರವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದ ಗಂಗರಿಗೆ ಜೈನಧರ್ಮದ ಪ್ರಭಾವ ಉಂಟಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ಅಲ್ಲದೆ ರಾಜನಾದವನು ಎಲ್ಲ ಮತಧರ್ಮಗಳನ್ನು ಸಮಾನವಾಗಿ ಕಾಣುವುದು ಈ ನಾಡಿನ ಪದ್ಧತಿ. ಒಕ್ಕಲಿಗರಂತೂ ಇಂದಿಗೂ ಎಲ್ಲಾ ಧರ್ಮ ಮತ್ತು ದೇವರುಗಳಿಗೂ ನಡೆದುಕೊಳ್ಳುತ್ತಾರೆ. ಇದೇ ಪರಂಪರೆಗೆ ಸೇರಿದ ಆ ಸುತ್ತಿನ ಪಾಳೆಯಗಾರರು, ಗಂಗರು ಕೋಲಾರದಿಂದ ತಲಕಾಡಿಗೆ ಬಂದ ಅನಂತರ ಆ ಭಾಗದ ಆಡಳಿತ ನೋಡಿಕೊಳ್ಳುತ್ತಿದ್ದು, ಗಂಗರ ಅವನತಿಯ ಅನಂತರ ಸ್ವತಂತ್ರರಾಗಿರಬಹುದು. ಅಂತಹ ವಂಶಗಳಲ್ಲಿ ಯಲಹಂಕ ನಾಡ ಪ್ರಭುಗಳ ವಂಶವೂ ಒಂದಾಗಿರುವುದು ಅಸಾಧ್ಯವೇನಲ್ಲ.

ಸುಮಾರು ಹನ್ನೆರಡನೆಯ ಶತಮಾನದಿಂದಲೂ ಆವತಿನಾಡು ಅಸ್ತಿತ್ವದಲ್ಲಿದ್ದಂತೆ ಕಂಡುಬರುತ್ತದೆ. ಅದಕ್ಕಿಂತ ಹಿಂದೆ ಆವತಿ ಇರಲಿಲ್ಲವೆಂದಲ್ಲ. ಏಕೆಂದರೆ, ಗಂಗರ ಕಾಲದಲ್ಲಿಯೇ ಈ ಊರುಗಳೆಲ್ಲ ನಿರ್ಮಾಣಗೊಂಡಿದ್ದುವು. ಆದರೆ, ಇದು ಒಂದು ಪಾಳೆಯಪಟ್ಟಿನ ಮುಖ್ಯ ಊರಾದುದು ಸರಿಸುಮಾರಿಗೆ ಈ ಕಾಲದಲ್ಲಿ ಎಂದು ಹೇಳಬಹುದು. ಮುಂದೆ ಹದಿಮೂರನೆಯ ಶತಮಾನದ ಆದಿಯಿಂದ ಇದು ಯಲಹಂಕ ನಾಡಾಗಿ ಪರಿವರ್ತಿತವಾಗಿರುವ ಸೂಚನೆಗಳಿವೆ. ಶಕ 1267ರ ಶಾಸನವೊಂದರಲ್ಲಿ "ಶ್ರೀಮನ್ಮಹಾಮಂಡಳೇಶ್ವರಂ ತ್ರಿಭುವನ ಮಲ್ಲ ನಂದಗಿರಿನಾಥ ಬಂಡಿಕುಲ ಕಮಲವಿಕಸಿತ ದಿವಾಕರ ಅಣ್ಣನಂಕಕಾಜಿ ದೇಜಿ ದೇವರಸರು ಯಲಹಂಕ ನೆಲೆವೀಡಿನೊಳು ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯು"[6]ತ್ತಲಿದ್ದ ವಿಷಯದ ಉಲ್ಲೇಖವಿದೆ. ಇದು ಎರಡು ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ. ಒಂದು ಗಂಗರ ಅನಂತರ ಈ ವಂಶದವರು ಸ್ವತಂತ್ರ ರಾಜರೆಂದು ಹೇಳಿಕೊಂಡು ಆವತಿಯಿಂದ ತಮ್ಮ ರಾಜಧಾನಿಯನ್ನು ಯಲಹಂಕಕ್ಕೆ ಬದಲಾಯಿಸಿದರೆಂಬುದು ಮತ್ತೊಂದು ಯಲಹಂಕದ ದೊರೆಗಳು ಇನ್ನೂ ಹೊಯ್ಸಳರ ಸಾಮಂತರಾಗಿರಲಿಲ್ಲವೆಂಬುದು. ಮುಂದೆ ಇವರು ಹೊಯ್ಸಳರಿಗೆ ಸಾಮಂತರಾದ ಬಗೆಗೆ ಆಧಾರಗಳು ದೊರೆಯುತ್ತವೆ. ಶಕ 1251ರ ಶಾಸನವೊಂದರಲ್ಲಿ "ಎಲಹಂಕನಾಡ ಯಚಣಗವುಡಂಗೆ ಕುಜುಂಪಗೆರೆಯ ಚತುಸ್ಸೀಮೆಯನು" ಕೊಟ್ಟ ಉಲೇಖವಿದೆ. ಇವನು ದೇವರಸಗೌಡನ ತಂದೆಯಾಗಿದ್ದಿರಬೇಕು. ಮತ್ತೊಂದು ಗಮನಿಸಬೇಕಾದ ಅಂಶವೆಂದರೆ ಯಚಣಗವುಡ ಇನ್ನೂ ಅರಸನಾಗಿರಲಿಲ್ಲವೆಂಬುದು. ಇಷ್ಟಾದರೂ ದೇವರಸಗೌಡ ಹೊಯ್ಸಳರಿಗೆ ಅಧೀನನಲ್ಲದಂತೆ ನಡೆದುಕೊಂಡಿರುವುದು ಆಶ್ಚರ್ಯದ ಸಂಗತಿಯಾಗಿದೆ. ಮುಂದೆ ಶಕ1265ರ ಶಾಸನವೊಂದರಲ್ಲಿ "ಸ್ವಸ್ತಿ ಶ್ರೀ ಶಕಾಬ್ದ ೧೨೬೫ನೆಯ ಚೈತ್ರ ಭಾನು ಸಂ ೧ ಆಶ್ವೀಜ ಶು ೫ ಬ್ರೀ ಶ್ರೀಮತು ಪ್ರತಾಪ ಚಕ್ರವರ್ತಿ ಶ್ರೀ ಹೊಯ್ಸಳ ಶ್ರೀ ವೀರಬಲ್ಲಾಳದೇವರಸರು ಉಣ್ಣಾಮಲೆ ಪಟ್ಟಣದಲು ಪ್ರಿಥ್ವಿ ರಾಜ್ಯಂಗೆಯ್ಯುತ್ತಿರಲು ಶ್ರೀಮತು ಮಹಾಯಲಹಂಕನಾಡ ಸಮಸ್ತ ಪ್ರಜೆಗವುಂಡುಗಳೂ ಮನು

---

[5] *The Indian Antiquary*, page 50.

[6] *Epigraphia Carnatica*, Vol.

ಮಹಾಸಾಮಂತಾಧಿಪತಿ ಮಾಸೆಯುರ ಗಂಡ[7] ಭೈರದೇವನ ಮಗ ಚಿಕ್ಕಭೈರದೇವನು ನಾಡಸೇನ ಬೋವ ಆಲಾಳನಿಗೆ "ಶಿಲಾಶಾಸನವ ಮಾಡಿ" ದತ್ತಿಬಿಟ್ಟ ಪ್ರಸಂಗ ಉಲ್ಲೇಖಗೊಂಡಿದೆ. ಇದು ಯಲಹಂಕ ನಾಡು ಹೊಯ್ಸಳರ ಸಾಮಂತ ರಾಜ್ಯವಾಗಿತ್ತೆಂಬುದನ್ನು ಖಚಿತಪಡಿಸುತ್ತದೆ.

ದೇವರಸಗೌಡ ಬಹುಮಟ್ಟಿಗೆ ಯಲಹಂಕನಾಡನ್ನು ವಿಸ್ತರಿಸಿದವನು. ಈತ ಯುದ್ಧ ಚತುರನೂ ಮಹಾ ಬುದ್ಧಿಶಾಲಿಯೂ ಆಗಿದ್ದಂತೆ ಕಂಡುಬರುತ್ತದೆ. ಶಾಸನದಲ್ಲಿ ಉಕ್ತವಾಗಿ ರುವ ತ್ರಿಭುವನಮಲ್ಲ, ಅಣ್ಣನಂಕಕಾಱ ಈತನ ಶೌರ್ಯಸೂಚಕ ಬಿರುದುಗಳಾದರೆ, "ಬಂಡಿಕುಲ ಕಮಲ ವಿಕಸಿತ ಕಮಲ ದಿವಾಕರ" ಎಂಬ ಬಿರುದು ಈತ ಯಲಹಂಕನಾಡ ಪ್ರಭು ವಂಶಕ್ಕೆ ಅಪಾರಕೀರ್ತಿ ತಂದವನು ಅರ್ಥಾತ್ ರಾಜ್ಯವಿಸ್ತಾರಮಾಡಿದವನೆಂಬುದನ್ನು ಸೂಚಿಸುತ್ತದೆ. ದೇವರಸನಿಂದ ಸಾಮಂತ ರಾಜ್ಯದ ಮಟ್ಟಕ್ಕೇರಿದ ಯಲಹಂಕ ನಾಡು ಮುಂದೆ ಅದರ ಅಂತ್ಯದ ವರೆವಿಗೂ ಅದನ್ನು ಉಳಿಸಿಕೊಂಡೇ ಬಂದಿತು. ಹೀಗೆ ಆವತಿಯ ಪಾಳೆಯಗಾರರ ವಂಶವೊಂದು ತನ್ನ ಸ್ವಶಕ್ತಿ ಮತ್ತು ಸಾಮರ್ಥ್ಯಗಳಿಂದ ಮೇಲೇರಿ, ರಾಜಗದ್ದುಗೆಯನ್ನು ಹತ್ತಿತು. ಆದುದ ರಿಂದ ಈ ವಂಶದರು ಯಣಮಂಜಿಪುತ್ತೂರಿನಿಂದ ವಲಸೆ ಬಂದು, "ದೇವನಹಳ್ಳಿ ತಾಲೂಕಿನ ಈಗಿನ ಆವತಿ ಗ್ರಾಮದ ಪ್ರದೇಶವನ್ನು ಸೇರಿ, ಉಚಿತವಾದ ಕುಟೀರಗಳನ್ನು ನಿರ್ಮಿಸಿಕೊಂಡು ವ್ಯವಸಾಯವನ್ನು ಕೈಗೊಂಡು ಸುತ್ತಲೆಲ್ಲಾ ಕಾಡಾಗಿದ್ದ ಪ್ರದೇಶವನ್ನು ಹಂತಹಂತವಾಗಿ ನಾಡ ನ್ನಾಗಿ ಮಾಡುತ್ತಾ ಜೀವನ ಸಾಗಿಸತೊಡಗಿದರು"[8] ಎಂಬುದಾಗಲಿ, ಈ ವಂಶದ ಮೂಲಪುರುಷ ನೆಂದು ಕರೆಯಲಾಗಿರುವ ರಣಭೈರೇಗೌಡ ಎಂಬುವನಿಗೆ "ಮಲ್ಲಭೈರೇಗೌಡ, ಸಣ್ಣಭೈರೇಗೌಡ, ವೀರೇಗೌಡ, ಮರಿಗೌಡ, ಗಿಡ್ಡೇಗೌಡ, ತಮ್ಮೇಗೌಡ, ಗಿಡ್ಡಪ್ಪಗೌಡ[9]" ಎಂಬ ಹೆಸರಿನ ಏಳು ಮಂದಿ ಸಹೋದರರಿದ್ದರೆಂಬುದಾಗಲಿ ಸರಿಯಲ್ಲ. ಇಲ್ಲಿ ಸೇರಿಸಿರುವ ಅನೇಕ ಹೆಸರುಗಳು ಯಲಹಂಕ ನಾಡಿನ ಅಧೀನ ಪಾಳೆಯಗಾರರ ಹೆಸರುಗಳಾಗಿವೆ. ಸುಗಟೂರು ತಮ್ಮಣ್ಣಗೌಡನ ಹೆಸರನ್ನು ಈ ಪಟ್ಟಿಯಲ್ಲಿ ಸೇರಿಸಲಾಗಿದೆ. ಆದರೆ ಈತ ಕೆಂಪನಂಜೇಗೌಡನ ಕಾಲದವನು. ಹೊಳವನಹಳ್ಳಿಯ ರಣಭೈರೇಗೌಡನನ್ನು ಈ ವಂಶದ ಮೂಲಪುರುಷನೆಂಬಂತೆ ಕಾಣಿಸಲಾಗಿದೆ. ಸುಮಾರು 1240ರ ಶಾಸನವೊಂದರಲ್ಲಿ ಬಯಿರದೇವ ಎಂಬುವನು ಶ್ರೀಮನ್ಮಹಾ ಯಲಹಂಕ ನಾಡ ಪ್ರಭುಗಳು ಬಯಿರದೇವ, ಮಾರಗವುಡ, ತಾಯಿಯಪ್ಪ, ಮಾಯಿದೇವ, ಕನ್ನಗೌಡ ಮುಂತಾದ ತನ್ನ ಹಿರಿಯರಿಗೆ ದತ್ತಿಬಿಟ್ಟ ಶಾಸನವಿದೆ. ಇಂತಹ ಅನೇಕ ದತ್ತಿಯ ಶಾಸನಗಳು ಯಲಹಂಕ ನಾಡಿನಲ್ಲಿ ದೊರೆಯುತ್ತವೆ. ಆದರೆ ಯಾವ ಶಾಸನದಲ್ಲಿಯೂ ರಣಭೈರೇಗೌಡ ಈ ವಂಶದವರ ಪಟ್ಟಿಯಲ್ಲಿ ಉಕ್ತವಾಗಿಲ್ಲ. ಯಲಹಂಕದ ಸುತ್ತಮುತ್ತಲಿನ ಪಾಳೆಯಗಾರರೆಲ್ಲಾ ಗೌಡಪ್ರಭು ಗಳೇ ಆಗಿದ್ದು, ಹೆಸರಿನ ಸಾಮ್ಯವಿರುವುದರಿಂದ ಚರಿತ್ರಕಾರರಲ್ಲಿ ಈ ಗೊಂದಲ ಉಂಟಾಗಿರುವಂತೆ ಕಾಣುತ್ತದೆ.

ದೇವರಸಗೌಡನ ಅನಂತರ ಯಲಹಂಕನಾಡಿನ ಸಿಂಹಾಸನಕ್ಕೆ ಬಂದವನು ಭೈರದೇವ.

---

7 E. C. Vol. 9, ಬೆಂಗಳೂರು, 21 ನಂಬರಿನ ಶಾಸನ

8 ಬೆಂಗಳೂರು ಕೆಂಪೇಗೌಡ, ಡಾ. ಎಂ. ವಿ. ಕೃಷ್ಣರಾವ್, ಪುಟ 13

9 ಬೆಂಗಳೂರು ಕೆಂಪೇಗೌಡ, ಡಾ. ಎಂ. ವಿ. ಕೃಷ್ಣರಾವ್, ಪುಟ 6

ಈತನನ್ನು ಅನೇಕ ಶಾಸನಗಳು "ಬಂಡಿಕುಲತಿಲಕ, ಮೀಸೆಯರಗಂಡ" ಎಂದು ಹೊಗಳಿವೆ. ಈತ ಅದ್ವಿತೀಯ ಶೂರನೂ ಪ್ರಜಾಪಾಲಕನೂ ಆಗಿದ್ದ. ಭೈರದೇವನಿಗೆ ಅಲಾಳನೆಂಬ ನಾಡಸೇನಬೋವನ ಸಹಾಯವಿತ್ತು. ಈತನ ಹೆಸರು ಬರುವಲ್ಲೆಲ್ಲಾ ಅಲಾಳನ ಹೆಸರು ತಪ್ಪದೆ ಬರುತ್ತದೆ. ಈತ ತನ್ನ ನಾಡಿನ ಎಲ್ಲಾ ಕಡೆಗಳಲ್ಲಿಯೂ ಕೆರೆಗಳು ಮತ್ತು ದೇವಾಲಯಗಳನ್ನು ನಿರ್ಮಿಸಿದ. ಈತನ ಸುಂಕದ ಅಧಿಕಾರಿಯೊಬ್ಬ ಸುಗ್ಗೇಹಳ್ಳಿಯಲ್ಲಿದ್ದ ಬಗೆಗೆ ಶಾಸನೋಲ್ಲೇಖವಿದೆ. ಈತನ ಮಗ ಚಿಕ್ಕಭೈರದೇವ ಸು. 1340ರಲ್ಲಿ ಹಾಕಿಸಿದ ಶಾಸನವೊಂದರಲ್ಲಿ "ಶ್ರೀಮನ್ಮಹಾಪಸಾಯಿತರುಮಪ್ಪ ಮೀಸೆಯರಗಂಡ, ಚಿಕ್ಕ ಬಯಿರೆನಾಯಕರು ಶ್ರೀಮನ್ಮಹಾ ಯಲಹಂಕ ನಾಡ ಪ್ರಭುಗಗಳು ಬಯಿರದೇವ, ಮಾರಗವುಂಡ"[10]ಮುಂತಾದ ಹಿರಿಯರು ಮತ್ತು "ನಾಡಸೇನ ಬೋವ ಅಲಾಳರಿಗೆ"[11] ಜಕ್ಕೂರು ಗದ್ದೆಯನ್ನು ಶಿಲಾಶಾಸನ ಹಾಕಿ ದತ್ತಿಬಿಟ್ಟ ಪ್ರಸಂಗದ ಉಲ್ಲೇಖವಿದೆ. ನಾಡಸೇನ ಬೋವ ಅಲಾಳ ಇಲ್ಲಿ ಗಮನಾರ್ಹ ವ್ಯಕ್ತಿಯಾಗುತ್ತಾನೆ. ಏಕೆಂದರೆ, ಯಲಹಂಕ ನಾಡಿನ ದೊರೆಗಳ ಚರಿತ್ರೆಯಲ್ಲಿ ಶಾನುಭೋಗ ಪ್ರಸಂಗವೊಂದರ ಉಲ್ಲೇಖ ಬರುತ್ತದೆ. ಅದರ ಕಥೆ ಹೀಗಿದೆ : ಒಂದಾನೊಂದು ರಾಜ್ಯ. ಅದರ ರಾಜ ಬಂಡಿ ಬೋರೇಗೌಡ. ಅವನಿಗೆ ಅಧಿಕಾರ, ಅಂತಸ್ತು, ಐಶ್ವರ್ಯ ಹೀಗೆ ಸಕಲವೂ ಇದೆ. ಆದರೆ, ತನ್ನ ವಂಶದ ಕುಡಿಯನ್ನು ಮುಂದುವರಿಸಬಲ್ಲ ಸಂತಾನವಿಲ್ಲ. ಬಂಡಿಬೋರೇಗೌಡ ತನ್ನ ಆರಾಧ್ಯ ದೈವ ರಂಗಧಾಮನಿಗೆ ಮೊರೆಹೊಕ್ಕ. ಕಡೆಗೆ ಅವನಿಗೆ ಒಬ್ಬ ಮಗ ಹುಟ್ಟಿದ. ಆ ಮಗು ಮೂಲಾ ನಕ್ಷತ್ರದಲ್ಲಿ ಹುಟ್ಟಿದುದರಿಂದ ತಂದೆತಾಯಿಯರಿಗೆ ಮರಣವುಂಟಾಯಿತು. ಆಸ್ತಿಪಾಸ್ತಿಗಳೆಲ್ಲ ಸಾಲಗಾರರ ಪಾಲಾಯಿತು. ಈ ಹಿಂದೆಯೇ ಬಂಡಿಬೋರೇಗೌಡನ ಹಿರಿಯ ಮಗನೊಬ್ಬ ಸತ್ತಿದ್ದ. ಅವನ ವಿಧವೆ ಹೆಂಡತಿ ಹರಿಯಾಲಮ್ಮ ತಬ್ಬಲಿಯಾದ ಮೈದುನನನ್ನು ಸಾಕುವ ಹೊಣೆ ಹೊತ್ತಳು. ನಿರ್ಗತಿಕರಾದ ಇವರು ತಮ್ಮ ರಾಜ್ಯದಿಂದ ಮಾಗಡಿ ಪಟ್ಟಣಕ್ಕೆ ಬಂದರು. ಹುಡುಗ ಕೆಂಪೇಗೌಡ ಅಲ್ಲಿನ ಶಾನುಭೋಗರ ಮನೆಯಲ್ಲಿ ಕೆಲಸಕ್ಕೆ ಸೇರಿದ. ಒಂದು ದಿನ ಅವನು ತೋಟದ ಬಾಳೆನೆರಳಿನಲ್ಲಿ ಮಲಗಿದ್ದ. ಅವನ ಮುಖದಮೇಲೆ ಬಿಸಿಲು ಬೀಳುತ್ತಿತ್ತು. ಆಗ ಏಳು ಹೆಡೆಯ ಸರ್ಪವೊಂದು ಅವನ ಮುಖಕ್ಕೆ ಬಿಸಿಲು ಬೀಳದಂತೆ ಹೆಡೆ ಬಿಚ್ಚಿ ನೆರಳು ಮಾಡಿತು. ತೋಟಕ್ಕೆ ಬಂದ ಶಾನುಭೋಗ ಈ ದೃಶ್ಯ ಕಂಡು, ಆ ಹುಡುಗನಿಗೆ ರಾಜಯೋಗವಿದೆ ಎಂದುಕೊಂಡ. ಅಂದಿನಿಂದ ಕೆಂಪೇಗೌಡನಿಗೆ ಅವನು ಎಲ್ಲಿಲ್ಲದ ಆತಿಥ್ಯ ನಡೆಸಲಾರಂಭಿಸಿದ. ನೀನು ರಾಜನಾದರೆ, ನನಗೆ ಮಂತ್ರಿಪದವಿ ಕೊಡುತ್ತೀಯಾ? ಎಂದ ಅವನಿಗೆ, ಕೆಂಪೇಗೌಡ ಆಗಲಿ ಎಂದು ಮಾತುಕೊಟ್ಟ. ಆ ಊರ ರಾಜನಿಗೆ ಮಕ್ಕಳಿರಲಿಲ್ಲ. ರಾಜ್ಯದ ಉತ್ತರಾಧಿಕಾರಿಯನ್ನು ಆರಿಸಲು ಆನೆಯ ಸೊಂಡಿಲಿಗೆ ಹಾರ ಕೊಟ್ಟರು. ಅದು ಶಾನುಭೋಗರ ಮನೆಯ ಆಳಾದ ಕೆಂಪೇಗೌಡನಿಗೆ ಹಾರ ಹಾಕಿತು. ಅವನು ರಾಜನಾದ." ಹೀಗೆ ಕೆಂಪೇಗೌಡ ಕೆಲಸಕ್ಕಿದ್ದ ಶಾನುಭೋಗನ ಹೆಸರು ಅಣ್ಣೋಜಿ ಎಂದು ಜನಪದ ಗಾಯಕರು ಹೇಳುತ್ತಾರೆ. ಶಾಸನೋಕ್ತ ಅಲಾಳಜೀಯೇ ಈ ಅಣ್ಣೋಜಿ ಎಂಬುದರಲ್ಲಿ ಅನುಮಾನವಿಲ್ಲ. ಆದರೆ, ಅಲಾಳ ಯಲಹಂಕ

---

[10] *Epigraphia Carnatika*, Vol. 9, ಬೆಂ. 21

[11] ಅದೇ 21

ನಾಡ ದೊರೆಗಳಿಗೆ ಆಪ್ತನಾಗಿದ್ದು, ಅವರ ಆಡಳಿತದಲ್ಲಿ ಸಹಾಯಕವಾಗಿದ್ದವನು. ಚಾರಿತ್ರಿಕ ನಿಖರತೆಯಿಲ್ಲದ ಜನಪದ ಗಾಯಕರು ಮಾಗಡಿ ಕೆಂಪೇಗೌಡ ಅಥವಾ ಎರಡನೆಯ ಕೆಂಪೇಗೌಡನ ಕಾಲದಲ್ಲಿ ಉಂಟಾದ ಧಾರ್ಮಿಕ ಘರ್ಷಣೆಗೂ ಅಲಾಳನಿಗೂ ಗಂಟುಹಾಕಿದಂತೆ ಕಾಣುತ್ತದೆ.

ಒಂದನೆಯ ಭೈರದೇವನ ನಂತರ ಸುಮಾರು 1342ರಿಂದ ಬೆಂಗಳೂರು ನಿರ್ಮಾಪಕ ಒಂದನೆಯ ಕೆಂಪೇಗೌಡನ ವರೆಗೆ ಮಾರಗೌಡ, ಜಯಗೌಡ, ನಂಜಪ್ಪಗೌಡ, ಮತ್ತು ಕೆಂಪನಂಜೇಗೌಡ, ಹೀಗೆ ಅನೇಕರು ಯಲಹಂಕ ನಾಡಿನ ಅಧಿಪತಿಗಳಾಗಿ ಆಳಿದ ದಾಖಲೆಗಳು ದೊರೆಯುತ್ತವೆ. ಈ ಮಧ್ಯೆ ಒಬ್ಬಿಬ್ಬರು ಅಲ್ಪಸಲ್ಪ ಕಾಲ ಆಳಿರುವವರ ಹೆಸರುಗಳೂ ದೊರೆಯುತ್ತವೆ. ಇವರಲ್ಲಿ ಜಯಗೌಡ ಮತ್ತು ಕೆಂಪನಂಜೇಗೌಡ ಹೆಸರುವಾಸಿಯಾದವರಾಗಿದ್ದರು. ಜಯಗೌಡ ಒಂದನೆಯ ಭೈರದೇವನನ್ನು ಬಹುಶಃ ಮಾದರಿಯಾಗಿಟ್ಟುಕೊಂಡು ಅನೇಕ ಕೆರೆಗಳನ್ನು ಕಟ್ಟಿಸಿ ಜನರು ವ್ಯವಸಾಯನಿರತರಾಗುವಂತೆ ಮಾಡಿದ. ದೇವಾಲಯಗಳನ್ನು ಕಟ್ಟಿಸಿದ್ದರೊಂದಿಗೆ ಹಳೆಯವನ್ನು ದುರಸ್ತು ಮಾಡಿಸಿದ. ಕೆಂಪನಂಜೇಗೌಡನ ಕಾಲದ ಹೊತ್ತಿಗಾಗಲೆ ಯಲಹಂಕ ನಾಡು ವಿಜಯನಗರದ ಸಾಮಂತ ರಾಜ್ಯವಾಗಿದ್ದಿತು. ಕೆಂಪನಂಜೇಗೌಡ ವಿಜಯನಗರದ ಅರಸರ ಪ್ರೀತಿವಿಶ್ವಾಸಗಳಿಗೆ ಪಾತ್ರನಾಗಿದ್ದ. ದಕ್ಷಿಣದ ಕಡೆಯಿಂದ ವಿಜಯನಗರದ ಮೇಲೆ ಶತ್ರುಗಳು ದಾಳಿ ಮಾಡದಂತೆ ತಡೆಯಬಲ್ಲ ಶಕ್ತಿ ಕೆಂಪನಂಜೇಗೌಡನದಾಗಿತ್ತು. ಈತನ ಮಗನೇ ಒಂದನೆಯ ಕೆಂಪೇಗೌಡ, ಬೆಂಗಳೂರು ನಗರ ನಿರ್ಮಾಪಕನೆಂದು ಹೆಸರಾಂತವನು. ಕ್ರಿ.ಶ. 1531ರಿಂದ, ಅಂದರೆ ಒಂದನೆಯ ಕೆಂಪೇಗೌಡನಿಂದ, ಈ ವಂಶದ ಕಡೆಯ ಅರಸನಾದ ಕ್ರಿ.ಶ. 1716 ರ ಮುಮ್ಮಡಿ ಕೆಂಪವೀರಪ್ಪಗೌಡನ ವರೆಗೆ ಚರಿತ್ರಕಾರರು ಸಾಕಷ್ಟು ವಿವರವಾಗಿ ಬರೆದಿದ್ದಾರೆ. ಆದುದರಿಂದ ಈ ಲೇಖನದಲ್ಲಿ ಅವುಗಳ ವಿವರಗಳಿಗೆ ಹೋಗುವ ಆವಶ್ಯಕತೆ ಕಂಡುಬರುವುದಿಲ್ಲ. ಬೆಂಗಳೂರು ಕೆಂಪೇಗೌಡನಿಗಿಂತ ಹಿಂದೆ ಸುಮಾರು ಮುನ್ನೂರು ವರ್ಷಗಳ ಕಾಲ ಯಲಹಂಕನಾಡನ್ನು ಈ ವಂಶದವರು ಆಳಿದ್ದಾರೆ. ಅದರ ರೇಖೆಗಳನ್ನು ಮಾತ್ರ ಈ ಲೇಖನದಲ್ಲಿ ಸೂಚಿಸಲಾಗಿದೆ. ಈ ಎಲ್ಲ ರಾಜರ ಬಗೆಗಿನ ದಾಖಲೆಗಳ ಆಧಾರವಿಲ್ಲದ ಅವರ ವಿಸ್ತೃತ ಚರಿತ್ರೆಯನ್ನು ರೂಪಿಸುವ ಆವಶ್ಯಕತೆಯಿದೆ. ಒಟ್ಟಿನಲ್ಲಿ ಕನ್ನಡನಾಡಿನ ಚರಿತ್ರೆ ಈ ದೃಷ್ಟಿಯಿಂದ ಪುನರ್ನಿರ್ಮಾಣವಾಗಬೇಕಾಗಿದೆ.

ಯಲಹಂಕ ನಾಡ ಮೂಲಪುರುಷರು ಹೊರಗಿನಿಂದ ಬಂದವರೆಂಬ ವಾದವನ್ನು ಈ ಹಿಂದೆಯೇ ಸೂಚಿಸಲಾಗಿದೆ. ಈ ಬಗೆಗೆ ಮತ್ತೂ ಒಂದು ವಾದವಿದೆ. ಕೆಲವರು ವಿದ್ವಾಂಸರು ಆಗಿನ ಕಾಲದಲ್ಲಿ ಕನ್ನಡ ನಾಡು ಕಾಂಜೀವರಂ ವರೆಗೆ ಇದ್ದಿತೆಂದು ಅಭಿಪ್ರಾಯಪಡುತ್ತಾರೆ. ಆದರೆ ಇದು ವಾಸ್ತವ ಸಂಗತಿ ಅನ್ನಿಸುವುದಿಲ್ಲ. ಏಕೆಂದರೆ ಹದಿನಾಲ್ಕನೆಯ ಶತಮಾನದ ಹೊತ್ತಿಗೆ ಕಾಂಜೀವರಂ ಮದರಾಸು ಪ್ರಾಂತ ಎಂಬುದು ನಿಸ್ಸಂದೇಹವಾದ ಮಾತು. ಈ ವಂಶದ ಮೂಲಪುರುಷರ ಬಗೆಗೆ ಚರಿತ್ರಕಾರರ ಅಭಿಪ್ರಾಯ ಹೀಗಿದೆ : ಈಗ ಮದ್ರಾಸು ಪ್ರಾಂತ ತಮಿಳು ನಾಡಿಗೆ ಸೇರಿರುವ ಕಾಂಜೀವರಂ ಜಿಲ್ಲೆಯ ಪೂರ್ವಪ್ರದೇಶಕ್ಕೆ ಮೊರಸು ನಾಡೆಂದೂ ಅಲ್ಲಿ ವಾಸಿಸುತ್ತಿದ್ದ ಒಕ್ಕಲು ಮಕ್ಕಳಿಗೆ ಮೊರಸು ಒಕ್ಕಲಿಗರೆಂದೂ ಹೆಸರು. ಕಾಂಜೀವರದ ಸಮೀಪದಲಿ ಯಣಮಂಜಿಪುತ್ತೂರೆಂಬ ಗ್ರಾಮದಿಂದ ಮೈಸೂರು ಸೀಮೆಯ

ಪೂರ್ವಭಾಗಕ್ಕೆ ಬಂದು ನೆಲಸಿದ ಈ ಮರಸು ಒಕ್ಕಲಿಗರ ಕೆಂಪೇಗೌಡನ ಪೂರ್ವಜರು.[12]" ಈ ಹೇಳಿಕೆಗೆ ಯಾವ ಆಧಾರವೂ ದೊರೆಯುವುದಿಲ್ಲ. ಈ ಬಗೆಗೆ ಸಾಕಷ್ಟು ವಾದ ವಿವಾದ ಗಳೂ ಆಗಿ, "The meaning of the term morasu is not clear. Some say that it is the language which they speak, that is Canarese ; but this name is not traceable in usage for the Canarese language. Others say that it means weavers of mat and baskets. This meaning cannot be a correct one as marasus are nowhere known as having been basket or mat makers. The third and most probable meaning is that they are so called because they formerly inhabited a country known by the name of Morasu-nad"[13] ಎಂಬಂತಹ ತೀರ್ಮಾನಗಳಿಗೆ ಬರಲಾಗಿದೆ. ಬೆಂಗಳೂರು ಕೆಂಪೇಗೌಡನ ಪೂರ್ವಿಕರು ಮರಸುನಾಡಿನವರೆಂಬುದು ಸರಿ. ಆದರೆ ಅದು ಮದ್ರಾಸು ಪ್ರಾಂತ್ಯದಲ್ಲಿತ್ತೆಂಬುದು ಮಾತ್ರ ಸರಿಯಲ್ಲ. ಏಕೆಂದರೆ ಗಂಗರ ಕಾಲದಿಂದಲೂ ಬೆಂಗಳೂರು, ತುಮಕೂರು, ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳ ಕೆಲವು ಭಾಗಗಳು ಸೇರಿ ಸುಮಾರು ಶಿವಗಂಗೆಯಿಂದ ಮುಳ ಬಾಗಿಲು ಚನ್ನಪಟ್ಟಣದಿಂದ ಹಿಂದೂಪುರದ ವರೆಗಿನ ಭಾಗಕ್ಕೆ ಮರಸುನಾಡೆಂದು ಹೆಸರಿದ್ದ ಬಗೆಗೆ ಶಾಸನಾಧಾರಗಳು ದೊರೆಯುತ್ತವೆ. 'ಮೊರಸು' ಎಂಬುದಕ್ಕಿಂತ 'ಮರಸು' ಎಂಬುದು ಸರಿಯಾದ ರೂಪವೆಂದು ಕಾಣುತ್ತದೆ. ಏಕೆಂದರೆ ಮರಸು ಎಂಬ ಶಬ್ದಕ್ಕೆ ಕಿಟ್ಟೆಲ್‌ರವರು To hide, To keep oneself out of view ಎಂದು ಅರ್ಥೈಸಿ ದ್ದಾರೆ. ಇದರಿಂದ ಮರಸು ನಾಡೆಂದರೆ ಬೆಟ್ಟಗುಡ್ಡಗಳ ಪ್ರದೇಶವೆಂದು ಹೆಸರಿರುವಂತೆ ತೋರು ತ್ತದೆ. ಅಲ್ಲದೆ ಮರಸು ನಾಡಿನ ಬೇಡಪಡೆ ಗೆರಿಲ್ಲಾ ಯುದ್ಧದಲ್ಲಿ ಎತ್ತಿದ ಕೈ ಎಂಬ ವಿವರ ಕನ್ನಡಸಾಹಿತ್ಯ ಕೃತಿಗಳಲ್ಲಿ ನಮಗೆ ದೊರೆಯುತ್ತದೆ. ಆದುದರಿಂದ ಈ ಭಾಗದ ಜನರಿಗೆ ಅದರಲ್ಲೂ ವಿಶೇಷವಾಗಿ ಒಕ್ಕಲಿಗರಿಗೆ ಮರಸೊಕ್ಕಲಿಗರೆಂದು ಹೆಸರಾಗಿರುವಂತೆ ಕಾಣುತ್ತದೆ.

ಗಂಗರ ಕಾಲದಿಂದಲೂ ಈ ಭಾಗಕ್ಕೆ ಮೊರಸು ನಾಡೆಂದು ಹೆಸರಿದ್ದಿತು. ಗಂಗರಾಜ ಪೆರ್ಮಾನಡಿಯ ಕಾಲದ ಶಾಸನವೊಂದರಲ್ಲಿ "ಸ್ವಸ್ತಿಶ್ರೀ ಪೆರ್ಮಾನಡಿ ಪ್ರಿಥಿವೀ ರಾಜ್ಯಗೆಯೆ ನೊಳಂಬ ಶಿವಮಾರಂ ಮೊರಸು ನಾಡವಾಳುತ್ತಿರೆ[14]" ಎಂಬ ಉಲ್ಲೇಖವಿದೆ. ಮಾಧವ ವರ್ಮನ ಕಾಲದ ಶಾಸನವೊಂದರಲ್ಲಿ "ಮಾಧವಮಹಾಧಿರಾಜರ್ ಕೊರದು ತಮ್ಮ ಕುಲ ಬ್ರಾಹ್ಮಣರ್ ಕಂಗಮಂಗಲವರಕ್ಕೆ ಕೊಣ್ಡಿಂದನಾಮ ಗೋತ್ರಸ್ಯ ಗತ್ತಿವರ್ಮಪಸೆತಾದು ಮೊರಸನಾಡ ಪೆರ್ಘಸುರ್ ನಾಮಗ್ರಾಮ ಅದರ ತಟಕದ ವಟಗ್ಗೈ ಕಡೆ ಕೊಟ್ಟ ಮೂಡ್ಯೆದಿಸೆಯದು."[15]

---

[12] ಬೆಂಗಳೂರು ಕೆಂಪೇಗೌಡ, ಡಾ. ಎಂ.ವಿ. ಕೃಷ್ಣರಾವ್, ಪುಟ 6

[13] *The Mysore Tribes and Castes*, IV. page 226

[14] E.C. Vol. 9, ಬೆಂಗಳೂರು 40

[15] M.A.R. 1941. p. 27

ಎಂಬ ಉಲ್ಲೇಖವಿದೆ. ವಿಜಯನಗರದ ಕೃಷ್ಣದೇವರಾಯನ ಕಾಲದ ಶಾಸನವೊಂದರಲ್ಲಿ "ಮೊರಸೇನಾಡಕ್ಕೆ ಸಂಸ್ಥೆ ಹೊಸಕೋಟ್ಯಾಖಿಸೀಮಗಂ ಸಂಸ್ಥಿತಂ ಪೂರ್ವದಿಗ್ಭಾಗೇ ಗೋಪುರ ಪಲ್ಲಿತ[16]" ಎಂಬ ಉಲ್ಲೇಖವಿದೆ. ಇದರಿಂದ ಗಂಗರಾಜ್ಯ ಸಂಸ್ಥಾಪಕರಲ್ಲೊಬ್ಬನಾದ ಮಾಧವನ ಕಾಲದಿಂದ ವಿಜಯ ನಗರದ ಹೆಸರಾಂತ ಚಕ್ರವರ್ತಿ ಕೃಷ್ಣದೇವರಾಯನ ಕಾಲದ ವರೆಗೆ ಈ ಪ್ರದೇಶಕ್ಕೆ ಮರಸುನಾಡೆಂದು ಹೆಸರಿದ್ದಿತೆಂಬುದು ಸ್ಪಷ್ಟವಾಗುತ್ತದೆ. ಶಾಸನಗಳಲ್ಲಷ್ಟೇ ಅಲ್ಲದೆ ಕನ್ನಡ ಮತ್ತು ಸಂಸ್ಕೃತದ ಕೆಲವು ಕಾವ್ಯಗಳಲ್ಲಿಯೂ ಮರಸು ನಾಡಿನ ಉಲ್ಲೇಖ ದೊರೆಯುತ್ತವೆ. ಇವೆಲ್ಲಾ ಇತ್ತೀಚಿನವು. ಮೈಸೂರಿನ ಅರಸ ಚಿಕ್ಕದೇವರಾಜನ ವಿಜಯೋತ್ಸವ ಕುರಿತು ತಿರುಮಲಾರ್ಯ ಬರೆದಿರುವ 'ಚಿಕ್ಕದೇವರಾಜ ವಿಜಯ' ಕಾವ್ಯದಲ್ಲಿ ಮರಸು ನಾಡು ಮತ್ತು ಅದರ ಪಡೆಯ ಪ್ರಸ್ತಾಪ ಬರುತ್ತದೆ,

ಪಲರುಮೊಳನಾಡದೊರೆಗಳ್
ಮಲೆನಾಡುಗರೊಡನೆ ಬೇಡ ಮೊರಸರುಮೆನ್ನಿ
ಬಲದೊಡಘುರದಿರೆ ಧರೆಯೊಳ್
ಮಲೆಪರದಾರೆಂದು ನಿಂದನಂದದಟಿಂದ[17]
ಮೊರಸು ರಾಜ್ಯವ ಹೊಕ್ಕು ತುರುವನುಸೆರೆವಿಡಿ
ದಿರದೆ ಜನರ ಕಂಗೆಡಿಸಿ
ಶರಣು ಹೊಕ್ಕರಿಗೆ ನಂಬುಗೆಯ ಕೊಟ್ಟು ಮುಂದಕ್ಕೆ
ತೆರಳಿದನಾ ಖಾನನಾಗ[18]

ಮೇಲಿನ ಉದಾಹರಣೆಗಳು ವಿಜಯನಗರದ ಪತನಾನಂತರವೂ ಯಲಹಂಕ ನಾಡಿಗೆ ಮರಸು ನಾಡೆಂದು ಹೆಸರಿದ್ದ ಬಗೆಗೆ ಸೂಚನೆ ನೀಡುತ್ತವೆ. ಕಂಠೀರವ ನರಸರಾಜ ವಿಜಯದಲ್ಲಿ ತುಮಕೂರು ಮತ್ತು ಶಿವಗಂಗೆಯ ಮಾರ್ಗವಾಗಿ ರಣದುಲ್ಲಾಖಾನ ಮರಸು ನಾಡನ್ನು ಪ್ರವೇಶಿಸಿದನೆಂದು ವಿವರಣೆಯಿದೆ. ಈ ಎಲ್ಲ ಆಧಾರಗಳಿಂದ ಯಲಹಂಕ ನಾಡಿಗೆ ಅತ್ಯಂತ ಪ್ರಾಚೀನಕಾಲದಿಂದಲೂ ಮರಸು ನಾಡೆಂದು ಹೆಸರಿದ್ದಿತೆಂಬುದು ಖಚಿತವಾಗುತ್ತದೆ.

ಆವತಿ ನಾಡು ಮತ್ತು ಆ ಊರಿಗೆ ಹೆಸರು ಬಂದ ಕಾರಣವನ್ನು ಕೊಡುವಲ್ಲಿ ಸಹ ಚರಿತ್ರಕಾರರು ಎಡವಿದ್ದಾರೆ. ಈ ವಂಶದ ಮೂಲಪುರುಷನೆಂದು ಕರೆಯಲಾದರೂ ರಣಭೈರೇಗೌಡ ಮತ್ತು ಅವನ ಏಳು ಮಂದಿ ಸಹೋದರರು ಈಗಿನ ಆವತಿಯ ಪ್ರದೇಶದಲ್ಲಿ ನಿಂತರೆಂದೂ ಅಲ್ಲಿಯೇ ಕುಟೀರಗಳನ್ನು ನಿರ್ಮಿಸಿ ವಾಸಿಸಲಾರಂಭಿಸಿದರೆಂದೂ ಕೆಲಸಮಾಡುವಾಗ ರಣಭೈರೇಗೌಡನ ಮಗುವೊಂದನ್ನು ಕುಬೇರನ ಮುಂದಿದ್ದ ಹತ್ತಿಯ ಮರದ ರೆಂಬೆಗೆ ಜೋಲಿಯಲ್ಲಿ ಮಲಗಿಸಿ ನೇತುಹಾಕಿದ್ದರೆಂದೂ, "ಒಂದು ದಿನ ಮಧ್ಯಾಹ್ನ ತೊಟ್ಟಿಲಲ್ಲಿ ಮಗು ನಿದ್ರಿಸುತ್ತಿತ್ತು. ಸನಿಹದಲ್ಲಿ ಯಾರೂ ಇರಲಿಲ್ಲ. ಬಿಸಿಲು ಮಗುವಿನ ಮುಖಕ್ಕೆ ಸರಿಯಾಗಿ ಬಿದ್ದಿತು,

---

[16] E.C. Vol. 9, ಬೆಂಗಳೂರು 30

[17] ಚಿಕ್ಕದೇವರಾಜ ವಿಜಯ, ತಿರುಮಲಾರ್ಯ, ಆ 2–40

[18] ಕಂಠೀರವ ನರಸರಾಜ ವಿಜಯ, ಭಾರತಿ ನಂಜ ಸಂ 11–56

ಆ ಸಮಯಕ್ಕೆ ಪತ್ತಿ ಗಿಡದ ಪೊಟರೆಯಲ್ಲಿದ್ದ ಮಹಾಸರ್ಪವೊಂದು ಹೊರಬಂದು ಮಗುವಿನ ಮುಖಕ್ಕೆ ತನ್ನ ಬಿಚ್ಚಿದ ಹೆಡೆಯಿಂದ ನೆರಳುಹಾಯಿಸುತ್ತಿತ್ತು...ಈ ಗ್ರಾಮ ಹಾವು ಮರಕ್ಕೆ ಪತ್ತಿದ ಸ್ಥಳ. ಹಾವು-ಹತ್ತಿ ಅವತಿಯಾಗಿ ಖ್ಯಾತಿ ಹೊಂದುತ್ತದೆ. ಕಾಲ ಮುಂದುವರಿಯಿತು. ಒಂದು ಸಣ್ಣ ನಗರವೇ ಆಗಿ ಬೆಳೆಯುತ್ತಾ ಹೋಯಿತು."[19] ಮೇಲಿನ ಹೇಳಿಕೆ ಅವೈಜ್ಞಾನಿಕವೂ ಚಾರಿತ್ರಿಕ ಅಂಶಗಳಿಗೆ ವಿರುದ್ಧವೂ ಆಗಿದೆ. ಇದು ರಾಜರಾದವರು ಜನಸಾಮಾನ್ಯರಿಗಿಂತ ಬೇರೆಯವರೂ ಉನ್ನತಮಟ್ಟದವರೂ ಎಂದು ತೋರಿಸಲು ಕಲ್ಪಿಸಿದ ಕಟ್ಟು ಕಥೆ. ಮಲಗಿದ ವ್ಯಕ್ತಿಯ ಮುಖಕ್ಕೆ ನೆರಳು ಮಾಡಿದ ಸರ್ಪ, ನಿರ್ಗತಿಕ ಹುಡುಗನಿಗೆ ಹಾರ ಹಾಕಿದ ಆನೆ, ದೇವರು ಕನಸಿನಲ್ಲಿ ಬಂದು ಇಂತಹವನು ರಾಜನಾಗುತ್ತಾನೆಂದು ಹೇಳುವುದು, ಇವೆಲ್ಲಾ ಸಾಮಾನ್ಯವಾಗಿ ಎಲ್ಲಾ ರಾಜವಂಶಗಳ ಬಗೆಗೂ ಜನಪದದಲ್ಲಿ ಇರುವ ನಂಬಿಕೆಗಳಾಗಿವೆ. ಆದುದರಿಂದ ಹಾವು-ಹತ್ತಿ ಎನ್ನುವುದು ಆವುತಿಯಾಯಿತೆಂಬುದು ಸರಿಯಲ್ಲ. ಆ ನಾಡಿಗೆ ಆ ಹೆಸರು ಬಂದುದು ಆಹುತಿಯಿಂದ. ಒಂದು ಕಾಲಕ್ಕೆ ನರಬಲಿಗೆ ಹೆಸರಾಗಿದ್ದ ಆ ಭಾಗಕ್ಕೆ ಆ ಹೆಸರು ಬಂದಿದೆ.

ವೀರಶೈವಧರ್ಮ ಹಬ್ಬುವುದಕ್ಕೂ ಮೊದಲು ಶೈವಸಂಪ್ರಾಯದಲ್ಲಿ ಕಾಪಾಲಿ ಪಂಥ ಉಗ್ರವಾದಿಗಳದ್ದು. ಹೆಸರೇ ಸೂಚಿಸುವಂತೆ ನರಕಪಾಲ ಹಿಡಿದ ಉದಾಹರಣೆ. ಕಾಳಿಯ ಕಲ್ಪನೆಯೂ ಹೀಗೆಯೇ ಬಂದುದು. ಈ ಪಂಥದ ಜನರಲ್ಲಿ ನರಬಲಿ ಜಾರಿಯಲ್ಲಿದ್ದುದಕ್ಕೆ ಅನೇಕ ಉದಾಹರಣೆಗಳು ದೊರೆಯುತ್ತವೆ. ಮರಸು ಒಕ್ಕಲಿಗರಲ್ಲಿ ಇಂತಹ ನರಬಲಿ ಜಾರಿ ಯಲ್ಲಿದ್ದ ಬಗೆಗೆ ಈ ಹಿಂದೆ ಸೂಚಿಸಿದ ಶಿವ ಮತ್ತು ಮೋಹಿನಿಯರ ಸಂಗಮದ ಕಥೆಯನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ರೈತ ರಾಗಿಯ ತೆಂಡೆಯತ್ತ ತೋರಿದ ಬೆರಳನ್ನು ಕತ್ತರಿಸಿ ಹಾಕಲು ಶಿವ ಯೋಚಿಸಿದ. ಅಷ್ಟು ಹೊತ್ತಿಗೆ ಅಲ್ಲಿಗೆ ಬಂದ ಅವನ ಹೆಂಡತಿ ತನ್ನ ಗಂಡನ ಬೆರಳನ್ನು ಕತ್ತರಿಸಬಾರದೆಂದೂ ಅವನ ಒಂದು ಬೆರಳಿಗೆ ಪ್ರತಿಯಾಗಿ ತನ್ನ ಎರಡು ಬೆರಳು ಗಳನ್ನು ಕೊಡುವುದಾಗಿಯೂ ಪ್ರಾರ್ಥಿಸಿಕೊಂಡಳು. ಅದರಂತೆ, "There is a peculiar religious rite performed among these people. Their women offer as sacrifice to Bhairava Linga or Bandidevaru (The Shiva phallus so called) the first joints of their right hand ring and little fingers ; which are cut off by the village carpenter[20] ಎಂಬ ಪದ್ಧತಿ ನಡೆದುಕೊಂಡು ಬಂದಿದೆ. ಈಗಲೂ ಈ ಭಾಗದ ಹಿರಿಯರು ಬಹಳ ಕಾಲದ ಹಿಂದೆ ಮನೆಯ ಹಿರಿಯ ಮಗಳನ್ನು ಬಲಿಕೊಡುತ್ತಿದ್ದರಂತೆ, ಆಮೇಲೆ ಭೈರರಾಜ ಎಂಬುವನು ಇದನ್ನು ತಪ್ಪಿಸಿದನಂತೆ ಎಂದು ಹೇಳುತ್ತಾರೆ. ಹೀಗೆ ಮೊದಲಿಗೆ ಮಗಳನ್ನು ಬಲಿಕೊಡುವುದ ರಿಂದ ಬೆರಳಿಗಿಳಿದಿರಬೇಕು. ಈಗಲೂ ಆ ಭಾಗದವರನ್ನು ಬೆರಳೊಕ್ಕಲಿಗರೆಂದೂ ಕರೆಯುತ್ತಾರೆ. ಮೇಲೆ ಹೇಳಿದ ಭೈರರಾಜ ಒಂದನೆಯ ಭೈರದೇವನೆಂದು ಊಹಿಸಲವಕಾಶವಿದೆ. ಏಕೆಂದರೆ

---

[19] ಬೆಂಗಳೂರು ಕೆಂಪೇಗೌಡ, ಡಾ. ಎಂ.ವಿ. ಕೃಷ್ಣರಾವ್, ಪುಟ 15

[20] *The Indian Antiquary*, page 50

ಅವನಿಗೆ ಸಹಾಯಕನಾಗಿದ್ದ ನಾಡ ಸೇನ ಬೋವ ಅಲಾಳ ಇಂತಹ ದುಷ್ಟ ಪದ್ಧತಿಯನ್ನು ತಪ್ಪಿಸುವಲ್ಲಿ ನೆರವಾಗಿರಬೇಕೆಂದು ಕಾಣುತ್ತದೆ.

ಕಾಲ ಬದಲಾದಂತೆ ಜನಗಳಲ್ಲಿ ಮನೆ ಮಾಡಿಕೊಂಡಿರುವ ನಂಬಿಕೆಗಳೂ ಬದಲಾಗುತ್ತಾ ನಡೆಯುತ್ತವೆ. ಅಂತೆಯೆ ಮರಸು ನಾಡಿನವರಲ್ಲಿ ನರಬಲಿಯ ಪದ್ಧತಿಯೂ ಮಾರ್ಪಾಡಾಯಿತು. ಹಿರಿಯ ಮಗಳನ್ನೇ ಬಲಿಕೊಡುತ್ತಿದ್ದವರು ಎರಡು ಬೆರಳುಗಳನ್ನು ಕೊಡಲಾರಂಭಿಸಿದರು. ಒಂದನೆಯ ಕೆಂಪೇಗೌಡ ಈ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸಿದಂತೆ ಕಾಣುತ್ತದೆ. ಜನರ ಮನದಾಳದಲ್ಲಿ ತಲೆತಲಾಂತರಗಳಿಂದ ಬೇರೂರಿದ್ದ ಒಂದು ಪದ್ಧತಿಯನ್ನು ಒಮ್ಮೆಲೇ ತೆಗೆಯುವುದು ನಿರಂಕುಶಾಧಿಕಾರಿಯಾದ ರಾಜನಿಗೂ ಕೆಲವೊಮ್ಮೆ ಕಷ್ಟ ಸಾಧ್ಯ. ಆದುದರಿಂದಲೇ ಹಿಟ್ಟಿನ ಅಥವಾ ಲೋಹದ ಪ್ರತಿಮೆ ಮಾಡಿಸಿ ಬಲಿ ಹಾಕುವುದು ಮುಂದುವರಿಯಿತು. ರಾಜನ ವ್ಯಾಪ್ತಿಯಿಂದ ದೂರವಾದ ಗ್ರಾಮಾಂತರ ಪ್ರದೇಶಗಳಲ್ಲಿ ಬೆರಳು ಕೊಡುವ ಪದ್ಧತಿ ಮುಂದುವರಿದುದಕ್ಕೆ ಉದಾಹರಣೆಗಳಿವೆ. "The people may roughly be classed under three heads: 1) Those whose women offer the above said sacrifice, 2) Those who do not perform the rite, 3) Those who offer a golden substitute. These sections however freely inter marry with one another and it is only in the performance of the sacrifice that the difference between them exists[21]. ಮೇಲಿನ ಹೇಳಿಕೆ ಇತ್ತೀಚಿನ ವರೆವಿಗೂ ಈ ಜನರಲ್ಲಿ ಬೆರಳನ್ನು ಬಲಿಕೊಡುವ ಪದ್ಧತಿಯಿತ್ತೆಂಬುದನ್ನು ಶ್ರುತ ಪಡಿಸುತ್ತದೆ. ಇಂದಿಗೂ ಜನಪದ ಬೈಗುಳದಲ್ಲಿ 'ನಿನ್ನ ಆವುತಿ ಕೊಡ' ಎಂಬ ಮಾತು ಗ್ರಾಮೀಣ ಜನರಲ್ಲಿ ವಿಶೇಷವಾಗಿ ಒಕ್ಕಲಿಗರಲ್ಲಿ ಉಳಿದುಕೊಂಡಿದೆ. ಒಂದುಕಾಲಕ್ಕೆ ನರಬಲಿಯಾಗಿದ್ದುದು ಕ್ರಮೇಣವಾಗಿ ಬೆರಳು, ಪ್ರತಿಮೆ ಮುಡಿ ಕೊಡುವುದು ಹೀಗೆ ಲಯವಾಗುತ್ತಾ ಬಂದಿತು. ಹೀಗೆ ಆಹುತಿ ಕೊಡುತ್ತಿದ್ದ ಆ ಜಾಗಕ್ಕೆ ಆಹುತಿ ಎಂದೇ ಹೆಸರಾಯಿತು. ಅನಂತರ ಆವುತಿಯಾಯಿತೇ ವಿನಾ ಹಾವು–ಹತ್ತಿ ಎಂಬುದು ಸರಿಯಲ್ಲ.

ಬೆಂಗಳೂರು ನಗರ ನಿರ್ಮಾಣದ ಬಗೆಗೆ ಖಚಿತವಾದ ಚಾರಿತ್ರಿಕ ಆಧಾರಗಳು ದೊರೆಯುವುದಿಲ್ಲ. ಒಂದನೆಯ ಕೆಂಪೇಗೌಡನ ಕಾಲದಲ್ಲಿ ಈ ಭಾಗ ಕಾಡಾಗಿತ್ತು ಎಂದೂ ಅಲ್ಲಿ ಈ ಹಿಂದೆಯೇ ಒಂದು ನಗರವಿತ್ತು ಎಂದೂ ವಾದವಿವಾದಗಳೆದ್ದಿವೆ. ಅದೇನೇ ಇರಲಿ, ಬೆಂಗಳೂರು ನಗರದ ನಿರ್ಮಾಣದ ಬಗೆಗೆ ಒಂದು ಸ್ಪಷ್ಟ ತೀರ್ಮಾನಕ್ಕೆ ಬರುವುದು ಸಾಧ್ಯ. ಏಕೆಂದರೆ ಒಂದನೆಯ ಕೆಂಪೇಗೌಡ ವಿಜಯನಗರದ ಅರಸರಾದ ಕೃಷ್ಣದೇವರಾಯ ಮತ್ತು ಅಚ್ಯುತರಾಯ ಇವರಿಗೆ ಬಹಳ ಆಪ್ತನಾಗಿದ್ದವನು. ಇವನ ಕಾಲದಲ್ಲಿ ಯಲಹಂಕ ನಾಡು ಸಂಪತ್ತು ಮತ್ತು ಸಮೃದ್ಧಿಯ ನಾಡಾಗಿದ್ದಿತು. ದಕ್ಷಿಣದಿಂದ ವಿಜಯನಗರದ ಪ್ರಬಲ ರಕ್ಷಣೆಯಾಗಿದ್ದುದು ಯಲಹಂಕ ನಾಡು. ಈ ಕಾರಣದಿಂದಾಗಿ ಒಂದನೆಯ ಕೆಂಪೇಗೌಡ ಹಲವಾರು ಬಾರಿಯಾದರೂ ರಾಜಧಾನಿಗೆ ಭೇಟಿಕೊಟ್ಟಿರಬೇಕು. ಇದೇ ಕಾಲದಲ್ಲಿಯೇ ವಿಜಯನಗರ ಲೋಕವಿಖ್ಯಾತ

---

21 *The Indian Antiquary*, page 51

ಮಹಾನಗರವಾಗಿತ್ತು. ಪ್ರಾಯಃ ಈ ಅದ್ದೂರಿಯ ರಾಜಧಾನಿ ಕೆಂಪೇಗೌಡನ ಮೇಲೆ ಬಹಳ ಪರಿಣಾಮ ಮಾಡಿದ್ದಿರಬೇಕು. ಸ್ವಭಾವತಃ ಮಹತ್ವಾಕಾಂಕ್ಷಿಯೂ, ಸಮರ್ಥನೂ ಆದ ಕೆಂಪೇಗೌಡನಿಗೆ ತಾನೇಕೆ ಇಂತಹ ಒಂದು ನಗರವನ್ನು ನಿರ್ಮಾಣ ಮಾಡಬಾರದು ಎಂದು ಅನ್ನಿಸಿರಬೇಕು. ಈ ಕಾರ್ಯಕ್ಕೆ ಬೇಕಾದ ಚಕ್ರವರ್ತಿಯ ಅನುಮೋದನೆ ದೊರೆಯುವುದ ರಲ್ಲಿಯೂ ಅವನಿಗೇನೂ ಅನುಮಾನವಿರಲಿಲ್ಲ. ಏಕೆಂದರೆ ಒಂದನೆಯ ಕೆಂಪೇಗೌಡ ವಿಜಯ ನಗರದ ಅತ್ಯಂತ ಸಮರ್ಥನೂ ಆಪ್ತನೂ ಆದ ಸಾಮಂತ ರಾಜನಾಗಿದ್ದ. ಈ ಎಲ್ಲ ಪೂರ್ವ ತಯಾರಿಗಳನ್ನು ಕೆಂಪೇಗೌಡ ಮಾಡಿಕೊಂಡು ಒಂದು ಸೂಕ್ತ ಸ್ಥಳ ಮತ್ತು ಒಳ್ಳೆಯ ಮುಹೂರ್ತ ವನ್ನು ಕಾಯುತ್ತಿದ್ದ. ಆಗ ಯಲಹಂಕದಿಂದ ಅನತಿ ದೂರದಲ್ಲಿಯೇ ಇದ್ದ ಈಗಿನ ಬೆಂಗಳೂರು ಭಾಗ ಅವನ ಮನಸ್ಸಿಗೆ ಬಂದಿರಬೇಕು. ಈ ಭಾಗಕ್ಕೆ ಶಿವನಸಮುದ್ರ ಎಂಬ ಹೆಸರಿದ್ದಿತೆಂದೂ ಅದನ್ನು ವಿಜಯನಗರದ ಅರಸರು ನಗರ ನಿರ್ಮಾಣಕ್ಕಾಗಿ ಕೆಂಪೇಗೌಡನಿಗೆ ಕೊಟ್ಟರೆಂದೂ ಕೆಲವರು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ಬಗೆಗೆ ಖಚಿತವಾಗಿ ಹೇಳಲು ಬರುವು ದಿಲ್ಲ. ವಿಜಯನಗರದ ಅರಸರು ಶಿವನಸಮುದ್ರ ಪ್ರಾಂತವನ್ನು ಯಲಹಂಕ ನಾಡಿಗೆ ವಹಿಸಿದ ಉಲ್ಲೇಖವೇನೋ ಶಾಸನಗಳಲ್ಲಿ ದೊರೆಯುತ್ತದೆ. ಆದರೆ ಅದು ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶ ಎಂದು ಹೇಳಲಾಗುವುದಿಲ್ಲ. ಏಕೆಂದರೆ ರಾಜಧಾನಿ ಯಲಹಂಕಕ್ಕೆ ಅಷ್ಟು ಹತ್ತಿರದಲ್ಲಿದ್ದ ಭಾಗ ಕೆಂಪೇಗೌಡನ ವಂಶಸ್ಥರಿಗೆ ಸೇರಿರಲಿಲ್ಲವೆ? ಇದು ನಂಬಲಸದಳ ವಾದ ವಿಷಯ. ಬಹಳ ಹಿಂದಿನಿಂದಲೂ ಈ ಭಾಗಗಳೆಲ್ಲ ಯಲಹಂಕನಾಡಿಗೆ ಸೇರಿದ್ದುವೆಂಬುದಕ್ಕೆ ಆಧಾರಗಳಿವೆ. ಈ ಕಾರಣದಿಂದಾಗಿ ಶಿವನಸಮುದ್ರ ಎಂಬುದು ಕಾವೇರಿಯ ಪ್ರದೇಶವಾಗಿದ್ದು ಅದನ್ನು ವಿಜಯನಗರದ ಅರಸರು ಯಲಹಂಕ ರಾಜರಿಗೆ ವಹಿಸಿಕೊಟ್ಟಿರಬೇಕು ಎಂದು ಊಹಿಸಲವಕಾಶವಿದೆ.

ಬೆಂಗಳೂರು ನಗರವನ್ನು ಒಂದನೆಯ ಕೆಂಪೇಗೌಡ ಮೊಟ್ಟಮೊದಲಿಗೆ ಸ್ಥಾಪಿಸಿದನೆ ಅಥವಾ ಈ ಹಿಂದೆಯೇ ಅಲ್ಲಿ ಒಂದು ಗ್ರಾಮವೊ ನಗರವೊ ಇದ್ದಿತೆ, ಎಂಬ ಬಗೆಗೆ ಇತ್ತೀಚಿಗೆ ವಾದ ವಿವಾದಗಳು ನಡೆದಿವೆ. ಬೆಂಗಳೂರು ನಿರ್ಮಾಣವಾದ ಬಗೆಗೆ ಖಚಿತವಾದ ಚಾರಿತ್ರಿಕ ಆಧಾರಗಳು ದೊರೆಯುವುದಿಲ್ಲ ಎಂದೇ ಹೇಳಬೇಕು. ಈ ನಗರ ನಿರ್ಮಾಣದ ಬಗೆಗೆ ಮೂರು ಕಥೆಗಳು ಹುಟ್ಟಿಕೊಂಡಿವೆ. ಮೊದಲನೆಯದು : ಒಮ್ಮೆ ಹೊಯ್ಸಳ ಚಕ್ರವರ್ತಿ ಬಲ್ಲಾಳ ರಾಯ ಬೇಟೆಗಾಗಿ ಈ ಪ್ರದೇಶದ ಕಾಡಿಗೆ ಬಂದ. ಮೃಗವೊಂದನ್ನು ಅಟ್ಟಿಸಿಕೊಂಡು ಹೊರಟ ಭರದಲ್ಲಿ ಅವನು ತನ್ನ ಹಿಂಬಾಲಕರಿಂದ ದೂರವೂ ಬೇರೆಯೂ ಆದ. ಈಗಿನ ಬೆಂಗಳೂರು ನಗರ ಪ್ರದೇಶಕ್ಕೆ ಬಂದಾಗ ಮೃಗ ಕಣ್ಣಿಗೆ ಕಾಣದಾಯಿತು. ಆಗ ಬಲ್ಲಾಳ ರಾಯ ಅಲ್ಲಿಯ ಮರವೊಂದರ ನೆರಳಲ್ಲಿ ವಿಶ್ರಮಿಸಲಾರಂಭಿಸಿದ. ಊಟದ ಸಮಯ ಮೀರಿ, ಹಸಿವು ಕಿತ್ತು ತಿನ್ನಲಾರಂಭಿಸಿತು. ತಿನ್ನಲು ಏನಾದರೂ ಹಣ್ಣುಹಂಪಲು, ಗಡ್ಡೆಗೆಣಸು ದೊರೆಯುವುದೇ ಎಂದು ಆತ ಸುತ್ತಲೂ ನೋಡಿದ. ಅನತಿದೂರದಲ್ಲಿ ಹೊಗೆ ಏಳುವುದು ಕಂಡಿತು. ಹತ್ತಿರ ಹೋಗಿ ನೋಡಿದಾಗ ಅದೊಂದು ಗುಡಿಸಲು. ಅಲ್ಲಿ ಮುದುಕಿಯೊಬ್ಬಳಿ ದ್ದಳು. ಬಲ್ಲಾಳರಾಯ ಹಸಿವಿನಿಂದಾಗಿ ತಿನ್ನಲು ಏನಾದರೂ ದೊರೆಯುವುದೇ ಎಂದು ಆ ಮುದುಕಿಯನ್ನು ಕೇಳಿದ. ಆಕೆ ತನ್ನಲ್ಲಿದ್ದ ಬೆಂದ ಹುರುಳಿಕಾಳನ್ನು ಅವನಿಗೆ ನೀಡಿದಳು.

ಇದರಿಂದ ಸಂತೃಪ್ತನಾದ ಅವನು ಇದು ಅನ್ನದೊರೆಯುವ ಪುಣ್ಯಭೂಮಿ ಎಂದು ಒಂದು ನಗರ ನಿರ್ಮಾಣ ಮಾಡಿದ. ಅದಕ್ಕೆ ಬೇದ ಕಾಳೂರು ಎಂದು ಹೆಸರಿಟ್ಟ. ಅದು ಮುಂದೆ ಬೆಂಗಾಳೂರಾಗಿ ಬೆಂಗಳೂರಾಯಿತು. ಎರಡನೆಯದು : ಮೇಲಿನ ಕಥೆಯನ್ನೇ ಒಂದನೆಯ ಕೆಂಪೇಗೌಡನಿಗೆ ಅನ್ವಯಿಸಿ ಹೇಳುತ್ತಾರೆ. ಬಹುಶಃ ಇದು ನಂಬಬಹುದಾಂತಹ ಕಥೆ. ಏಕೆಂದರೆ ದೂರದ ದ್ವಾರಸಮುದ್ರದಿಂದ ಬಲ್ಲಾಳರಾಯ ಇಲ್ಲಿಗೆ ಬೇಟೆಗೆ ಬಂದ ಎನ್ನುವುದಕ್ಕಿಂತ ಹತ್ತಿರದ ಯಲಹಂಕದಲ್ಲಿದ್ದ ಒಂದನೆಯ ಕೆಂಪೇಗೌಡ ಬೇಟೆಗೆ ಬಂದಿದ್ದ ಎನ್ನುವುದು ಹೆಚ್ಚು ಸತ್ಯವಾಗುತ್ತದೆ. ಮೂರನೆಯದು: ರಾಜನೊಬ್ಬ ಇಲ್ಲಿಗೆ ಬೇಟೆಗೆ ಬಂದ. ಆಗ ಮೊಲವೊಂದು ನಾಯಿಯನ್ನು ಎದುರಿಸಿ ನಿಂತಿತು. ಇದು ಗಂಡುಭೂಮಿ ಎಂದು ಅರಿತ ಅವನು ಇಲ್ಲಿ ಒಂದು ನಗರ ನಿರ್ಮಿಸಿದ. (ಇಂದು ಬೆಂಗಳೂರಿನಲ್ಲಿರುವ ಹೊರಗಿನವರ ಪ್ರಭಾವ ಮತ್ತು ಹಾವಳಿಗಳನ್ನು ನೋಡಿದರೆ ಇದು ಸತ್ಯ ಅನ್ನಿಸುವುದಿಲ್ಲ). ಈ ಯಾವ ಕಥೆಯೂ ಬೆಂಗಳೂರು ನಿರ್ಮಾಣದ ಬಗೆಗೆ ಚಾರಿತ್ರಿಕ ಆಧಾರಗಳಾಗುವುದಿಲ್ಲ.

ಬೆಂಗಳೂರು ನಗರದ ಸ್ಥಾಪನೆ ಮತ್ತು ಪ್ರಾಚೀನತೆಯ ಬಗೆಗಿನ ಮತ್ತೊಂದು ಹೇಳಿಕೆ ಹೀಗಿದೆ : "ಕ್ರಿ. ಶ. 900ರ ಪೂರ್ವದಲ್ಲಿ ಬೆಂಗಳೂರು ದಿವ್ಯನಗರವಾಗಿತ್ತೆಂಬುದು ಈಗಿನ ಬೆಂಗಳೂರಿನ ದಕ್ಷಿಣಕ್ಕೆ ಸುಮಾರು ಎಂಟು ಮೈಲಿ ದೂರದಲ್ಲಿರುವ ಬೇಗೂರು ಗ್ರಾಮದಲ್ಲಿ ದೊರೆತ ಶಾಸನವೊಂದರಿಂದ (ಬೆಂಗಳೂರು 83) ತಿಳಿದುಬಂದಿದೆ. ಇಲ್ಲಿಯ ನಾಗೇಶ್ವರ ದೇವಸ್ಥಾನದ ಮುಂಗಡೆಯ ಹಜಾರದ ಗೋಡೆಯೊಳಗೆ ಒಂದು ಜೈನ ಶಾಸನವಿದೆ. ಈ ಶಾಸನದಲ್ಲಿ ಬೆಂಗಳೂರು ಎಂಬ ಪದವಿದೆ[22]. ಮೇಲಿನ ಹೇಳಿಕೆ ಬೆಂಗಳೂರು ಗಂಗರ ಕಾಲದಿಂದ ಅಸ್ತಿತ್ವದಲ್ಲಿದ್ದಿತು ಎಂಬುದನ್ನು ಋಜುಪಡಿಸುತ್ತದೆ. 1972ರಲ್ಲಿ ಕೆಂಗೇರಿಯ ವಿದ್ಯಾಪೀಠದಲ್ಲಿ ನಡೆದ ಬರಹಗಾರರ ಕೂಟದಲ್ಲಿ ನಾನು ಸುಮಾರು ಎರಡು ತಿಂಗಳುಗಳ ಕಾಲ ಇದ್ದೆ. ಆಗ ಅಲ್ಲಿಯೆ ಪಕ್ಕದ ಜಮೀನೊಂದರ ಒಡೆಯ ಚನ್ನೇಗೌಡ ಎಂಬ ವೃದ್ಧರ ಪರಿಚಯವಾಯಿತು. ಅವರು ತಮ್ಮ ವಂಶದ ಪೂರ್ವಿಕರ ಬಗೆಗೆ ಕಥೆಯೊಂದನ್ನು ಹೇಳಿದರು. ಅದರಂತೆ ಅವರ ಹಿರಿಯರು ಗಂಗರ ಸೇನೆಯಲ್ಲಿದ್ದರಂತೆ. ಆ ಸೈನ್ಯ ಒಮ್ಮೆ ಯುದ್ಧವೊಂದರಲ್ಲಿ ತೊಡಗಿದ್ದಾಗ ಅವರು ಗಾಯಗೊಂಡರು. ಹೀಗೆ ಗಾಯಗೊಂಡ ಗಂಗರ ಬೆಂಗಾವಲು ಪಡೆಯ ಶೂರರುಗಳಿಗಾಗಿ ಒಂದು ಗ್ರಾಮವನ್ನು ನಿರ್ಮಿಸಿದರು. ಅದೇ ಬೆಂಗಾವಲಾಳೂರು. ಮುಂದೆ ಅದು ಜನರ ಬಾಯಲ್ಲಿ ಬೆಂಗಳೂರಾಯಿತು. ಇದಕ್ಕೆ ಪೋಷಕವಾಗಿ ಇದೇ ಹೋಬಳಿಯ ಅಗರ ಗ್ರಾಮದ ಶಾಸನವೊಂದನ್ನು ಗಮನಿಸಬೇಕು. "Judging from the inscription E. C IX Bangalore 70 at this village, it appears to be an old place, and to have been under the rule of the chief of Nagattara, a subordinate of the Ganga king Satyavakya Permadi in the 9th Century. Inscriptions were in existence in the 8th century. The artillery practice ground is on the Agaram plain[23] ಕೆಂಗೇರಿಯ

---

22 ಕರ್ನಾಟಕ ಇತಿಹಾಸ ದರ್ಶನ, ಪುಟ 505

23 ಪ್ರೊ. ಎಸ್. ಕೆ. ರಾಮಚಂದ್ರರಾವ್, ಸುಧಾ ವಾರ ಪತ್ರಿಕೆ

ಹಿರಿಯರೊಬ್ಬರು ಹೇಳಿದ ತಮ್ಮ ಪೂರ್ವಿಕರ ಕಥೆಗೂ ಇದಕ್ಕೂ ಸಂಬಂಧವಿದ್ದಂತೆ ಕಂಡು ಬರುತ್ತದೆ. ಅಷ್ಟೇ ಅಲ್ಲ. ವಿವಾದಕ್ಕೊಳಗಾಗಿರುವ ಬೆಂಗಳೂರು ಹೆಸರಿನ ಬಗ್ಗೆಯೂ ಇದು ಹೊಸ ಬೆಳಕನ್ನು ಚೆಲ್ಲುತ್ತದೆ. ಆದುದರಿಂದ ಬೆಂಗಳೂರು ಗಂಗರ ಬೆಂಗಾವಲಾಳುಗಳಿಗಾಗಿ ಕಟ್ಟಿದ ಸ್ಥಳವಾಗಿ ಅನಂತರ ಬೆಂಗಳೂರಾಗಿದೆ ಎಂದು ಊಹಿಸಲವಕಾಶವಿದೆ. ಬೆಂದ ಕಾಳು ಕಥೆಗಿಂತ 'ಬೆಂಗಾವಲಾಳ್' ಹೆಚ್ಚು ವಾಸ್ತವವಾಗಿ ಕಾಣುತ್ತದೆ. ಇತ್ತೀಚಿಗೆ ಸುಧಾವಾರ ಪತ್ರಿಕೆಯಂತೆ "ಕೋಟೆಯ ವೆಂಕಟೇಶ್ವರ ದೇವಾಲಯ" ಕುರಿತ ಲೇಖನವೊಂದರಲ್ಲಿ "ವೆಂಕಟೇಶ್ವರನ ಊರು ವೆಂಕಟೂರು, ವೆಂಗಳೂರು, ಬೆಂಗಳೂರಾಗಿರಬಹುದು."-ಬೆಂಗಳೂರು ಎಂಬ ಹೆಸರಿನ ಬಗ್ಗೆ ಇಂತಹ ಅನೇಕ ಊಹೆಗಳನ್ನು ಮಾಡಬಹುದು. ಉದಾಹರಣೆಗೆ ಕೆಂಪುಕಲ್ಲು ಕೆಂಗಲ್ ಆದ ಹಾಗೆ ಬೆಣಚುಕಲ್ಲು ಅಥವಾ ಬಿಳಿಯ ಕಲ್ಲು ಬೆಂಗಲ್ ಆಗಿ ಅನಂತರ ಬೆಂಗಲ್ಲೂರು ಬೆಂಗಳೂರಾಗಿರಬಹುದು. ಮತ್ತೊಂದು. ಇದು ಬಹಳ ಹಿಂದೆ ಜೈನಕ್ಷೇತ್ರವಾಗಿದ್ದಿತೆಂದೂ ಇಲ್ಲಿ ಅನೇಕ ಮುನಿಗಳು ಇದ್ದರೆಂದೂ ಚರಿತ್ರೆಕಾರರು ಹೇಳಿದ್ದಾರೆ. ಜೈನಮುನಿಗಳು ಬೆಂದ ಕಲ್ಲಿನ ಮೇಲಿನ ಮೇಲೆ ತಪಸ್ಸುಮಾಡಿದ ಕಥೆ ನಮಗೆ ದೊರೆಯುತ್ತದೆ. "ಭಟಾರರ್‌ಚರಿಗೆ ಪೋದರನ್ನೆಗಂ ಪಿಂದೆ ಪಾಪ ಕರ್ಮಂ ಯೋಗಶಿಲೆಯ ಮೇಗುಮುಂ ಕೆಳಗುಮಂ ಬಳಸಿಯಂ ಪಲವುಂ ಪಿರಿಯುವುಮಪ್ಪ ತಱಿಯುಪುಳ್ಳಿಗಳಂ ಕಡಿದೊಟ್ಟಿ ಕಿಚ್ಚನಿಕ್ಕಿ ಸುಟ್ಟ ಕಿಚ್ಚಿನ ಬಣ್ಣದಂತಾಗಿ ಶಿಲೆಯ ಮಾಡಿ[13] ಎಂಬಂತಹ ಹೇಳಿಕೆಗಳಿವೆ. ಆದುದರಿಂದ ಬೆಂದಕಲ್ಲೂರು, ಬೆಂಗಳೂರಾಗಿದೆ ಎಂದು ಊಹಿಸಿದರೂ ಬೆಂಗಳೂರಿನಷ್ಟೆ ಸೊಗಸಾಗಿರುತ್ತದೆ. ಆದರೆ ಇವುಗಳಿಗೆ ಕೊನೆಯೆಲ್ಲಿ ? ಬೆಂಗಾವಲಾಳೂರು ಬೆಂಗಳೂರಾಗಿದೆ ಎಂಬುದು ಹೆಚ್ಚು ವಾಸ್ತವಾಗಿಯೂ ತರ್ಕಬದ್ಧವಾಗಿಯೂ ಕಂಡುಬರುತ್ತದೆ.

ಬೆಂಗಳೂರು ಎಂಬ ಹೆಸರು ಗಂಗರ ಕಾಲದ ಶಾಸನಗಳಲ್ಲಿಯೇ ದೊರೆಯುವುದರಿಂದ ಆ ಹೆಸರಿನ ಒಂದು ಊರು ಈ ಭಾಗದಲ್ಲಿದ್ದಿತೆಂಬುದರಲ್ಲಿ ಯಾವ ಅನುಮಾನವೂ ಕಂಡುಬರುವುದಿಲ್ಲ. ಇದಕ್ಕೆ ಪೋಷಕವಾಗಿ ಮತ್ತೊಂದು ಕಥೆ ಹೀಗೆ ಪ್ರಚಲಿತವಿದೆ : ಯಲಹಂಕದ ಅರಸು ಮನೆತನಕ್ಕೂ ಬೆಂಗಳೂರಿನ ಕೆಲವು ಹಿರಿಯ ಗೌಡರುಗಳ ಮನೆತನಕ್ಕೂ ನೆಂಟಸ್ತಿಕೆಯಿದ್ದಿತು. ಅವರಲ್ಲಿ ಪರಸ್ಪರ ಕೊಳು ಕೊಡುಗೆಗಳು ನಡೆಯುತ್ತಿದ್ದುವು. ಒಂದನೆಯ ಕೆಂಪೇಗೌಡನ ಪತ್ನಿ ಬೆಂಗಳೂರಿನವಳು. ಈ ಕಾರಣದಿಂದಾಗಿ ಅವನು ಬೆಂಗಳೂರಿಗೆ ಆಗಾಗ ಭೇಟಿ ಕೊಡುತ್ತಿದ್ದುದುಂಟು. ಒಂದನೆಯ ಕೆಂಪೇಗೌಡ ಪ್ರತಿ ಸಲ ವಿಜಯನಗರಕ್ಕೆ ಹೋಗಿ ಬಂದಾಗಲೂ ಅಂತಹ ಒಂದು ನಗರ ನಿರ್ಮಿಸುವ ಆಶೆ ಹೆಚ್ಚುತ್ತಲೇ ಇತ್ತು. ವಿಜಯನಗರದ ಅರಸರ ಅನುಮತಿಯೂ ದೊರೆತಿದ್ದಿತು. ತನ್ನ ಪತ್ನಿಯ ಊರೆಂಬ ಅಕ್ಕರೆ, ಇಲ್ಲಿನ ಪ್ರಕೃತಿ ಮತ್ತು ವಾಯುಗುಣದ ಆಕರ್ಷಣೆ ಇವುಗಳಲ್ಲಿ ಯಾವುದೋ ಅಥವಾ ಎಲ್ಲವುಗಳೋ ಕೆಂಪೇಗೌಡನಿಗೆ ಇಲ್ಲಿ ಒಂದು ಬೃಹತ್ ನಗರ ನಿರ್ಮಾಣ ಮಾಡುವ ಸ್ಫೂರ್ತಿಯನ್ನು ನೀಡಿರಬೇಕು.

"ಬೆಂಗಳೂರಿನ ಉಪನಗರವಾದ ಯಶವಂತಪುರದಲ್ಲಿ ಅಗೆತ ಮಾಡಿದಾಗ ರೋಮನ್ ಚಕ್ರಾಧಿಪತ್ಯದ ಚಕ್ರವರ್ತಿ ಕ್ಯಾಲಿಗುಲನ ಅಂಕಿತವಿರುವ ಸುವರ್ಣ ನಾಣ್ಯಗಳು ದೊರೆತವೆಂದೂ

---

13 ವಡ್ಡಾರಾಧನೆ, ಸಂ. ಡಿ. ಎಲ್. ನರಸಿಂಹಾಚಾರ್, ಪುಟ 114,

ಆದ್ದರಿಂದ ಬೆಂಗಳೂರು 2,000 ವರ್ಷಗಳ ಹಿಂದೆಯೇ ಸಂಪದ್ಭರಿತವಾದ ನಗರವಾಗಿದ್ದಿರಬೇಕೆಂದೂ ಸಂಶೋಧಕರು ಸೂಚಿಸಿದ್ದಾರೆ. ಇದರಿಂದ ಬೆಂಗಳೂರು ಒಂದು ಕಾಲಕ್ಕೆ ಮಹಾನಗರವಾಗಿದ್ದಿತೆಂದೂ, ಅನಂತರ ಅದು ಕಾರಣಾಂತರಗಳಿಂದ ನಾಶವಾಗಿದ್ದಿತೆಂದೂ ಚರಿತ್ರಕಾರರ ಅಭಿಪ್ರಾಯವೆಂದಾಗುತ್ತದೆ. ಈ ವಿಷಯವನ್ನು ತಿಳಿದಿದ್ದ ಒಂದನೆಯ ಕೆಂಪೇಗೌಡ ಆ ನಗರವನ್ನು ಪುನರ್ನಿರ್ಮಿಸಲು ಮನಸ್ಸು ಮಾಡಿದ. ರೋಮನ್ ನಾಣ್ಯಗಳು ದೊರೆತವೆಂಬ ಒಂದೇ ಕಾರಣದಿಂದ ಈ ನಗರದ ಪ್ರಾಚೀನತೆಯನ್ನು ನಿರ್ಧರಿಸಲು ಆಗುವುದಿಲ್ಲ. ಒಂದು ವೇಳೆ ಇದೊಂದು ಮಹಾನಗರವಾಗಿದ್ದು, ಅದು ನಾಶವಾಗಿದ್ದು, ಈ ವಿಷಯ ಕೆಂಪೇಗೌಡನಿಗೆ ಗೊತ್ತಿದ್ದಿದ್ದರೆ ಅವನು ಖಂಡಿತ ಇಲ್ಲಿ ನಗರ ನಿರ್ಮಿಸುತ್ತಿರಲಿಲ್ಲ. ಹಾಗೂ ಹಾಳಾದ ಊರನ್ನು ಮತ್ತೆ ನಿರ್ಮಿಸುವುದು ಹಿಂದೂ ಸಂಪ್ರದಾಯಕ್ಕೆ ವಿರುದ್ಧ. ಒಂದು ವೇಳೆ ಕಾರಣಾಂತರದಿಂದ ಅಲ್ಲಿಯೇ ನಗರ ನಿರ್ಮಾಣ ಮಾಡಬೇಕೆಂದರೂ ಪಾಳು ಸ್ಥಳವನ್ನು ಬಿಟ್ಟು ನಿರ್ಮಿಸುತ್ತಾರೆ. ಅಲ್ಲದೆ ರೋಮನ್ ನಾಣ್ಯಗಳಷ್ಟೇ ಇಲ್ಲಿ ಒಂದು ಮಹಾನಗರವಿತ್ತೆಂಬುದನ್ನು ಪ್ರತಿಪಾದಿಸಲು ಒಳ್ಳೆಯ ಆಧಾರವಾಗುವುದಿಲ್ಲ. ಭಾರತ ಮತ್ತು ರೋಂ ನಡುವೆ ವ್ಯಾಪಾರ ಸಂಬಂಧವಿದ್ದಿತೆಂಬುದು ಗೊತ್ತಿರುವ ವಿಷಯ. ಅಲ್ಲದೆ ಆಗಿನ ನಾಣ್ಯಗಳು ಚಿನ್ನ ಮತ್ತು ಬೆಳ್ಳಿಯವಾದುದರಿಂದ ಜನರು ಅವುಗಳನ್ನು ಹೂಳಿಡುತ್ತಿದ್ದರು. ರೋಂ ನಾಣ್ಯಗಳು ಗಂಗರ ಬೆಂಗಾವಲಾಳುಗಳಿಗೆ ಯಾವುದೋ ಯುದ್ಧ ಸಮಯದಲ್ಲಿಯೋ ಕಾಣಿಕೆಯಾಗಿಯೋ ದೊರೆತು ಅವರು ಅವುಗಳನ್ನು ಹೂಳಿಟ್ಟಿರಬೇಕು. ಅಂತಹ ನಾಣ್ಯಗಳು ದೊರೆತಿರಲೂ ಸಾಧ್ಯ. ಈ ಜಾಗದಲ್ಲಿ ಮಹಾನಗರವೊಂದಿದ್ದ ಬಗೆಗೆ ಅವಶೇಷಗಳು ದೊರೆಯದೆ ಕೇವಲ ನಾಣ್ಯಗಳಿಂದ ತೀರ್ಮಾನಕ್ಕೆ ಬರಲು ಆಗುವುದಿಲ್ಲ. ಆದುದರಿಂದ ಗಂಗರ ಬೆಂಗಾವಲು ಪಡೆಯ ವೀರರಿಗಾಗಿ ನಿರ್ಮಾಣಗೊಂಡ ಬೆಂಗಳೂರು ಒಂದನೆಯ ಕೆಂಪೇಗೌಡನಿಂದ ನಗರವಾಗಿ ಪರಿವರ್ತಿತವಾಗಿ ಯಲಹಂಕನಾಡಿನ ಮೂರನೆಯ ರಾಜಧಾನಿಯಾಯಿತೆಂದು ಹೇಳಬಹುದು.

ಒಂದನೆಯ ಕೆಂಪೇಗೌಡನನ್ನು ಆನೆಗೊಂದಿಯಲ್ಲಿ ಸೆರೆಯಲ್ಲಿಟ್ಟ ಪ್ರಸಂಗವೊಂದನ್ನು ಚರಿತ್ರಕಾರರು ಉಲ್ಲೇಖಿಸುತ್ತಾರೆ. "One day, on the advice of the all-powerful Rama Raya. emperor Sadasiva Raya summoned Kempe Gowda to the imperial court. And, on his arrival at Vijayanagar Rama Raya had him seized and threw him into a prison at Anegundi.[25]" ಈ ಬಂಧನಕ್ಕೆ ಕಾರಣ ಅವನು ಚಲಾವಣೆಗೆ ತಂದ ಭೈರವ ನಾಣ್ಯಗಳು. ಬೆಂಗಳೂರು ನಗರ ನಿರ್ಮಾಣದ ತರುಣದಲ್ಲಿಯೇ ಯಲಹಂಕ ನಾಡು ಭೀಕರ ಕ್ಷಾಮವನ್ನೆದುರಿಸಬೇಕಾಯಿತೆಂದೂ ಆ ಕ್ಲಿಷ್ಟ ಪರಿಸ್ಥಿತಿಯನ್ನೆದುರಿಸಲು ಸ್ವತಂತ್ರವಾಗಿ ನಾಣ್ಯ ಚಲಾವಣೆ ತರಬೇಕಾಯಿತೆಂದೂ ಇದರಿಂದ ಕುಪಿತಗೊಂಡ ರಾಮರಾಯ ಕೆಂಪೇಗೌಡನನ್ನು ಬಂಧನದಲ್ಲಿರಿಸುವಂತೆ ಪ್ರೇರೇಪಿಸಿದನೆಂದೂ ತಿಳಿದುಬರುತ್ತದೆ. ಹೀಗೆ ಒಂದನೆಯ ಕೆಂಪೇಗೌಡ ಬಂಧನದಲ್ಲಿದ್ದಾಗ, "Therefore, Yelahanka nadu, along with the newly

---

25 Bangalore through Centuries: M. Fazulal Hasan page 15

built fort Bangalore, became part of Channapattana Prinicipality by an imperial decree.[26] ಆದರೆ ಈ ಘಟನೆಗೆ ಸಂಬಂಧಿಸಿದಂತೆ ಯಾವ ಆಧಾರಗಳೂ ದೊರೆಯುವುದಿಲ್ಲ. ಒಂದನೆಯ ಕೆಂಪೇಗೌಡ ಬೆಂಗಳೂರನ್ನು ನಿರ್ಮಿಸುವ ಕಾಲಕ್ಕೆ ಅವನ ಮಗ ಇಮ್ಮಡಿ ಕೆಂಪೇಗೌಡ ಆಗಲೇ ವಯಸ್ಸಿಗೆ ಬಂದಿದ್ದ. ಒಂದು ವೇಳೆ ಯಲಹಂಕ ನಾಡನ್ನು ಚನ್ನಪಟ್ಟಣದ ಅಧೀನವಾಗಿ ಮಾಡಿದ್ದರೆ ಈತ ಸುಮ್ಮನಿರುತ್ತಿದ್ದನೆ ? ಎಂಬುದು ಕುತೂಹಲಕಾರಿಯಾದ ವಿಷಯ. ಮತ್ತೊಂದು ಗಮನಿಸಬೇಕಾದ ವಿಷಯವೆಂದರೆ, ಕೆಂಪೇಗೌಡ ಚಲಾವಣೆಗೆ ತಂದನೆಂದು ಹೇಳಲಾಗುವ ಭೈರವ ನಾಣ್ಯ ಈವರೆಗೆ ದೊರೆಯದೇ ಇರುವುದು. ಕ್ಯಾಲಿಗುಲನ ಅಂಕಿತವಿರುವ ರೋಮನ್ ನಾಣ್ಯಗಳು ಬೆಂಗಳೂರಿನಲ್ಲಿ ದೊರೆಯಬಹುದಾದರೆ ಇತ್ತೀಚೆಗೆ ಜಾರಿಗೆ ತಂದ ಭೈರವನಾಣ್ಯವೇಕೆ ದೊರೆಯುವುದಿಲ್ಲ ? ಹೀಗಾಗಿ ಕೆಂಪೇಗೌಡ ಸ್ವತಂತ್ರ ನಾಣ್ಯ ಚಲಾವಣೆಗೆ ಪ್ರಯತ್ನಿಸಿದನೆ? ಅಥವಾ ಚಲಾವಣೆಗೆ ತಂದನೆ ಎಂಬುದು ಭೈರವನಾಣ್ಯವೊಂದು ದೊರೆಯುವ ವರೆಗೆ ಸಮಸ್ಯೆಯಾಗಿಯೇ ಉಳಿಯಬೇಕಾಗುತ್ತದೆ.

ಭೈರವ ನಾಣ್ಯವನ್ನು ಟಂಕಿಸಿದ್ದಕ್ಕಿಂತ ಬೆಂಗಳೂರು ನಗರ ಮತ್ತು ಕೋಟೆಯ ನಿರ್ಮಾಣ ಒಂದನೆಯ ಕೆಂಪೇಗೌಡ ಮತ್ತು ವಿಜಯನಗರದ ಮಧ್ಯೆ ವಿರಸವನ್ನುಂಟು ಮಾಡಿರುವ ಸಾಧ್ಯತೆ ಕಂಡುಬರುತ್ತವೆ. ಬೆಂಗಳೂರು ನಿರ್ಮಾಣಕ್ಕೆ ಕೇಂದ್ರದಿಂದ ಅನುಮತಿ ದೊರೆತಿದ್ದಿತಾದರೂ, ಇಂತಹ ಭವ್ಯ ನಗರವನ್ನು ಸಾಮಂತನೊಬ್ಬ ನಿರ್ಮಿಸಿಯಾನೆಂದು ಅವರಿಗೆ ಅನ್ನಿಸಿರಲಿಲ್ಲ. ಇದರೊಂದಿಗೆ ಚನ್ನಪಟ್ಟಣದ ಜಗದೇವರಾಯನ ಮುಂದಾಳುತನದಲ್ಲಿ ಅನೇಕ ಪಾಳೆಯಗಾರರು ಕೆಂಪೇಗೌಡನ ವಿರುದ್ಧ ರಾಮರಾಯನಲ್ಲಿ ದೂರು ಹೇಳಿ ಅವನು ಈ ಕೋಟೆಯ ನಿರ್ಮಾಣ ಸ್ವತಂತ್ರವಾಗುವ ಹುನ್ನಾರೆಂದರು. ಇದು ಪ್ರಾಯ: ವಿಜಯನಗರದ ಅರಸರಲ್ಲಿ ಅಸಮಾಧಾನವನ್ನುಂಟುಮಾಡಿರಬೇಕು. ಆಗಿನ ಕಾಲದಲ್ಲಿ ಭೀಕರವಾದ ಕ್ಷಾಮ ವುಂಟಾಯಿತೆಂಬ ಬಗ್ಗೆಯೂ ಅನುಮಾನವಿದೆ, " There was a terrible famine in the Deccan in 1475 A. D. It is said to have lasted for two years. Parts of the Vijayanagar kingdom should have suffered from it as the telugu country, now forming part of the Krishna and Guntur, appears to have baen ravaged by it. How far it extended into the interior and whether it affected any part of South India proper is not known."[27] ಮೇಲಿನ ಹೇಳಿಕೆ ಯಲಹಂಕ ನಾಡು ಭೀಕರ ಕ್ಷಾಮಕ್ಕೆ ತುತ್ತಾಗಿರಲಿಲ್ಲವೆಂಬುದನ್ನು ಪ್ರತಿಪಾದಿಸುತ್ತದೆ. ಆದರೆ ಈ ಬಂಧನದ ಘಟನೆಯ ಹಿನ್ನೆಲೆ ಮುನ್ನೆಲೆಗಳೇನು ಎಂಬ ವಿಚಾರ ಸಮಸ್ಯೆಯಾಗಿಯೇ ಉಳಿಯುತ್ತದೆಯಾದರೂ ವಿಜಯನಗರದ ಆಡಳಿತದ ಮೇಲೆ ಉಂಟಾದ ವೈಪರೀತ್ಯಗಳಲ್ಲಿ ಅದರ

---

26 *Bangalore through Centuries*, M. Fazlul Hasan page 15

27 *Mysore Gazetteer*, Hayavadana Rao, Vol. II, p. 1608

ಸಾಮಂತ ರಾಜ್ಯವಾದ ಯಲಹಂಕ ನಾಡಿಗೂ ಅನ್ವಯವಾಗಿ ಈ ರೀತಿಯ ಅಭಿಪ್ರಾಯಗಳು ಹುಟ್ಟಿಕೊಂಡಿರಬೇಕು.

ಬೆಂಗಳೂರು ನಗರ ನಿರ್ಮಾಣಕ್ಕೆ ವಿಜಯನಗರ ಅನುಮತಿ ನೀಡಿದ ಬಗೆಗೂ ಸ್ಪಷ್ಟವಾದ ಆಧಾರಗಳು ದೊರೆಯುವುದಿಲ್ಲ. ವಿಜಯನಗರದ ಪ್ರಸಿದ್ಧ ದೊರೆ ಕೃಷ್ಣದೇವರಾಯ 1509ರಲ್ಲಿ ಪಟ್ಟಕ್ಕೆ ಬಂದ. ಆತನು ಆಡಳಿತವನ್ನು ವಹಿಸಿಕೊಂಡ ಕೂಡಲೆ ಉಮ್ಮತ್ತೂರಿನ ಮೇಲೆ ದಂಡೆತ್ತಿ ಬಂದ. ಏಕೆಂದರೆ ಉಮ್ಮತ್ತೂರಿನ ರಾಜರು ಸ್ವತಂತ್ರರಂತೆ ವರ್ತಿಸುತ್ತಿದ್ದರು. ಈ ಭಾಗದ ಮೇಲೆ ತನ್ನ ಹತೋಟಿಯನ್ನು ಮತ್ತೆ ಗಳಿಸಿಕೊಂಡು ಅದರ ಆಡಳಿತವನ್ನು ಯಲಹಂಕನಾಡಿನ ದೊರೆಗಳಿಗೆ ವಹಿಸಿಕೊಟ್ಟ ಉಲ್ಲೇಖವಿದೆ. "Devanahalli 81 Dated in 1425 A.D refer to the grant of a village in the Shivanasamudram sime of the yelahanaka nad, part of the present Bangalore District was in those times and long after known as Shivana samudra sime[28]" ಅಂದರೆ ಈ ಹೇಳಿಕೆಯಂತೆ ಕೃಷ್ಣದೇವರಾಯನಿಗೀತ ಮುಂಚೆಯೆ ಈ ಭಾಗದ ಒಂದು ಹಳ್ಳಿ ಯಲಹಂಕನಾಡ ಪ್ರಭುಗಳಿಗೆ ದೊರೆಯಿತು. ಆದರೆ "Shivana samudra sime of Yelahanka nad" ಎಂಬ ಮಾತು ಈಗಾಗಲೇ ಅದು ಯಲಹಂಕ ನಾಡಿನ ಒಂದು ಭಾಗವಾಗಿತ್ತೆಂಬುದನ್ನು ಸೂಚಿಸುತ್ತದೆ. ಉಮ್ಮತ್ತೂರಿನ ರಾಜರ ಆಡಳಿತಕ್ಕೆ ಬರುವುದಕ್ಕಿಂತ ಮೊದಲು "A sub - division caused Chikkagangavadi or the lesser gangvadi occupied the valey of the Shimsha, with Honganur Channapattana as its chief town, ಎಂಬ ಹೇಳಿಕೆಯೂ ದೊರೆಯುತ್ತದೆ, ಅಂದರೆ ಗಂಗರ ಕಾಲದಿಂದಲೂ ಈ ಭಾಗ ಅಭಿವೃದ್ಧಿ ಹೊಂದಿದ್ದುದಾಗಿ ತಿಳಿಯುತ್ತದೆ. "In Bangalore 79 dated about 870 A.D. Sathavakya II is mentioned. During his reign the nagattaru chief is said to have fixed sluices to two tanks at Agara (Near Bangalore east) and constructed a third. Bangalore 83 dated about 890 A.D Ereyappa is referred to as ruling over the Country."[30] ಇದರಿಂದ ಹೊಯ್ಸಳರು ಮತ್ತು ವಿಜಯನಗರ ಅರಸರ ಕಾಲದಲ್ಲಿ ಬೆಂಗಳೂರು ದಂಡಕಾರಣ್ಯವಾಗಿತ್ತೆಂಬ ವಾದ ಬಿದ್ದುಹೋಗುತ್ತದೆ. ಗಂಗರ ಕಾಲದಿಂದಲೂ ಈ ಭಾಗ ಅಭಿವೃದ್ಧಿಯಲ್ಲಿದ್ದ ವಿಷಯ ಸ್ಪಷ್ಟವಾಗುತ್ತದೆಯಷ್ಟೇ ಅಲ್ಲ, ಬೆಂಗಾವಲಾಳೂರು ಎಂಬ ಹೆಸರಿಗೆ ಒತ್ತಾಸೆಯಾಗುತ್ತದೆ. ಈ ಯಾವ ಹೇಳಿಕೆಗಳಲ್ಲಿಯೂ ವಿಜಯನಗರನಗರ ನಿರ್ಮಾಣಕ್ಕಾಗಿ ಯಲಹಂಕನಾಡ ದೊರೆಗೆ ಅನುಮತಿ ನೀಡಿದ ಸ್ಪಷ್ಟ ಉದಾಹರಣೆ ದೊರೆಯುವುದಿಲ್ಲ. ಈ ಕಾರಣಗಳಿಂದಾಗಿ ಒಂದನೆಯ ಕೆಂಪೇಗೌಡ ಬಿಟ್ಟಾರೆ ಒಂದು ನಗರ ನಿರ್ಮಾಣದ ಅನುಮತಿ ಪಡೆದು ಬೆಂಗಳೂರನ್ನು ನಿರ್ಮಿಸಿರಬೇಕು.

---

28 *Mysore Gazetteer*, Hayavadana Rao, vol V, page 41.
29 ಅದೇ, page 37
30 ಅದೇ, page 38

ಬೆಂಗಳೂರು ನಗರವನ್ನು ನಿರ್ಮಿಸಿದ ಒಂದನೆಯ ಕೆಂಪೇಗೌಡ ಮತ್ತು ಅವನ ಅನಂತರ ಬಂದ ಅವನ ವಂಶದವರು ಅನೇಕ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಇವುಗಳಲ್ಲಿ ಈಗ ಕೋಟೆಯ ವೆಂಕಟೇಶ್ವರ ದೇವಾಲಯವಾಗಿರುವ ಒಂದು ಗುಡಿ ಇತಿಹಾಸದ ದೃಷ್ಟಿಯಿಂದ ಇಲ್ಲಿ ಉದ್ಧರಣಯೋಗ್ಯವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರದ ಇತಿಹಾಸವೂ ಬದಲಾಗುತ್ತದೆ. ಚರಿತ್ರಕಾರರು, "1687ರಲ್ಲಿ ಚಿಕ್ಕದೇವರಾಜ ಒಡೆಯರು ಬೆಂಗಳೂರನ್ನು ಮೂರು ಲಕ್ಷರೂಪಾಯಿಗಳಿಗೆ ಕೊಂಡುಕೊಂಡರು[31]" ಎಂದುಹೇಳಿದ್ದಾರೆ. ಅವರೇ ಬೇರೊಂದು ಸಂದರ್ಭದಲ್ಲಿ "ಮುಮ್ಮಡಿ ಕೆಂಪೇಗೌಡನ ಮೊಮ್ಮಗನಾದ ಮುಮ್ಮಡಿ ಕೆಂಪವೀರಪ್ಪಗೌಡ ಮೂರನೆಯ ಕೆಂಪೇಗೌಡನೆಂದು ಹೆಸರು ಹೊತ್ತು 1795ರಲ್ಲಿ ಪಟ್ಟಕ್ಕೆ ಬಂದನು. ಇಪ್ಪತ್ತ ಮೂರು ವರ್ಷಗಳ ಕಾಲ ಮಾತ್ರ ರಾಜ್ಯವಾಳಿದರೂ ಮಾಗಡಿಯ ಮನೆತನದ ಕೊನೆಯ ದೊರೆಯಾದರೂ ಇವನು ತನ್ನ ತಂದೆ ಅಜ್ಜರಿಗಿಂತ ಹೆಚ್ಚು ಖ್ಯಾತಿ ಪಡೆದ ಇವನ ಕಾಲ ದಕ್ಷಿಣ ಪ್ರಾಂತದ ಪರ್ವಕಾಲವಾಗಿತ್ತು. ಆಗ ವಿಜಯನಗರ ಚಕ್ರಾಧಿಪತ್ಯ ಅಳಿದಿತ್ತು. ಸಾಮಂತರಾಜರು ಪ್ರತಿಯೊಬ್ಬರೂ ತಮ್ಮತಮ್ಮ ರಾಜ್ಯಕ್ಕೆ ತಾವೇ ದೊರೆಗಳೆಂದುಕೊಂಡಿದ್ದರು. ನೆರೆರಾಜ್ಯಗಳ ಸುಲಿಗೆಗೆ ತೊಡಗಿದ್ದ ಸ್ವೇಚ್ಛಾಚಾರಿಗಳಾಗಿದ್ದರು. ಮೈಸೂರಿನ ಅರಸರಾದ ಒಡೆಯರ ಮನೆತನದವರೂ ಸ್ವತಂತ್ರರಾಗಿ ತಮ್ಮ ರಾಜ್ಯವನ್ನು ವಿಸ್ತರಿಸುವ ಹಂಬಲವನ್ನು ಹೊಂದಿದ್ದರು. ಸೀರ್ಯದ ನವಾಬರು, ಮರಾಠರು ಮೈಸೂರಿನವರು-ಇವರು ಮೂವರೂ ಕೆಂಪೇಗೌಡನ ಸುಭಿಕ್ಷರಾಜ್ಯ, ಸುಸಜ್ಜಿತ ಸೈನ್ಯ ಪ್ರವರ್ಧಮಾನವಾಗುತ್ತಿದ್ದ ಬೆಂಗಳೂರು, ಮಾಗಡಿ ಸಾವನದುರ್ಗಗಳನ್ನು ಕಂಡು ಅಸೂಯೆಗೊಂಡಿದ್ದರು[32]" ಈ ಹೇಳಿಕೆಗಳಲ್ಲಿ ಕಾಣುವ ಪರಸ್ಪರ ವಿರುದ್ಧಾಭಿಪ್ರಾಯಗಳನ್ನು ಕಂಡಾಗ ಇವುಗಳಲ್ಲಿ ಯಾವುದು ಸರಿ ಎಂಬ ಅನುಮಾನ ತಲೆದೋರುತ್ತದೆ. ವಾಸ್ತವವಾಗಿ ಚಿಕ್ಕದೇವರಾಜ ಒಡೆಯರು ಮರಸು ನಾಡಿನ ಮೇಲೆ ಯುದ್ಧ ಮಾಡಿದ ಉಲ್ಲೇಖ ದೊರೆಯುತ್ತದೆ,

ಒಂದು ದೆಸೆಯೊಳ್ ತುರುಕರೊನ್ದು ಕಡೆಯೊಳ್‌ವೊಜಿಸ
　　ರೊಂದೆಸೆಯೊಳಾರೆಯರ ಬಿಂದಮಳಿವಿಂ ಬೇ
ರೊಂದು ಬಟೆಯೊಳ್ ತಿಗುಳರೊಂದಿರವಿನೊಳ್ ಕೊಡಗ
　　ರೊಂದು ಕಿಲದೊಳ್ ಮಲೆವರೊಂದುವೆರೆದೆಲ್ಲರ್
ಸಂದಣಿಸಿ ಕಾಳಗಕೆ ಮುಂದುವರಿವನ್ನವದ
　　ಟಿಂದವರ ತಟ್ಟುಗಳ ಪಂದಲೆಗಳಂ ದಿಗ್
ಬೃಂದಬಲಿಯಿತ್ತು ನಲವಿಂದೆ ಚಿಕದೇವನೃಪ
　　ನಂದ ಮಿಗೆ ಪೆರ್ಜಸಮನೊಂದಿ ಸೊಗವಾಟುಂ[33]

---

[31] ಕರ್ನಾಟಕದ ಇತಿಹಾಸ ದರ್ಶನ, ಎಂ. ವಿ. ಕೃಷ್ಣರಾವ್, ಪುಟ 535

[32] ಅದೇ, ಪುಟ 514

[33] ಚಿಕ್ಕದೇವರಾಜ ಬಿನ್ನಪ, ಸಂ. ರಾಜರತ್ನಂ, ಪುಟ ೬

ಮೇಲಿನ ಪದ್ಯ ಚಿಕ್ಕದೇವರಾಜರು ಮರಸುನಾಡು ಅರ್ಥಾತ್ ಯಲಹಂಕ ನಾಡಿನೊಂದಿಗೆ ಯುದ್ಧ ಮಾಡಿದ ಪ್ರಸಂಗದನ್ನು ಹೇಳುತ್ತದೆ. ಚಿಕ್ಕದೇವರಾಜ ಚನ್ನಪಟ್ಟಣದ ಬಳಿ ಮರಸುನಾಡಿನ ಬೇಡ ಪಡೆಯನ್ನು ಎದುರಿಸಿದ ಪ್ರಸಂಗವನ್ನು ಈ ಹಿಂದೆ ಉದಾಹರಿಸಲಾಗಿದೆ.

ಇಮ್ಮಡಿ ಕೆಂಪೇಗೌಡ ಅದುವರೆಗೆ ನಡೆದುಕೊಂಡು ಬಂದಿದ್ದ ಸರ್ವಧರ್ಮಸಮನ್ವಯವನ್ನು ತ್ಯಜಿಸಿ ಶೈವದತ್ತ ಹೆಚ್ಚು ಒಲಿದಂತೆ ಕಾಣುತ್ತದೆ. ಮಾಗಡಿ ಮತ್ತು ಬೆಂಗಳೂರುಗಳಲ್ಲಿ ಈತ ಕಟ್ಟಿಸಿದ ಶಿವಾಲಯಗಳು ಇದಕ್ಕೆ ಸಾಕ್ಷಿಯಾಗಿವೆ ಇದಕ್ಕೆ ಕಾರಣ ಹೀಗಿದೆ. ಅನಾದಿ ಕಾಲದಿಂದಲೂ ಒಕ್ಕಲಿಗರು ವೈಷ್ಣವ ಮತ್ತು ಶೈವಗಳೆರಡನ್ನೂ ಸಮವಾಗಿ ಕಂಡವರು. ಯಲಹಂಕದ ರಾಜರು ಭೈರವಾರಾಧಕರು. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರಿಂದ ವೀರಶೈವಮತ ಸ್ಥಾಪನೆಯಾದನಂತರ ಅನೇಕ ಒಕ್ಕಲಿಗರು ಆ ಕಡೆಗೆ ಆಕರ್ಷಿತರಾದರೆಂಬುದು ವಾಸ್ತವಸಂಗತಿ. ವೀರಶೈವ ಪ್ರಬಲವಾದಂತೆಲ್ಲಾ ಭೈರವಸಂಪ್ರದಾಯ ಕುಗ್ಗುತ್ತಾ ಬಂದಿರುವುದನ್ನು ಕಾಣುತ್ತೇವೆ. ನಾಥಪಂಥದಮಠಮಾನ್ಯಗಳು ಕಾಪಾಲಿಗರ ವಶವಾಗಿ ರಜೋಗುಣದ ಕೇಂದ್ರಗಳಾದವು. ಪಶುಬಲಿ, ಬಂಗಿ, ಸುರೆ ಮುಂತಾದವುಗಳ ಹಾವಳಿ ಅತಿಯಾಯಿತು. ಗೌರವಸ್ಥರು ಇಂತಹ ಮಠಮಾನ್ಯಗಳಿಂದ ದೂರವಿರಲು ತೊಡಗಿದರು. ಹೀಗಾಗಿ ಇಮ್ಮಡಿ ಕೆಂಪೇಗೌಡ ಮತ್ತು ಅವನ ನಂತರದ ದೊರೆಗಳು ವೀರಶೈವದತ್ತ ಹೆಚ್ಚು ಒಲವನ್ನು ತೋರುತ್ತ ಬಂದರು. ಇದು ವೈಷ್ಣವರಿಗೆ ಸಹಿಸದಾಯಿತು. ಯಲಹಂಕ ನಾಡಿನ ಮಹಾಮನೆಗೆ ಧಾರ್ಮಿಕ ಆಂದೋಲನದ ಕಿಡಿ ಬಿದ್ದು ನಿಧಾನವಾಗಿ ಕವರಲಾರಂಬಿಸಿತು.

ನಮ್ಮ ಪ್ರಾಚೀನ ಕಾವ್ಯಗಳು ಮತ್ತು ಚರಿತ್ರೆಗಳಲ್ಲಿ ಅನೇಕ ವಿಚಾರಗಳನ್ನು ಮುಚ್ಚಿ ಹಾಕಲಾಗಿದೆ ಅಥವಾ ಬದಲಾಯಿಸಿ ಬರೆಯಲಾಗಿದೆ ಅನ್ನಿಸುತ್ತದೆ. ಮಾಗಡಿ ದೊರೆಗಳಿಗೆ ಸಂಬಂಧಿಸಿದಹಾಗೆ ನಮ್ಮಲ್ಲಿ ವಿಪುಲವಾದ ಜನಪದಸಾಹಿತ್ಯ ದೊರೆಯುತ್ತದೆ. ಈ ಜನಪದ ಸಾಹಿತ್ಯದಲ್ಲಿ ಇಮ್ಮಡಿ ಕೆಂಪೇಗೌಡ ಮತ್ತು ಅವನ ನಂತರದ ದೊರೆಗಳ ವಿರುದ್ಧ ನಡೆದ ಧಾರ್ಮಿಕ ಸಂಚಿನ ಎಳೆಗಳು ದಟ್ಟವಾಗಿಯೇ ದೊರೆಯುತ್ತವೆ. ಮೊದಲಿಗೆ ರಂಗನಾಥನ ಭಕ್ತನಾಗಿದ್ದ ಮಾಗಡಿಯ ದೊರೆ ಸೋಮೇಶ್ವರನ ಭಕ್ತನಾಗುವಂತೆ ಮಾಡಲಾದ ಕಥೆಯೊಂದು ಹೀಗಿದೆ. ಒಂದು ದಿನ ಎಂದಿನಂತೆ ದೊರೆ ದೇವಾಲಯಕ್ಕೆ ರಂಗನಾಥನ ಪೂಜೆಗಾಗಿ ಹೋದ. ಪೂಜೆಯನಂತರ ಪೂಜಾರಿ ಪುಟ್ಟಣ್ಣ ತೀರ್ಥವನ್ನು ರಾಜನಿಗೆ ಕೊಟ್ಟ. ಇನ್ನೇನು ಅದನ್ನು ತೆಗೆದುಕೊಳ್ಳಬೇಕು. ಅಷ್ಟರಲ್ಲಿ ರಾಜನ ಕಣ್ಣಿಗೆ ಬಿಳಿಯ ಕೂದಲೊಂದು ಕಂಡಿತು. ಕೂಡಲೇ ಅವನು ಪೂಜಾರಿಯನ್ನು ಇದೇನೆಂದು ಕೇಳಿದ. ಪೂಜಾರಿ ನಮ್ರನಾಗಿ ರಂಗನಾಥನಿಗೆ ವಯಸ್ಸಾಯಿತು. ಅವನ ತಲೆಯ ನರೆ ಗೂದಲು ಎಂದ. ಸರಿ ಮುದಿಯಾದ ರಂಗನಾಥನಿಂದ ಇನ್ನೇನೂ ಉಪಯೋಗವಿಲ್ಲವೆಂದು ದೊರೆ ಸೋಮೇಶ್ವರನತ್ತ ನಡೆದ. ಆದರೆ ರಂಗನಾಥ ಅವನ ಕನಸಿನಲ್ಲಿ ಬಂದು ತನ್ನನ್ನು ಬಿಡದೆ ಸೇವಿಸ ಬೇಕೆಂದು ಕೇಳಿದನಂತೆ.

" ನಿನಗೆ ಸಕಲ ಭಾಗ್ಯವನೆಲ್ಲ ಉಂಟುಮಾಡಿ ಕೊಡುತೀನಿ
ಮಗನೆ ನನ್ನದೊಂದು ಸೇವೆಯ ಚಂದದಿಂದ ಮಾಡಿಸಯ್ಯಾ
ನನಗೆ ಏಳು ಪೂಜೆಯ ಮಾದಿಸಯ್ಯಾ ಏಳುತಳಿಗೆಯ ಮಾಡಿಸಯ್ಯಾ

ಅಯ್ಯಾ ಮಾಗಡಿಯ ರಂಗಧಾಮ ಮನೆಸ್ವಾಮಿ ರಂಗಧಾಮ
ಇಷ್ಟೊಂದು ಮಾತಹೇಳಿ ಮಾಯವಾಗಿ ಹೋದುನಲ್ಲೋ[34]

ಆದರೂ ಏನೂ ಪ್ರಯೋಜನವಾಗಲಿಲ್ಲ. ಮಾಗಡಿಯ ದೊರೆ ಶೈವದತ್ತ ತನ್ನ ಹೆಜ್ಜೆಯನ್ನು ಮುಂದುವರಿಸಿದ. ಆಗ ವೈಷ್ಣವರಿಗೆ ಎಂತಹ ಕೋಪವುಂಟಾಯಿತು, ಅವರು ಹೇಗೆ ಮಾತನಾಡಿಕೊಂಡರೆಂಬುದನ್ನು ಜನಪದ ಗಾಯಕರಿಂದಲೇ ಕೇಳಬೇಕು. ಅವರು ಅದನ್ನು ನಾನಾ ರೀತಿಯಲ್ಲಿ ವಿಸ್ತರಿಸಿ ಹಾಡುತ್ತ ಹೋಗುತ್ತಾರೆ.

ಅಯ್ಯ ಬ್ರಾಹ್ಮಣರು ಏನಂತ ಮಾತನ್ನು ಆಡುತಾರೆ
ಇವನ ಸಿರಿತನ ಅಡಗಬೇಕು ಇವನ ದೊರೆತನ ಅಡಗಬೇಕು
ಇವನ ಪರಿವಾರ ಅಡಗಬೇಕು ದವಲತ್ತು ಅಡಗಬೇಕು[35]

ಹೀಗೆಯೇ ಈ ಧಾರ್ಮಿಕ ಪಿತೂರಿ ಮುಂದುವರಿದು ಯಲಹಂಕ ರಾಜ್ಯವನ್ನು ಅವನತಿಯತ್ತ ಒಯ್ಯುತ್ತದೆ.

ಬೆಂಗಳೂರಿನಲ್ಲಿರುವ ಕೋಟೆಯ ವೆಂಕಟರಮಣಸ್ವಾಮಿ ದೇವಾಲಯ ಒಂದನೆಯ ಕೆಂಪೇಗೌಡ ಕೋಟೆಯ ರಕ್ಷಣೆಗಾಗಿ ನಿರ್ಮಿಸಿದ ಕಾಲಭೈರವ ದೇವಾಲಯ. ಭೈರವನಿಗೆ ಬಾಗಿಲ ಭೈರವ ಎಂಬ ಅಂಕಿತವೂ ಇದೆ. ಮೈಸೂರು ಅರಸರು ಬೆಂಗಳೂರು ಅವರ ವಶಕ್ಕೆ ಬಂದನಂತರ ಅಂದರೆ ಮುಮ್ಮಡಿ ಕೆಂಪವೀರಪ್ಪಗೌಡನ ನಂತರ ಆ ಗುಡಿಯಲ್ಲಿ ವೆಂಕಟೇಶ್ವರ ಪ್ರತಿಷ್ಠೆ ಮಾಡಿಸಿರಬೇಕು. ಏಕೆಂದರೆ "ಶಾಸನದಲ್ಲಿ ಗುಡಿಯನ್ನು ಕಟ್ಟಿಸಿದ ಪ್ರಸ್ತಾಪವಿಲ್ಲ; ವೆಂಕಟೇಶ್ವರಸ್ವಾಮಿಯ ಮೂರ್ತಿಯ ಪ್ರತಿಷ್ಠಾಪನೆಯಷ್ಟೆ ಚಿಕ್ಕದೇವರಾಜರ ಕೆಲಸವೆಂದು ಅಲ್ಲಿ ಬರುವ ವಿವರ. ಗುಡಿಯೊಂದು ಮೊದಲಿಂದ ಇದ್ದಿತೆಂದು ಸೂಚನೆಯಿದೆ. ಬಹುಶಃ ಕೆಂಪೇಗೌಡ ಕೋಟೆಯನ್ನು ಕಟ್ಟಿದಾಗಲೇ ಇದೂ ಎದ್ದಿರಬಹುದು. ಗುಡಿಯ ವಿಮಾನವನ್ನು ನೋಡಿದರೆ ಶಕ್ತಿಯ ಗುಡಿಯಿದ್ದಂತೆ ತೋರುತ್ತದೆ.[36]" ಬೆಂಗಳೂರಿನ ಬಹುತೇಕ ದೇವಾಲಯಗಳು ಒಂದನೆಯ ಕೆಂಪೇಗೌಡನಿಂದ ನಿರ್ಮಿತವಾದವು. ಅನಂತರದ ಅರಸರು ಅವುಗಳನ್ನು ಉತ್ತಮಪಡಿಸಿದರು. ಯಲಹಂಕ ನಾಡು ಮೈಸೂರಿನಲ್ಲಿ ಲೀನವಾದ ನಂತರ ಕಾಲಭೈರವನ ಆಲಯ ವೆಂಕಟರಮಣ ಆಗಿದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ.

ಯಲಹಂಕ ನಾಡಿನ ದೊರೆಗಳ ಧಾರ್ಮಿಕರು ಕನ್ನಡ ನೆಲದವರೇ ಎಂಬುದಕ್ಕೆ ಅವರ ಮನೆ ದೇವತೆ ಕೆಂಪಮ್ಮ ಮತ್ತು ಆರಾಧ್ಯದೈವ ಭೈರವ ಪ್ರಧಾನ ಸಾಕ್ಷಿಯಾಗಿದ್ದಾರೆ. ಕೆಲವರು "The yelahanka nadu Prabhus were gowdas or tillers of the land. They belonegd to the Marasuvokkalu sect, The ancestors of which were migrants from Conjeevaram. They were not a akin of the gangadikara Gowdas of other parts of Karnatak,'

---

34 ದೊಂಬಿ ದಾಸರು ಹಾಡುವ ಮಾಗಡಿ ಕೆಂಪೇಗೌಡ ಜನಪದ ಕಾವ್ಯ.

35 ಜನಪದಗೀತೆ

36 ಕೋಟೆ ವೆಂಕಟೇಶ್ವರ ದೇವಾಲಯ, ಸುಧಾ ವಾರಪತ್ರಿಕೆ

ಎಂಬಂತಹ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇದು ಸರಿಯಲ್ಲ. ಏಕೆಂದರೆ ಭೈರವ ಮತ್ತು ಕೆಂಪಮ್ಮನ ಆರಾಧಕರು ಗಂಗಡಿಕಾರರಲ್ಲಿಯೂ ಅಪಾರವಾಗಿದ್ದಾರೆ. ಊರಿಗೊಂದು ಬೋರೇದೇವರ ಗುಡಿ ಎಂಬುದು ಗಾದೆಯು ಮಾತೇ ಆಗಿದೆ. ಬೆಂಗಳೂರು ಕೆಂಪೇಗೌಡನ ವಂಶದ ಮೂಲಪುರುಷನೆಂದು ಕರೆಯಲಾದ ರಣಭೈರೇಗೌಡನ ಮಗಳು ದೊಡ್ಡಮ್ಮ ಅನಂತರ ಆವತಿಯಲ್ಲಿ ಸತಿಯಾದಳೆಂದು ತಿಳಿದು ಬರುತ್ತದೆಯಷ್ಟೆ. ಈಕೆಯೆ ಮುಂದೆ ಕೆಂಪಮ್ಮನೂ ಆಗಿರುವಂತೆ ಕಾಣುತ್ತದೆ. ಏಕೆಂದರೆ ಇಂದಿಗೂ ಕರ್ನಾಟಕದ ಮಂಡ್ಯ, ಮೈಸೂರು, ಹಾಸನ ಮತ್ತು ಬೆಂಗಳೂರು ಜಿಲ್ಲೆಗಳ ಗ್ರಾಮದೇವತೆಗಳನ್ನು ಕುರಿತ ಪದಗಳಲ್ಲಿ ಈಕೆಯನ್ನು ಮಾರಿಯಮ್ಮ, ದೊಡ್ಡಮ್ಮ, ಕೆಂಪಮ್ಮ ಅಥವಾ ಆಯಾ ಊರಿನ ಹೆಸರಿನಲ್ಲಿ ಹುಲಿಕೆರೆಯಮ್ಮ, ಹೆತ್ತಗೋನ ಹಳ್ಳಿಯಮ್ಮ ಇತ್ಯಾದಿ ಹಾಡಿ ಹೊಗಳುತ್ತಾರೆ. ಈ ಬಗೆಗೆ ಮತ್ತು ಒಂದು ಕಥೆ ಇದೆ. "ಕಲ್ಯಾಣದಲ್ಲಿ ಒಕ್ಕಲು ಮುದ್ದೇಗೌಡನಿದ್ದ. ಅವನಿಗೆ ಏಳು ಜನ ಗಂಡು ಮಕ್ಕಳು. ಒಬ್ಬಳೆ ಹೆಣ್ಣುಮಗಳು ದೊಡ್ಡಮ್ಮ. ಈಕೆಯನ್ನು ಹಜಾಮನಿಗೆ ಕೊಟ್ಟು ಮದುವೆಮಾಡಿಕೊಡಬೇಕೆಂದು ಪ್ರಧಾನಿಯ ಅಧಿಕಾರಯುತ ನಿರೂಪ. ಕೀಳುಜಾತಿಯವನಿಗೆ ಮಗಳನ್ನು ಕೊಡಲೊಪ್ಪದೆ ಒಕ್ಕಲು ಮುದ್ದೇಗೌಡ ರಾತ್ರೋರಾತ್ರಿ ತನ್ನ ಸಂಸಾರದೊಂದಿಗೆ ಏಳು ಗಾಡಿಗಳಲ್ಲಿ ದಕ್ಷಿಣದತ್ತ ಹೊರಟ. ಇವನು ಪರಾರಿಯಾದುದನ್ನರಿತ ಪ್ರಧಾನಿ ಅವನನ್ನು ಹಿಡಿದು ತರಲು ಸೇನೆಯನ್ನು ಕಳಿಸಿದ. ತುಂಗಭದ್ರಾ ನದಿ ತುಂಬಿ ಹರಿಯುತ್ತಿದ್ದುದು ದೊಡ್ಡಮ್ಮನ ಪ್ರಾರ್ಥನೆಗೆ ಓತು ದಾರಿ ಬಿಟ್ಟಿತು. ಸೈನಿಕರು ಬರುವ ಹೊತ್ತಿಗೆ ಮತ್ತೆ ಪ್ರವಾಹ ತುಂಬಿ ಹರಿಯಿತು. ತನ್ನಿಂದಾಗಿ ತನ್ನ ಸಂಸಾರಕ್ಕೆ ಒದಗಿದ ಸಂಕಷ್ಟಗಳಿಗೆ ನೊಂದ ದೊಡ್ಡಮ್ಮ ಸತಿಯಾದಳು. ಮುಂದೆ ಅವಳ ಏಳು ಸಹೋದರರು ಒಕ್ಕಲಿಗರಲ್ಲಿ ಏಳು ಪಂಗಡಗಳಾದರು. ಆಕೆ ಅವರ ಮನೆದೇವತೆಯಾದಳು.[37] ಈ ಎರಡರಲ್ಲಿ ಒಂದು ಸುಮಾರು 1160 ರಲ್ಲಿದ್ದ ಒಕ್ಕಲು ಮುದ್ದೇಗೌಡನೆಂಬ ವಚನಕಾರನಿಗೂ ಮತ್ತೊಂದು 14ನೆಯ ಶತಮಾನದ ಯಲಹಂಕನಾಡ ರಾಜರ ಮೂಲಪುರುಷನಿಗೂ ಅನ್ವಯವಾಗುತ್ತವೆ. ಆದುದರಿಂದ ಒಕ್ಕಲಿಗರ ಮೂಲದ ಬಗೆಗೆ ಪ್ರಚಲಿತವಿದ್ದ ಕಥೆಯನ್ನೆ ಯಾರೊ ಕೆಂಪೇಗೌಡನ ವಂಶಸ್ಥರಿಗೆ ಅನ್ವಯಿಸಿ ಹೇಳಿದ್ದಾರೆ. ಏಕೆಂದರೆ ಈ ಕಥೆಯನ್ನು ಕರ್ನಾಟಕದ ಪ್ರತಿಯೊಬ್ಬ ಒಕ್ಕಲಿಗನ ಮನೆಗೆ ಸಂಬಂಧಿಸಿದಂತೆಯೂ ಊರಿಗೆ ಸಂಬಂಧಿಸಿದಂತೆಯೂ ಹೇಳುತ್ತಾರೆ. ಆದುದರಿಂದ ಯಲಹಂಕ ನಾಡ ಪ್ರಭುಗಳ ಮೂಲಪುರುಷರು ತಮಿಳು ನಾಡಿನ ಕಾಂಜೀವರಂನ ಯಾಮುಂಜಿಯಿಂದ ಬಂದವರೆಂಬುದಕ್ಕೆ ಈ ಕಥೆಯು ಸಮರ್ಪಕವಾದ ಚಾರಿತ್ರಿಕ ಆಧಾರವಾಗಿರುವುದಿಲ್ಲ.

ಯಲಹಂಕ ನಾಡ ಪ್ರಭುಗಳು ಅರ್ಥಾತ್ ಮರಸು ಒಕ್ಕಲಿಗರು ತೆಲುಗರೆಂಬ ಅಭಿಪ್ರಾಯ ಹೇಗೋ ಹುಟ್ಟಿಕೊಂಡಿದೆ. ಇದು ಇತ್ತೀಚಿನ ಬೆಳವಣಿಗೆ ಎಂದು ಕಾಣುತ್ತದೆ. ಏಕೆಂದರೆ ವಿಜಯನಗರದ ಕಾಲ ಮತ್ತು ನಾಲ್ಕನೆಯ ಮೈಸೂರು ಯುದ್ಧದ ನಂತರ ಹೈದರಾಬಾದಿನ ಪ್ರಭಾವಕ್ಕೆ ಒಳಗಾದ ಭಾಗಗಳಲ್ಲಿ ತೆಲುಗಿನ ಪ್ರಭಾವ ಅತಿಯಾಗಿ ಆಯಿತು. ಅಲ್ಲದೆ ಹದಿನೈದನೆಯ ಶತಮಾನದಲ್ಲಿ ಆಂಧ್ರದಲ್ಲಿ ಉಂಟಾದ ಭೀಕರ ಕ್ಷಾಮದಲ್ಲಿ ಅನೇಕ

---

37 ಡಾ|| ಜೀಶಂಪ ಅವರ ಹೆಳವರ ಕಾವ್ಯ ನೋಡಿ.

ರೆಡ್ಡಿ ಜನಾಂಗದ ರೈತರು ಕರ್ನಾಟಕದ ಈ ಭಾಗಗಳಿಗೆ ವಲಸೆ ಬಂದರು. ಬಂದವರು ಕ್ರಮೇಣವಾಗಿ ಇಲ್ಲಿನ ಮರಸು ಒಕ್ಕಲಿಗರೊಂದಿಗೆ ಬೆರೆತರು. ಹೀಗಾಗಿ ಅವರ ಮಾತೃ ಭಾಷೆ ತೆಲುಗಾಗಿಯೂ ವ್ಯವಹಾರ ಭಾಷೆ ಕನ್ನಡವಾಗಿಯೂ ಬೆಳೆದು ಬಂದಿದೆ. ಈ ಕಾರಣದಿಂದಲೇ "The marasu okkalus speak both Canerase and telugu, the section known as Reddi and Palyadasime speaking Telugu and the rest Canarese[38]" ಎಂದು ಅಭಿಪ್ರಾಯಪಡಲಾಗಿದೆ. ಮೇಲಿನ ಹೇಳಿಕೆ ಹೊರಗಿನಿಂದ ಬಂದವರು ಮಾತ್ರ ತೆಲುಗು ಮಾತನಾಡುತ್ತಾರೆಂಬುದನ್ನು ಸ್ಪಷ್ಟಪಡಿಸುತ್ತದೆ.

'ಗಂಗಾಗೌರಿ ಸಂವಾದಮು' ಎಂಬ ಒಂದು ತೆಲುಗು ಯಕ್ಷಗಾನ ಕೃತಿಯನ್ನು ಹಿರಿಯ ಕೆಂಪೇಗೌಡ ಬರೆದದ್ದೆಂದು ತಪ್ಪಾಗಿ ಅರ್ಥಮಾಡಿಕೊಳ್ಳಲಾಗಿದೆ. ಆ ಯಕ್ಷಗಾನ ಕೃತಿಯ ಪ್ರಾರ್ಥನಾ ಪದ್ಯವೊಂದರಲ್ಲಿ ಬರುವ "ಹಿರಿಯ ಕೆಂಪನೃಪತಿ ರಕ್ಷಿಂಚು ಸೋಮೇಶ್ವರಾ" ಎಂಬ ಮಾತು ಈ ವಿವಾದಕ್ಕೆ ಎಡೆಮಾಡಿಕೊಟ್ಟಿರುವಂತೆ ಕಾಣುತ್ತದೆ. ಆದರೆ ಇದು ತಪ್ಪುಗ್ರಹಿಕೆಯಿಂದಾಗಿರುವ ಅಭಿಪ್ರಾಯವೆಂಬುದು ಆ ಮಾತಿನಿಂದಲೇ ಗೊತ್ತಾಗುತ್ತದೆ. ಆದರೆ "ಈ ತೆಲುಗು ಕಾವ್ಯವನ್ನು ನೋಡಿ ಶ್ರೀ ಸುಬ್ಬರಾಮಪ್ಪನವರು ಮಾಗಡಿ ಕೆಂಪೇಗೌಡನೂ ಇವರ ವಂಶದವರೂ ತೆಲುಗರೆಂದು ನಿರ್ಣಯಿಸಿಬಿಟ್ಟರು. ಇವರಿಗಿನ್ನೇನೂ ಗೊತ್ತಿಲ್ಲದಿದ್ದರಿರಲಿ, ಇವರೇ ಉದಾಹರಿಸಿರುವ ಮಂಗಳಾಚರಣೆಯ ವೃತ್ತದಲ್ಲಿರುವ ಹಿರಿಯ ಕೆಂಪನೃಪತಿ ಎಂಬುದನ್ನಾದರೂ ನೋಡಲಿಲ್ಲ.[39]" ಅಷ್ಟೇ ಅಲ್ಲ, ಹಿರಿಯ ಕೆಂಪನೃಪತಿ ರಕ್ಷಿಂಚು ಸೋಮೇಶ್ವರಾ ಎಂಬ ಮಾತಿನ ಅರ್ಥ ಹಿರಿಯ ಕೆಂಪನೃಪತಿಯನ್ನು ರಕ್ಷಿಸು ಸೋಮೇಶ್ವರಾ ಎಂದಾಗುತ್ತದೆ. ಪ್ರಾಯಃ ತೆಲುಗು ಯಕ್ಷಗಾನ ಕವಿಯೊಬ್ಬ ಕೆಂಪೇಗೌಡನ ಸಹಾಯಪಡೆದವನು ಈ ಮಾತನ್ನು ಹೇಳಿರಬೇಕು. ಈ ಒಂದು ವಾಕ್ಯದ ಆಧಾರದಿಂದ ಕೆಂಪೇಗೌಡನ ವಂಶಸ್ಥರು ತೆಲುಗರೆಂದು ಹೇಳುವುದು ಅವೈಜ್ಞಾನಿಕ ಅಭಿಪ್ರಾಯವಾಗುತ್ತದೆ.

ಯಲಹಂಕ ನಾಡ ಪ್ರಭುಗಳು ಕನ್ನಡ ನೆಲದವರೇ ಎಂಬುದಕ್ಕೆ ಅವರ ಮನೆದೇವತೆ ಕೆಂಪಮ್ಮ ಮತ್ತು ಅವರ ಹೆಸರುಗಳೂ ಕಾರಣ. ಇವರ ಮೂಲ ಪುರುಷನೆಂದು ಕರೆಯಲಾಗುವ ರಣಭೈರೇಗೌಡನಿಂದ ಕೊನೆಯ ಅರಸು ಮುಮ್ಮಡಿ ಕೆಂಪವೀರಪ್ಪಗೌಡನ ವರೆಗೆ ಎಲ್ಲ ಹೆಸರುಗಳೂ ಕನ್ನಡದವು. ಈ ಬಗೆಗಿನ ಮತ್ತೊಂದು ಪ್ರಬಲ ಉದಾಹರಣೆ ಎಂದರೆ ಸುಮಾರು 1250ರಿಂದ 1730ರ ವರೆಗೆ ಈ ವಂಶಸ್ಥರು ಹಾಕಿಸಿರುವ ಶಾಸನಗಳಲ್ಲಿ ಒಂದೂ ತೆಲುಗಿನಲ್ಲಿ ಇಲ್ಲದಿರುವುದು. ಬೇರೆಯವರು ರಾಜರ ಹೆಸರಿಗೆ ಹಾಕಿಸಿದ ಒಂದೆರಡನ್ನು ಬಿಟ್ಟರೆ ಸ್ವತಃ ರಾಜರೇ ಹಾಕಿಸಿದ ಶಾಸನಗಳೆಲ್ಲಾ ಕನ್ನಡದಲ್ಲೇ ಇವೆ. ಕನ್ನಡ ನಾಡಿನ ಹೃದಯವಾದ ಶ್ರೀರಂಗಪಟ್ಟಣದಿಂದ ಆಳಿದ ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಉರ್ದು ಮತ್ತು ಪರ್ಷಿಯನ್ ಭಾಷೆಯಲ್ಲಿ ಶಾಸನ ಹಾಕಿಸಿದರು ಎಂಬುದನ್ನು ಕಂಡಾಗ ಯಲಹಂಕನಾಡ ಪ್ರಭುಗಳು ತೆಲುಗರಾಗಿದ್ದರೆ ಏನಾಗುತ್ತಿತ್ತು ಎಂಬುದು ಸ್ಪಷ್ಟವಾಗುತ್ತದೆ. "ಈಗಲೂ ಮರಸುನಾಡಿನಲ್ಲಿ

---

38 The Mysore Tribes and Castes, vol IV page 227

39 ಕೆಂಪೇಗೌಡ ಜಯಪ್ರಶಸ್ತಿ, ಕರ್ಲಮಂಗಲ ಶ್ರೀಕಂಠಯ್ಯ

ರುವ ಮರಸು ಒಕ್ಕಲಿಗರ ಮನೆಮಾತು ಕನ್ನಡ ನುಡಿಯೇ ಆಗಿದೆ. ಕೆಂಪೇಗೌಡನ ಮಾತ. ಕನ್ನಡವೇ ಆಗಿತ್ತು. ಈಗಲೂ ಆ ಮನೆತನದವರ ಮನೆಮಾತು ಕನ್ನಡವೇ ಆಗಿದೆ. ಇದುವರೆಗೆ ದೊರೆತಿರುವ ಯಲಹಂಕ ವಂಶದವರ ಗಂಡು ಹೆಣ್ಣುಗಳೆಲ್ಲರ ಹೆಸರೂ ಕನ್ನಡವೇ ಆಗಿದೆ. ಇದುವರೆಗೆ ಈ ಹಿಂದೆ ಉದಾಹರಿಸಿರುವ ಯಲಹಂಕ ವಂಶದವರ ಶಾಸನಗಳಲ್ಲಿ ಇಮ್ಮಡಿ ಕೆಂಪೇಗೌಡನ ಕಾಲದಲ್ಲಿ ಬೇರೆಯವರು ದಾನಮಾಡಿದ ಎರಡು ಶಾಸನಗಳು ಮಾತ್ರ ತೆಲುಗಿನಲ್ಲಿವೆ. ಆದರೂ ಈ ತೆಲುಗು ಶಾಸನಗಳ ಲಿಪಿಯು ಕನ್ನಡದಲ್ಲಿರುತ್ತದೆ. ಕೆಂಪೇಗೌಡನ ವಂಶದ ಹಿಂದಿನ ಮುಂದಿನವರ ಎಲ್ಲ ಶಾಸನಗಳೂ ಕನ್ನಡದಲ್ಲಿರುತ್ತವೆ. ಈ ಹಲವಾರು ರೀತಿಯಿಂದ ನೋಡಿದರೂ ಇಮ್ಮಡಿ ಕೆಂಪೇಗೌಡನ ಮನೆತನದವರ ಭಾಷೆಯು ಶುದ್ಧ ಕನ್ನಡವೇ ಆಗಿತ್ತೆಂದು ಗೊತ್ತಾಗುವುದು"[40].

ಇಮ್ಮಡಿ ಕೆಂಪೇಗೌಡನ ಕಾಲದಿಂದಲೇ ಈ ವಂಶದವರು ಶೈವದತ್ತ ಹೆಚ್ಚು ಒಲವನ್ನು ತೋರಿದಂತೆ ಕಂಡುಬರುತ್ತದೆ. ಇದಕ್ಕೆ ಕಾರಣ ಮೊದಲನೆಯದು ಈ ಹಿಂದೆಯೇ ಹೇಳಿದಂತೆ ನಾಥಪಂಥದ ಮಠಗಳಲ್ಲಿ ಹೆಚ್ಚಿನ ರಜೋಗುಣ ಮತ್ತು ಭೋಗಲಾಲಸೆ. ಎರಡನೆಯದು "ಕಲ್ಯಾಣಪರಂಪರೆಯ 33ನೆಯ ಗುರುಗಳಾದ ಗಗನದಾರ್ಯರೆಂಬ ಗುರುಗಳು ಸಂಚರಿಸುತ್ತಾ ಮಾಗಡಿಗೆ ಬಂದರು. ಗೌಡನು ಆ ಗುರುವಿನಲ್ಲಿ ಭಕ್ತಿಯನ್ನು ಪ್ರಕಟಿಸಿ ಆತನಿಗೆ ಶಿಷ್ಯನಾಗಿ ಲಿಂಗಧಾರಣೆ ಮಾಡಿಸಿಕೊಂಡನೆಂದೂ ಮಾಗಡಿ ಅಕ್ಕಪಕ್ಕಗಳಲ್ಲಿ 66 ವಿರಕ್ತ ಮಠಗಳು ರಚನೆಮಾಡುವೆಂದೂ ಈ ಗೌಡನು ಈ ಗುರುವಿಗೆ ಪರಮಭಕ್ತನಾಗಿದ್ದನೆಂದೂ ನಿರಂಜನ ವಂಶ ರತ್ನಾಕರವೆಂಬ ಗ್ರಂಥದಲ್ಲಿ ಬರೆದಿದೆ.[41]" ಈ ಹೊತ್ತಿಗಾಗಲೆ ಜಾತಿಸಂಕರಗಳು ಅತಿಯಾಗಿ, ಯಲಹಂಕನಾಡ ಪ್ರಭುಗಳು ಚತುರ್ಥಗೋತ್ರದವರು, ಅವರು ರಾಜ್ಯವಾಳಬಹುದೆ ? ಎಂಬ ಧಾರ್ಮಿಕ ಒಳಗಿಚ್ಚು ಹೊಗೆಯಾಡಲಾರಂಭಿಸಿತ್ತು. ಪ್ರಾಯಃ ಈ ಕಾರಣದಿಂದಾಗಿ ಇಮ್ಮಡಿ ಕೆಂಪೇಗೌಡ ಮೇಲೆ ಹೇಳಿದ ಗಗನಾರ್ಯನಿಂದ ಗುರುಭೋಧನೆ ಪಡೆದಿರಬಹುದು. ಏಕೆಂದರೆ ಈತನ ಕೆಲವು ಶಾಸನಗಳಲ್ಲಿ "ಸದಾಶಿವಗೋತ್ರದ ಯಲಹಂಕ ನಾಡಪ್ರಭುಗಳಾದ ಕೆಂಪನಂಜೇಗೌಡರ ಪೌತ್ರರಾದ ಹಿರಿಯ ಕೆಂಪೇಗೌಡರ ಪುತ್ರರಾದ ಇಮ್ಮಡಿ ಕೆಂಪೇಗೌಡರು.[42]" ಎಂಬ ಉಲ್ಲೇಖ ದೊರೆಯುತ್ತವೆ. ಆದರೆ ಇವನು ಲಿಂಗಧಾರಣೆ ಮಾಡಿಸಿಕೊಂಡ ಬಗ್ಗೆ ಖಚಿತವಾದ ಉಲ್ಲೇಖ ದೊರೆಯುವುದಿಲ್ಲ. ಅಷ್ಟೇ ಅಲ್ಲ. ಮುಂದೆ ಇವನ ಮಗ ಮತ್ತು ಮೊಮ್ಮಗ ಒಕ್ಕಲಿಗರಾಗಿಯೇ ಉಳಿದಿದ್ದರು. ಈಗಲೂ ಈ ವಂಶಸ್ಥರು ಒಕ್ಕಲಿಗರಾಗಿಯೇ ಉಳಿದಿದ್ದಾರೆ. ಆದುದರಿಂದ ಯಲಹಂಕನಾಡ ಪ್ರಭುಗಳು ಯಾವುದೇ ಹಂತದಲ್ಲಿ ಮತಾಂತರ ಹೊಂದಿರುವ ನಿದರ್ಶನಗಳಿಲ್ಲ.

ಇಮ್ಮಡಿ ಕೆಂಪೇಗೌಡನ ನಂತರ ಯಲಹಂಕನಾಡು ಅನೇಕ ಒಳಹೊರಗಿನ ತೊಂದರೆಗಳನ್ನು ಎದುರಿಸಬೇಕಾಯಿತು. ಈ ಹೊತ್ತಿಗೆ ವಿಜಯನಗರ ಅವನತಿ ಹೊಂದಿದುದರಿಂದ ಮೊದಲಿನಿಂದಲೂ ಯಲಹಂಕನಾಡಿನ ಅಭ್ಯುದಯವನ್ನು ಸಹಿಸದ ಪಾಳೆಯಗಾರರು ಸುತ್ತ

40 ಕೆಂಪೇಗೌಡ ಜಯಪ್ರಶಸ್ತಿ ಕರ್ಲಮಂಗಲ ಶ್ರೀಕಂಠಯ್ಯ

41 ಅದೇ

42 ಅದೇ

ಲಿಂದ ತೊಂದರೆ ಕೊಡಲಾರಂಭಿಸಿದರು. ಮೊಗಲರು, ಮರಾಠರು, ಬಿಜಾಪುರದ ಸುಲ್ತಾನರು ಹೀಗೆ ಹೊರಶಕ್ತಿಗಳ ಕಣ್ಣು ಈ ಸಮೃದ್ಧ ನಾಡಿನ ಮೇಲೆ ಬಿದ್ದಿತು. ಮೈಸೂರು ಅರಸರಂತೂ ರಣಧೀರ ಕಂಠೀರವನ ಕಾಲದಿಂದಲೂ ಈ ರಾಜ್ಯದ ಮೇಲೆ ಕಣ್ಣು ಹಾಕಿದ್ದರು. ಇದರೊಂದಿಗೆ ನಾಡಿನೊಳಗೆ ಧಾರ್ಮಿಕ ಕಿಚ್ಚು ಹತ್ತಿ ಮತಾಂಧರು ಶತ್ರುಗಳಿಗೆ ಸಹಾಯಕರಾಗಿದ್ದರು. “ಶೈವರಿಗೆ ಪ್ರಾಧಾನ್ಯ ಕೊಟ್ಟುದು ಇತರ ಮತದವರನ್ನು ಅಲ್ಲಗಳೆದಂತಾಯಿತೆಂದೂ ದೊರೆಯ ಮೇಲೆ ಅಪಾದನೆ ಹೊರಿಸಿ ರಾಜ್ಯದ ಮೇಲೆ ಕಣ್ಣಿಟ್ಟು ಹೊಂಚುತ್ತಿದ್ದ ಶತ್ರುಗಳು ದಾಳಿ ಬರುವಂತೆ ಅಣಿಮಾಡಿಕೊಟ್ಟರು. ಮೈಸೂರಿನ ದೊರೆ ದೊಡ್ಡ ರಾಜ ಒಡೆಯರು ಈ ಒಳಜಗಳವನ್ನು ಅರಿತು ದಳವಾಯಿ ದೇವರಾಜಯ್ಯನನ್ನು ದೊಡ್ಡ ಸೈನ್ಯದೊಡನೆ ದುರ್ಗಕ್ಕೆ ದಾಳಿಯಿಡಲು ಕಳುಹಿಸಿದರು.[43]” ದೇಶದ್ರೋಹಿಗಳು ಶತ್ರುಗಳಿಗೆ ದುರ್ಗಗಳ ರಹಸ್ಯವನ್ನು ಅರುಹಿದರು. ಮುಮ್ಮಡಿ ಕೆಂಪವೀರಪ್ಪಗೌಡ ಸಾಹಸದಿಂದ ಹೋರಾಡಿದನಾದರೂ ಶತ್ರುಗಳಿಗೆ ಅವನ ದುರ್ಗದ ಮತ್ತು ಸೇನೆಯ ರಹಸ್ಯಗಳೆಲ್ಲಾ ತಿಳಿದುಹೋಗಿದ್ದುದರಿಂದ ಅವರ ಕೈ ಮೇಲಾಯಿತು. ಕಡೆಗೆ ಭೀಕರ ಯುದ್ಧಾನಂತರ 1728ರಲ್ಲಿ ಯಲಹಂಕನಾಡು ಶತ್ರು ವಶವಾಗಿ ಪತನವಾಯಿತು. ಮುಮ್ಮಡಿ ಕೆಂಪವೀರಪ್ಪಗೌಡ ಮತ್ತು ಅವನ ಅನುಯಾಯಿಗಳು ಧರ್ಮಲಂಡರ ಕುಯುಕ್ತಿಗೆ ಬಲಿಯಾಗಿ ಸೆರೆಯಾಳುಗಳಾಗಿ ಶ್ರೀರಂಗಪಟ್ಟಣದ ಸೆರೆಮನೆಯನ್ನು ಸೇರಿದರು.

ರಾಜನಿಲ್ಲದ ರಾಜ್ಯ ಯಜಮಾನನಿಲ್ಲದ ಮನೆ ಅನಾಯಕತ್ವದ ಆಗರವಾಗುವುದು ಶತಸ್ಸಿದ್ಧ. ಮೊದಮೊದಲಿಗೆ ಕೆಂಪವೀರಪ್ಪಗೌಡ ಸೆರೆಯಿಂದ ಹೇಗಾದರೂ ತಪ್ಪಿಸಿಕೊಂಡು ಬರಬಹುದೆಂಬ ಆಸೆಯಿಂದ ಅವರ ಹಿಂಬಾಲಕರು ಅಲ್ಲಲ್ಲಿ ತಲೆತಪ್ಪಿಸಿಕೊಂಡೋ ಮಾರುವೇಷದಿಂದಲೋ ಕೆಲವು ಕಾಲ ಕಾಯ್ದರು, ಆದರೆ ಅದರಿಂದೇನೂ ಪ್ರಯೋಜನವಾಗಲಿಲ್ಲ. ಕೆಂಪವೀರಪ್ಪಗೌಡನಿಗೆ ಯಲಹಂಕನಾಡಿನ ಉತ್ತರಾಧಿಕಾರಿಯಾಗಲು ಸಂತಾನವೇ ಇರಲಿಲ್ಲ. ಹೀಗಾಗಿ ಅಲ್ಪಸ್ವಲ್ಪ ಆಸೆಯನ್ನು ಇಟ್ಟುಕೊಂಡಿದ್ದ ನಾಡಗೌಡರು, ಪಟೇಲರು ಒಟ್ಟಿನಲ್ಲಿ ಯಲಹಂಕ ನಾಡ ಅಭಿಮಾನಿಗಳು ನಿರಾಶರಾಗುತ್ತ ನಡೆದರು. ಇತ್ತ ಸೆರೆಯಲ್ಲಿದ್ದ ಕೆಂಪವೀರಪ್ಪಗೌಡನ ಆರೋಗ್ಯ ದಿನೇದಿನೇ ಕ್ಷೀಣಿಸುತ್ತ ನಡೆದಿತ್ತು. ಅವನಿಗೆ ತಾನಲ್ಲದಿದ್ದರೂ ತನ್ನ ವಂಶದ ಯಾರಾದರೂ ಮತ್ತೆ ಯಲಹಂಕ ನಾಡನ್ನು ಸ್ವತಂತ್ರಗೊಳಿಸಿ ಆಳಬೇಕೆಂಬ ಪ್ರಬಲವಾದ ಆಸೆ.

ಕೆಂಪವೀರಪ್ಪಗೌಡನ ಸೋದರಿಯನ್ನು ಪುಲಿಕಲ್ಲುದುರ್ಗದ ಕೃಷ್ಣರಾಜಗೌಡನಿಗೆ ಕೊಟ್ಟಿದ್ದಿತು. ಈಗ ಆಕೆಯೇ ಯಲಹಂಕ ನಾಡಿನ ಉತ್ತರಾಧಿಕಾರಿ. ಕೆಂಪವೀರಪ್ಪಗೌಡನಿಗೆ ಇನ್ನು ತನ್ನ ಅಂತ್ಯಕಾಲ ಸಮೀಪಿಸಿತು ಎನ್ನಿಸಿತು. ಅಂತಹ ವೇಳೆಯಲ್ಲಿಯೂ ತನ್ನ ರಾಜಲಾಂಛನಗಳು ಶತ್ರುಗಳ ಕೈಗೆ ಸಿಗಬಾರದೆಂಬ ಛಲ ಅವನದು. ಆತ ಸೋಮನೆಂಬ ತನ್ನ ನೆಚ್ಚಿನ ಬಂಟನ ಕೈಯಲ್ಲಿ ಮುದ್ರೆಯುಂಗುರ, ಪಟ್ಟದಕತ್ತಿ ಮುಂತಾದ ಲಾಂಛನಗಳು ಮತ್ತು ಪತ್ರವೊಂದನ್ನು ತನ್ನ ತಂಗಿಯ ಗಂಡನಿಗೆ ಕಳಿಸಿದ. ಕೆಂಪವೀರಪ್ಪಗೌಡನ ಆ ಅಂತಿಮಪತ್ರ ಅವನ ನಾಡ

[43] ಕರ್ನಾಟಕ ಇತಿಹಾಸ ದರ್ಶನ, ಎಂ.ವಿ. ಕೃಷ್ಣರಾವ್, ಪುಟ 515

ಪ್ರೇಮವನ್ನು ಎತ್ತಿ ಹಿಡಿಯುತ್ತದೆ. "ಶ್ರೀಮತು ಕೆಂಪವೀರಪ್ಪ ಗವುಡರು ಹುಲಿಕಲ್ಲು ನಮ್ಮ ಕೃಷ್ಣರಾಜ ಗವುಡರಿಗೆ ಮಾಡುವ ಆಶೀರ್ವಾದ. ಅದಾಗಿ ಪಾಲ್ಗುಣ ಬಹುಳ ೧೦ರ ವರೆಗೆ ಶ್ರೀರಂಗಪಟ್ಟಣದಲ್ಲಿ ನಾವು ಕ್ಷೇಮದಲ್ಲಿ ಇದ್ದೇವೆ. ಅಲ್ಲಿ ಇರುವಂತೆ ಸಕಲರು ಸಹ ನಿಮ್ಮ ಕ್ಷೇಮಕ್ಕೆ ಬರೆಯಿಸಿ ಕಳುಹಿಸುವುದು. ತರುವಾಯ ನಮಗೆ ಸೋಮನಾಥನ ವಿಲಾಸದಿಂದ ಈ ದುರ್ದೆಸೆ ಬಂದು ಇರುವುದು ಸರಿಯಷ್ಟೆ. ಈಗ ನಮಗೆ ದೇಹಸ್ಥಿತಿ ಬಹುತರ ಉಪದ್ರವವಾಗಿದೆ. ಸೋಮನಾಥನ ಪಾದಗಳಲ್ಲಿ ಐಕ್ಯವಾಗೋ ಹಾಗೆ ತೋರುತ್ತಾ ಇದೆ. ನಿರ್ವಾಹ ತೋರಲಿಲ್ಲ. ನಮ್ಮ ವಂಶಕ್ಕೆ ಬಾಧ್ಯರು ನೀವೇ ಅಲ್ಲದೆ ಮತ್ತೆ ಬೇರೆ ಇಲ್ಲ. ಅದ್ದರಿಂದ ನಿಮ್ಮ ಬಳಿಗೆ ನಮ್ಮ ಸೋಮನ ಕೈಯಲ್ಲಿ ನಮ್ಮ ಮುಖ್ಯ ಪಟ್ಟದ ಆಯುಧ, ಶಿಬಿಸರ ಸಹ ಕೊಟ್ಟು ಕಳುಹಿಸಿ ಇದ್ದೇವೆ. ನೀವು ಬುದ್ಧಿವಂತರಾಗಿ ಕಾಲಾನುಗುಣ್ಯವಾಗಿ ಇದ್ದುಕೊಂಡು ನಮ್ಮ ದೇಹಸ್ಥಿತಿ ವಿಚಾರಿಸಿಕೊಂಡು ಆ ತರುವಾಯ ಆಗತಕ್ಕ ಕೆಲಸಗಳನ್ನು ಆಗಮಾಡುವುದು. ಕಡಿಮೆ ವಿಚಾರ, ವಾಲೆಯಲ್ಲಿ ಬರೆಯತಕ್ಕದ್ದು ಅಲ್ಲವಲ್ಲ. ಈ ಸೋಮನ ಬಾಯಿಮಾತಿನಿಂದ ಎಲ್ಲಾ ವಿಚಾರವೂ ತಿಳಿಯುತ್ತದೆ. ಈ ವಿವರ ನಿಮ್ಮ ಮನಸ್ಸಿಗೆ ತರೋಹಾಗೆ ಮಾಡಿಸುವುದು. ನಿಮಗೆ ಆಪ್ತರಾದವರನ್ನು ಇಲ್ಲಿಗೆ ಕಳುಹಿಸುವುದು-ಕೆಂಪಯ್ಯ"[44] ಮುಂದೆ ಕೃಷ್ಣ ರಾಜಗೌಡ ಏನು ಮಾಡಿದ, ಕೆಂಪವೀರಪ್ಪಗೌಡ ಏನಾದ ಎಂಬುದು ತಿಳಿಯುವುದಿಲ್ಲ.

ಯಲಹಂಕ ನಾಡು ಮರಳಿ ಸ್ವತಂತ್ರವಾಗಲು ಸಾಧ್ಯವಾಗಲಿಲ್ಲ. ಕೃಷ್ಣರಾಜಗವುಡ ಮರು ಪ್ರಯತ್ನ ಆರಂಭಿಸುವ ಹೊತ್ತಿಗೆ ನಾಡಿನ ಏಕತೆ ಛಿದ್ರಛಿದ್ರವಾಗಿತ್ತು. ಪಾಳೆಯಗಾರರು, ನಾಡಗೌಡರು ದಿಕ್ಕಾಪಾಲಾಗಿದ್ದರು. ಸೇನೆ ದಿಕ್ಕುತಪ್ಪಿತ್ತು. ಈ ಎಲ್ಲಕ್ಕಿಂತ ಮೇಲಾಗಿ ಮೈಸೂರು ಅರಸರು ಕೃಷ್ಣರಾಜಗೌಡನ ಮೇಲೆ ಬಲವಾದ ಕಾವಲಿಟ್ಟಿದ್ದರು. ಹೀಗಾಗಿ ಯಲಹಂಕನಾಡು ಮತ್ತೆ ಸ್ವತಂತ್ರವಾಗುವುದು ಕನಸಿನ ಮಾತಾಯಿತು. ಇಲ್ಲಿಗೆ 1250ರಿಂದ 1730ರವರೆಗೆ ನಾಡಿನ ಮೇಲೆ ಬೆಳಗುತ್ತಿದ್ದ ಯಲಹಂಕ ಪ್ರಭುವಂಶ ಅಸ್ತಂಗತವಾಯಿತು.

---

44 ಮಾಗಡಿ ಕೆಂಪೇಗೌಡ, ನರಸಿಂಹಯ್ಯ

ಕೆಂಪೇಗೌಡ—ಜಯ ಪ್ರಶಸ್ತಿ

ಧರೆಯೊಳಿಲಹಂಕನಾಡ ವರಶಾಸನೋದ್ಧಾರ
ವರಕಕೋದ್ಗಿರಿ ಗಂಗೇಶನ ಭಕ್ತಮಂದಾರ
ಹರುಷದಲಿ ಹಲಸೂರವಾಸ ಸೋಮೇಶ್ವರನ
ಕರುಣದಲಿ ವರ ಬೆಂಗಳೂರ

ಸ್ಥಳದಲ್ಲಿ ಮೆರೆವ ದೊಡ್ಡಬಸವೇಶ್ವರನ ದಯದಿ
ಗುರುನಂಜೇಶ್ವರನ ಕೃಪೆಯನು ನೆರೆಪಡೆದ
ಹಿರಿಯ ಕೆಂಪ ಭೂಪರನ ಚೆನ್ನಾಂಬೆಯ ಕುಮಾರ
ನೀ ಬಾಳು ಶುಭಕರದಿ ರವಿಚಂದ್ರರುಳ್ಳನಕ
ಕೆಂಪ ಧರಣೀಪತಿ ನೀ ವಿಭೀಷಣ ಪಟ್ಟವಾಳೂ ॥

—ಗುರುನಂಜೇಶಣ್ಣ

ಎಚ್. ವಿ. ನರಸಿಂಹಮೂರ್ತಿ

ವೇದಗಳ ಸಂದೇಶ

'ವಿದ-ಜ್ಞಾನೇ' ಎಂಬುದರಿಂದ ಬಂದಿದೆ, ವೇದವೆಂಬ ಶಬ್ದ. ಈ ಪದಕ್ಕೆ 'ತಿಳಿವು' ಅಥವಾ 'ಜ್ಞಾನ' ಎಂದರ್ಥ. ಇದಕ್ಕೆ ನಿಷ್ಕೃಷ್ಟವಾದ ಪರಿಭಾಷೆಯನ್ನು ಕೊಡುವುದು ಕಷ್ಟಸಾಧ್ಯವಾದ ಕೆಲಸವೆಂದು ಸಾಯಣಾಚಾರ್ಯರು ತಮ್ಮ ವೇದಭಾಷ್ಯ ಭೂಮಿಕೆಯಲ್ಲಿ ಹೇಳಿ, ಕೊನೆಗೆ 'ಮಂತ್ರಬ್ರಾಹ್ಮಣಯೋರ್ವೇದ ನಾಮಧೇಯಮ್' (ಮಂತ್ರಬ್ರಾಹ್ಮಣಗಳ ಸಮುದಾಯವೇ ವೇದ) ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಮಾಧವಾಚಾರ್ಯರು ತಮ್ಮ 'ವೇದಾರ್ಥಪ್ರಕಾಶ'ದಲ್ಲಿ 'ಇಷ್ಟಪ್ರಾಪ್ತ್ಯನಿಷ್ಟಪರಿಹಾರಯೋಃ ಅಲೌಕಿಕಮುಪಾಯಂ ಯೋ ಗ್ರಂಥಃ ವೇದಯತಿ ಸ ವೇದಃ' (ಇಷ್ಟ ಪ್ರಾಪ್ತಿ ಮತ್ತು ಅನಿಷ್ಟ ಪರಿಹಾರಗಳ ಅಲೌಕಿಕವಾದ ಉಪಾಯವನ್ನು ಸೂಚಿಸುವ ಗ್ರಂಥ ವೇದ) ಎನ್ನುತ್ತಾರೆ. ಭಟ್ಟಭಾಸ್ಕರರು 'ವಿದ್ಯತೇ ಲಭ್ಯತೇ ಅನೇನ ಇತಿ ವೇದಃ' ಎಂದು ವ್ಯಾಖ್ಯಾನಿಸುತ್ತಾರೆ. ಅಂತೆಯೇ ವೇದ ಶಬ್ದವನ್ನು ಬೇರೆ ಬೇರೆ ವಿದ್ವಾಂಸರು ಬೇರೆ ಬೇರೆ ರೀತಿಯಲ್ಲಿ ವ್ಯಾಖ್ಯಾನಿಸಿದರೂ 'ಜ್ಞಾನ ನಿಧಿ' ಎಂಬ ಇದರ ಮೂಲಾರ್ಥವನ್ನು ಎಲ್ಲರೂ ಒಪ್ಪಿಕೊಂಡಂತೆ ಕಾಣುತ್ತದೆ.

ವೇದಗಳನ್ನು ಶ್ರುತಿ ಎಂದು ಕರೆಯುತ್ತಾರೆ. ವೇದಗಳನ್ನು ನಿರ್ದುಷ್ಟವಾಗಿ ತದ್ವತ್ತಾಗಿ ಉಳಿಸಿಕೊಂಡು ಬರಲು ಬಳಸುತ್ತಿದ್ದ ಮಾರ್ಗವೇ ಅದಕ್ಕೆ ಶ್ರುತಿ ಎಂಬ ಹೆಸರು ಬರಲು ಕಾರಣವಾಗಿರಬಹುದು. ಹಿಂದಿನ ಕಾಲದಲ್ಲಿ ವೇದಗಳನ್ನು ಗುರು ಶಿಷ್ಯನಿಗೆ ಬಾಯಿಪಾಠ ಮಾಡಿಸುತ್ತಿದ್ದ. ಹೀಗೆ ಈ ಪವಿತ್ರವಾದ ಪರಂಪರಾಗತವಾದ ಜ್ಞಾನಧಾರೆ ಶಿಷ್ಯ-ಪ್ರಶಿಷ್ಯರ ಪರಂಪರೆಯಲ್ಲಿ ಇಂದಿನವರೆಗೂ ಅವ್ಯಾಹತವಾಗಿ ನಡೆದು ಬಂದಿದೆ. ವೇದಗಳನ್ನು ಬರೆದಿಟ್ಟರೆ ಇತರರ ಕೈಗೆ ಸಿಕ್ಕಿ ಅಪವಿತ್ರವಾಗಬಹುದೆಂಬ ಭಯವೂ ಅವರಿಗೆ ಇದ್ದಿರಬಹುದು. ವೇದಗಳನ್ನು ಹೀಗೆ ಸಹಸ್ರಾರು ವರ್ಷಗಳ ಕಾಲ ನಿರ್ದುಷ್ಟವಾಗಿ, ನಿಷ್ಕೃಷ್ಟವಾಗಿ, ಚಾಚೂ ಬದಲಾವಣೆ ಆಗದಂತೆ ರಕ್ಷಿಸಿಟ್ಟಿರುವುದನ್ನು ಕಂಡು ವಿದೇಶೀಯರು ಸೋಜಿಗಪಡುತ್ತಾರೆ. ವೇದಗಳನ್ನು ಸರಿಯಾಗಿ ಅರಿಯಲು, ಪಠಿಸಲು ಮತ್ತು ಅವುಗಳನ್ನು ಸರಿಯಾಗಿ ಉಳಿಸಿಕೊಂಡು ಬರಲು ಅನುಕೂಲಿಸುವ ಗ್ರಂಥಗಳೆಂದರೆ ಷಡಂಗಗಳೆನ್ನಲಾದ ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ ಮತ್ತು ಕಲ್ಪ. ವೇದವನ್ನು 'ನಿಗಮ'ವೆಂದೂ 'ಆಮ್ನಾಯ'ವೆಂದೂ ಕರೆಯುತ್ತಾರೆ.

ವೇದಗಳಲ್ಲಿ ಮುಖ್ಯವಾಗಿ ನಮಗೆ ಕಾಣಿಸುವುದು ನಾಲ್ಕು ಅಂಶಗಳು : ಸ್ತೋತ್ರ, ಪೂಜಾವಿಧಾನ, ಗಾಯನ ಮತ್ತು ಮಾಟ ಮಂತ್ರಗಳು. ಇವುಗಳೊಂದೊಂದೂ ಒಂದೊಂದು ವೇದದ ಮುಖ್ಯ ವಿಷಯವಾದ್ದರಿಂದ ವೇದಗಳು ನಾಲ್ಕೆಂದು ಹೇಳುವುದು ರೂಢಿಯಾಗಿದೆ

ಮೊದಲನೆಯದಾಗಿ ದೇವತೆಗಳನ್ನು ಯಜ್ಞದಲ್ಲಿ ಸ್ವಾಗತಿಸಿ, ಸ್ತೋತ್ರ ಮಾಡಿ ನಾವು ಸಲ್ಲಿಸುವ ಹವಿಸ್ಸನ್ನು ಸ್ವೀಕರಿಸುವಂತೆ ಪ್ರಾರ್ಥಿಸಬೇಕು. ಋಗ್ವೇದ ಇಂತಹ ಸ್ತೋತ್ರಗಳ, ಪ್ರಾರ್ಥನೆಗಳ ಸಮುದಾಯ. ದೇವತೆಗಳನ್ನು ಆಹ್ವಾನಿಸಿ ಕೇವಲ ಸ್ತುತಿಸಿದರೆ ಸಾಲದು. ಮಾಡುವ ಯಜ್ಞವನ್ನು ಕ್ರಮವರಿತು ಮಾಡಬೇಕು. ಯಜ್ಞದಲ್ಲಿ ಉಪಯೋಗಿಸುವ ಅಗ್ನಿ, ಹವಿಸ್ಸು, ಇತರ ಉಪಕರಣಗಳು, ಋತ್ವಿಜರ ಪಾಲಿನ ಕೆಲಸಗಳು ಎಲ್ಲಕ್ಕೂ ಒಂದು ವಿಧಿ ಇದೆ, ವಿಧಾನವಿದೆ. ಈ ಯಜ್ಞದ ವಿಧಾನವನ್ನು ತಿಳಿಸುವ ಗ್ರಂಥವೇ 'ಯಜುರ್ವೇದ.' ದೇವತೆಗಳಿಗೆ ಹವಿಸ್ಸನ್ನು ಅರ್ಪಿಸಿದ ಮೇಲೆ ಅವರ ಮನೋರಂಜನೆಗಾಗಿ ಹಾಡುವ ಪದ್ಧತಿ ಬೆಳೆದುಬಂದಿತು. ಈ ಹಾಡುಗಳನ್ನೊಳಗೊಂಡಿರುವ ಗ್ರಂಥಕ್ಕೆ 'ಸಾಮವೇದ'ವೆಂದು ಹೆಸರು. ಕೆಲವೊಮ್ಮೆ ಯಜ್ಞಯಾಗಾದಿಗಳಿಗೆ ವಿಘ್ನಗಳುಂಟಾಗುತ್ತಿದ್ದುವು. ಮುಖ್ಯವಾಗಿ ಯಜ್ಞವನ್ನು ತಿರಸ್ಕರಿಸುವ 'ಅನಾರ್ಯ'ರಿಂದ, ಕೆಲವೊಮ್ಮೆ ಪ್ರೇತ ಪಿಶಾಚಾದಿಗಳಿಂದ. ಇವುಗಳ ನಿವಾರಣೆಗಾಗಿ ಹಲಕೆಲವು ಮಾಟ ಮಂತ್ರಗಳನ್ನು ನಡೆಸಬೇಕಾಯಿತು. ಇಂತಹ ಮಾಟಮಂತ್ರಗಳ ಹಾಗೂ ಇಂದ್ರಜಾಲಾದಿ ವಿದ್ಯೆಗಳ ಆಕರವೇ 'ಅಥರ್ವವೇದ' ಎನ್ನಲಾಗಿದೆ.

ಆದರೆ ಈ ವೇದಗಳು ಕೇವಲ ಯಾಜ್ಞಿಕ ರಚನೆಗಳಲ್ಲ. ಪ್ರೊ. ಮ್ಯಾಕ್ಸ್‌ಮ್ಯುಲರ್ ಅವರು, 'ಯಾರಿಗೆ ತನ್ನ, ತನ್ನ ಪೂರ್ವಜರ, ತನ್ನ ಚರಿತ್ರೆಯ ಅಥವಾ ತನ್ನ ಬೌದ್ಧಿಕ ವಿಕಾಸದ ಬಗ್ಗೆ ಗಮನವಿದೆಯೋ, ಅವನಿಗೆ ವೈದಿಕ ಸಾಹಿತ್ಯದ ಅಧ್ಯಯನ ಅನಿವಾರ್ಯ' ಎಂದು ಹೇಳುತ್ತಾರೆ. ವೇದಗಳು ವಿಶ್ವದ ಮೊಟ್ಟಮೊದಲ ಐತಿಹಾಸಿಕ ಹಾಗೂ ಸಾಹಿತ್ಯಕ ದಾಖಲೆಗಳು. ಯಜ್ಞದ ವಿಚಾರ ಇವುಗಳ ಮುಖ್ಯ ವಸ್ತುವಾದರೂ ಇವುಗಳಲ್ಲಿನ ವಿಷಯ ವಿಶ್ವತೋಮುಖವಾದುದು. ವೇದಗಳೇ ಹಿಂದೂಧರ್ಮದ ಉಗಮಸ್ಥಾನ. ಭಾರತೀಯರ ಆಧ್ಯಾತ್ಮಿಕ ದೃಷ್ಟಿಯ ಮೂಲ ವೇದಗಳಲ್ಲಿದೆ. ನಮ್ಮ ಆಚಾರ್ಯರು ಹಾಗೂ ಮತಪ್ರವರ್ತಕರು ವೇದವಾಕ್ಯಗಳಿಂದಲೇ ಸ್ಫೂರ್ತಿ ಪಡೆದು ತಮ್ಮ ತಮ್ಮ ಸಿದ್ಧಾಂತಗಳನ್ನು ಸ್ಥಾಪಿಸಿದರು. ಮಾನವಸಂಸ್ಕೃತಿಯ ಬೆಳವಣಿಗೆಯ ಇತಿಹಾಸವೂ ವೇದಗಳಲ್ಲಿ ಅಡಕವಾಗಿದೆ. ಪ್ರಾಚೀನರ ನಾಗರಿಕತೆ, ಸಂಸ್ಕೃತಿ, ಮನೋಭಾವಗಳು , ಜೀವನದ ಆದರ್ಶಗಳು ಮೊದಲಾದವನ್ನು ಪರಿಚಯಿಸುವ ವೇದಗಳು ಐತಿಹಾಸಿಕ ದೃಷ್ಟಿಯಿಂದಲೂ ಮಹತ್ವಪೂರ್ಣವಾದವು. ಅನುಪಮವೂ ನವನವೋನ್ಮೇಷಶಾಲಿನಿಯೂ ಆದ ನಮ್ಮ ಹಿರಿಯರ ಕಾವ್ಯಪ್ರತಿಭೆ ಕೆಲವೆಡೆ ಗಿರಿ-ನಿರ್ಝರಗಳ ಸ್ವಚ್ಛಜಲಪ್ರವಾಹದಂತೆ ಹರಿದು ಬಂದಿರುವುದರಿಂದ, ವೇದಗಳಲ್ಲಿ ಕಾವ್ಯತತ್ತ್ವವನ್ನೂ ನಾವು ಕಾಣುವಂತಾಗಿದೆ. ಅಂತೆಯೇ ತೌಲನಿಕ ಭಾಷಾಶಾಸ್ತ್ರದ ಅಧ್ಯಯನ ದೃಷ್ಟಿಯಿಂದಲೂ ವೇದಗಳು ಗಣನೀಯವಾದ ಪಾತ್ರ ವಹಿಸುತ್ತವೆ.

ಇವೆಲ್ಲದರ ಜೊತೆಗೆ ನಮ್ಮ ಜೀವನದ ಆದರ್ಶವನ್ನು ರೂಪಿಸಲು ಸಮರ್ಥವಾದ ಸಂದೇಶವಂತಿರುವ ಕೆಲವು ಮಂತ್ರಗಳನ್ನೂ ನಾವು ವೇದಗಳಲ್ಲಿ ಕಾಣಬಹುದು. ಇವು ಅಲ್ಲೊಂದು ಇಲ್ಲೊಂದು ಬಂದರೂ ಪ್ರತಿಯೊಂದೂ ಒಂದೊಂದು ದಾರಿದೀವಿಗೆಯಂತಿದ್ದು ನಮ್ಮ ಜೀವನಕ್ಕೆ ಬೆಳಕು ನೀಡಲು ಸಮರ್ಥವಾಗಿವೆ. ಈ ನರ ಜನ್ಮವನ್ನು ನಮ್ಮ ಸುತ್ತಮುತ್ತಲಿನವರಿಗೂ ಒಪ್ಪುವಂತೆ ಹಸನುಗೊಳಿಸಿ, ಹದಗೊಳಿಸಿ, ಸುಸಂಸ್ಕೃತವಾದ ಜೀವನವನ್ನು ಸಾಗಿಸಲು ಇವು ಸಹಾಯಕವಾಗಿವೆ. ಇಂತಹ ಸಂದೇಶಗಳು ವೇದಗಳಲ್ಲಿ ಸಾಕಷ್ಟಿವೆ.

ಅವುಗಳಲ್ಲಿ ಅತಿಮುಖ್ಯವಾದ ಕೆಲವನ್ನು ಪರಿಚಯಿಸಿಕೊಡುವುದು ಈ ಲೇಖನದ ಉದ್ದೇಶ.

ಅಂತರಂಗ ಮತ್ತು ಬಹಿರಂಗಶುದ್ಧಿ : ವೇದಗಳು ನಮ್ಮನ್ನು ಸಂಬೋಧಿಸುವುದು ಸ್ಫೂರ್ತಿದಾಯಕವಾದ, ಭರವಸೆ ಮೂಡಿಸಬಹುದಾದ "ಅಮೃತಸ್ಯ ಪುತ್ರಾಃ" ಎಂಬ ವಿಶೇಷಣದಿಂದ. ನಾವೆಲ್ಲರೂ ಅಜರಾಮರರು, ಅಮೃತಪುತ್ರರು. "ಆರ್ಯಾಃ ಜ್ಯೋತಿರಗ್ರಾಃ" ಎಂಬ ವೈದಿಕಸೂಕ್ತಿಯಂತೆ ಜ್ಞಾನಜ್ಯೋತಿಯನ್ನೇ ಮುಂದಿಟ್ಟುಕೊಂಡು ನಡೆಯುವ ಆರ್ಯರು ; ಸತ್ಯವನ್ನೇ ಸತ್ತ್ವವನ್ನಾಗಿ ಹೊಂದಿರುವ ಮೇಧಾವಿಗಳು ; ಅಣೋರಣೀಯವೂ ಮಹತೋಮಹೀಯವೂ ಆದ ಆತ್ಮವಂತರು. ಅಕ್ರತುಗಳಾಗಿ, ವೀತಶೋಕರಾಗಿ, ಆತ್ಮಾನುಸಂಧಾನವನ್ನಷ್ಟೇ ಅಲ್ಲ, ಆತ್ಮದರ್ಶನವನ್ನೂ ಮಾಡಲು ಸಮರ್ಥವಾದ, ಅಜೇಯವಾದ ಶಕ್ತಿಯುಳ್ಳವರು. ಆದರೆ ಈ ಅನನ್ಯ ವಿಲಕ್ಷಣವಾದ ಶಕ್ತಿಯನ್ನು ಕಾಪಾಡಿಕೊಳ್ಳಲು ನಮ್ಮ ಅಂತರಂಗ-ಬಹಿರಂಗಗಳೆರಡೂ ಪರಿಶುದ್ಧವಾಗಿರಬೇಕು ; ನಾವು ಪವಿತ್ರವಾದ ಸಾತ್ತ್ವಿಕ ಜೀವನವನ್ನು ನಡೆಸುತ್ತಿರಬೇಕು. ಅದನ್ನೇ ಯಜುರ್ವೇದದ ಒಂದು ಮಂತ್ರ :

ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ
ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।
ಸ್ಥಿರೈರಂಗೈಸ್ತುಷ್ಟುವಾಗ್ಂ ಸಸ್ತನೂಭಿಃ
ವ್ಯಶೇಮ ದೇವಹಿತಂ ಯದಾಯುಃ ॥ [ಯ. ವೇ. 25-11]

"ನಾವು ಕಿವಿಗಳಿಂದ ಯಾವಾಗಲೂ ಮಂಗಳಕರವಾದ ವಿಚಾರಗಳನ್ನೇ ಕೇಳೋಣ ; ಕಣ್ಣುಗಳಿಂದ ಮಂಗಲವಾಹಕವಾದ ದೃಶ್ಯಗಳನ್ನೇ ಕಾಣೋಣ ; ನಾವು ದೃಢಕಾಯರಾಗಿ ಸತ್ಕಾರ್ಯಗಳನ್ನು ಮಾಡುತ್ತ ದೈವದತ್ತವಾದ ಆಯುಸ್ಸನ್ನು ವ್ಯಯಿಸೋಣ," ಎಂದು ಇದು ಕರೆ ನೀಡುತ್ತದೆ. ಸದ್ವಿಚಾರಗಳ ಶ್ರವಣ ಕಿವಿಗೆ ಸಾರ್ಥಕ್ಯವನ್ನುಂಟುಮಾಡುತ್ತದೆ ; ಕಣ್ಣಿನ ಸಾರ್ಥಕ್ಯ ಮಂಗಳಮಯವಾದ ನೋಟಗಳನ್ನು ನೋಡುವುದರಲ್ಲಿ, ಹೀಗೆ ನಮ್ಮ ದೃಕ್‌ಶ್ರವಣೇಂದ್ರಿಯಗಳು ಸಾರ್ಥಕ್ಯವನ್ನು ಪಡೆದಾಗ ನಮ್ಮ ಜೀವನವೂ ಮಂಗಲಮಯವಾಗುತ್ತದೆ ; ದೈವದತ್ತವಾದ ಆಯುಸ್ಸು ಸದ್ವಿನಿಯೋಗವಾಗುತ್ತದೆ.

ಭಕ್ತನೊಬ್ಬ ವರುಣನಿಗೆ ಪ್ರಾರ್ಥನೆ ಸಲ್ಲಿಸುವಾಗ ಇದೇ ವಿಚಾರವನ್ನು ಮತ್ತಷ್ಟು ಸ್ಪಷ್ಟಪಡಿಸುತ್ತಾನೆ. ಅಂತರಂಗದ ಪಾಪಕೂಪವನ್ನು ಸಂಪೂರ್ಣವಾಗಿ ಭೇದಿಸೆಂದು ಋತದ ಪ್ರತಿಷ್ಠಾಪಕನಾದ ಆತನನ್ನು ಮೊರೆಹೊಗುತ್ತಾನೆ :

ಇದಮಾಪಃ ಪ್ರವಹತ ಯತ್ಕಿಂಚದುರಿತಂ ಮಯಿ ।
ಯದ್ವಾಹಮಭಿದುದ್ರೋಹ ಯದ್ವಾಶೇಪ ಉತಾನೃತಮ್ ॥
[ಋ. ವೇ. 1-23-22]

"ಜಲದೇವ ! ನನ್ನಂತರಂಗದಲ್ಲಿ ತುಂಬಿರುವ ಪಾಪವನ್ನು ಕೊಚ್ಚಿಕೊಂಡುಹೋಗು. ನನ್ನ ಒಳಗಡೆ ತುಂಬಿರುವ ದ್ರೋಹಭಾವವನ್ನು, ಅಪಶಬ್ದವನ್ನು, ಬಂದು ಸೇರಿರುವ ಸುಳ್ಳು ಆಚರಣೆಯನ್ನು ಕೂಡ ತೊಳೆದುಹಾಕು." ಪ್ರಾರ್ಥನಾರೂಪವಾದ ಈ ಮಂತ್ರದಲ್ಲಿ ಪ್ರಾಮಾ

ಣಿಕತೆ ಇದೆ ; ಆರ್ತನಾದವಿದೆ. ತಾನು ಪರಿಶುದ್ಧನಾಗಿ "ದೇವಾನಾಂಪ್ರಿಯ"ನಾಗಬೇಕೆಂಬ ಹಂಬಲವಿದೆ.

ಪ್ರಿಯನಾಗಿ ಮಾಡೆನ್ನ : ಮನುಷ್ಯ ಬಾಳುವಷ್ಟು ದಿನವೂ ಸ್ನೇಹಸೌಜನ್ಯಗಳಿಂದ, ಪ್ರೀತಿ ವಿಶ್ವಾಸಗಳಿಂದ ಬಾಳಬೇಕು. ತನ್ನ ಸದ್ವರ್ತನೆಯಿಂದ ಎಲ್ಲರ ಹೃದಯದಲ್ಲೂ ಸ್ಥಾನ ಪಡೆಯಬೇಕು ; ಎಲ್ಲರಿಗೂ ಪ್ರಿಯನಾಗಬೇಕು; ಎಲ್ಲರಿಂದಲೂ ಅಭಿನಂದನಾರ್ಹನಾಗಬೇಕು. ಆಗಲೇ ಆತನ ಜೀವಿತ ಸಾರ್ಥಕ. ವೇದಗಳ ಮಂತ್ರದ್ರಷ್ಟಾರರು ಈ ವಿಷಯವನ್ನರಿತಿದ್ದರು. ತಮ್ಮ ಪ್ರಿಯ ದೇವತೆಗಳೊಡನೆ ತಮ್ಮನ್ನು ಎಲ್ಲರಿಗೂ ಪ್ರಿಯರನ್ನಾಗಿ ಮಾಡಿರೆಂದು ಮತ್ತೆ ಮತ್ತೆ ಪ್ರಾರ್ಥಿಸುತ್ತಿದ್ದರು.

ಸುನೋ ಭೂಮೇ ಪ್ರರೋಚಯ ಹಿರಣ್ಯಸ್ಯೇವ
ಸಂದೃಶಿ ಮಾನೋ ದ್ವಿಕ್ಷತ ಕಶ್ಚನ॥ [ಯ. ವೇ.]
ಬಂಗಾರದೊಲು ಎನ್ನ ಪ್ರಿಯನಾಗಿ ಮಾಡು
ಯಾರು ದ್ವೇಷಿಸದಂತೆ ಮಾಡೆನ್ನ ಪೃಥ್ವಿ॥

ಹೀಗೆ ಮಾನವನ ಬಾಳು ಪುಟವಿಟ್ಟ ಅಪರಂಜಿಯಂತೆ ಸ್ವಚ್ಛವಾಗಬೇಕು. ದ್ವೇಷಾಸೂಯಾದಿ ಕಶ್ಮಲಗಳು ಸಂಪೂರ್ಣವಾಗಿ ಕರಗಬೇಕು. ಅಹಂಕಾರ, ಮಮಕಾರಗಳ ನಿರಸನವಾಗಬೇಕು. ಆಗಲೇ ಆತ ಎಲ್ಲರಿಂದಲೂ ಬಯಸಲ್ಪಡುತ್ತಾನೆ, ಎಲ್ಲರಿಗೂ ಪ್ರಿಯನಾಗುತ್ತಾನೆ. ಬದುಕಿನ ಸಾರ್ಥಕ್ಯದ ಅರಿವಾಗಿ ಕೃತಕೃತ್ಯನಾಗುತ್ತಾನೆ.

ಶಿವಸಂಕಲ್ಪಮಸ್ತು : ಮನುಷ್ಯ ಮನನಶೀಲ. ಅವನ ಮನಸ್ಸು ನಿರ್ಮಲವಾದಾಗ ಅವನ ಎಲ್ಲ ಯೋಚನೆಗಳೂ ಕಾರ್ಯಗಳೂ ಪರಿಶುದ್ಧವಾಗುತ್ತವೆ. ಆದರೆ ಮನಸ್ಸನ್ನು ಮಲಿನಗೊಳಿಸುವ ಸಾಧನಗಳು ಹತ್ತಾರು. ಹಲವಾರು. ಕಲುಷಿತವಾದ ಮನಸ್ಸು ಕಡಿವಾಣ ಕಿತ್ತ ಕುದುರೆಯಂತೆ ಮನುಷ್ಯನನ್ನು ಪತನದತ್ತ ಒಯ್ಯುತ್ತದೆ. ಆದ್ದರಿಂದ ಮನಸ್ಸನ್ನು ಪರಿಶುದ್ಧವಾಗಿಡಲು, ಕಲ್ಯಾಣಮಯವಾದ ವಿಚಾರಗಳಿಂದ ಪರಿಪೂರ್ಣವಾಗಿಡಲು ನಾವು ಹೆಚ್ಚಿನ ಗಮನ ಕೊಡಬೇಕು. ವೇದಗಳ ದ್ರಷ್ಟಾರರು ಮನಸ್ಸಿನ ಪರಿಶುದ್ಧತೆಯನ್ನು ಮತ್ತೆ ಮತ್ತೆ ಒತ್ತಿ ಹೇಳಿದ್ದಾರೆ. ತಾವು ಭಾವಿಸಿದ ದೇವತಾಶಕ್ತಿಯೊಡನೆ ಈ ಬಗ್ಗೆ ಮತ್ತೆ ಮತ್ತೆ ಪ್ರಾರ್ಥನೆ ಸಲ್ಲಿಸುತ್ತಾರೆ :

ಸುಷಾರಥಿಶ್ವಾನಿವಯನ್ಮನುಷ್ಯಾನ್ನೇನೀಯತೇಽಭೀಶುಭಿರ್ವಾಜಿನ ಇವ ।
ಹೃತ್ಪ್ರತಿಷ್ಠಂ ಯದಜಿರಂಜವಿಷ್ಠಂ ತನ್ಮೇಮನಃ ಶಿವಸಂಕಲ್ಪಮಸ್ತು ॥
(ಯ. ವೇ. 34–6)

"ಕುಶಲ ಸಾರಥಿ ವೇಗಶಾಲೀ ಕುದುರೆಗಳನ್ನು ಕಡಿವಾಣದಿಂದ ಹೇಗೆ ನಡೆಸುತ್ತಾನೋ ಹಾಗೆ ಮನುಷ್ಯನನ್ನು ಕೆಲಸಕ್ಕೆ ತೊಡಗಿಸುವ ಮನಸ್ಸು ಕೂಡ ಮನುಷ್ಯಾದಿ ಪ್ರಾಣಿಗಳನ್ನು ನಡೆಸುತ್ತದೆ. ಮುಪ್ಪಿಲ್ಲದೆ, ಅತ್ಯಂತ ವೇಗಶಾಲಿಯಾದ ಅದು ಹೃದಯದಲ್ಲಿದೆ. ನನ್ನ ಆ ಮನಸ್ಸು ಸದಾ ಕಲ್ಯಾಣಮಯ ವಿಚಾರಗಳಿಂದ ತುಂಬಲಿ."

ಮನಸ್ಸು ಕಲ್ಯಾಣಮಯ ವಿಚಾರಗಳಿಂದ ತುಂಬಬೇಕು; ಆ ಶ್ರೇಷ್ಠ ವಿಚಾರಧಾರೆಗಳನ್ನು ಕಾರ್ಯರೂಪಕ್ಕೆ ತರಬೇಕು. ಆದ್ದರಿಂದ ಮನಸ್ಸು ಸದಾ ಸೃಜನಶೀಲವಾಗಬೇಕು.

ಅದಕ್ಕೆ ತಕ್ಕ ನೈಪುಣ್ಯವನ್ನು ಅದು ಪಡೆಯಬೇಕು. ಋಗ್ವೇದದ ಋಷಿಯೊಬ್ಬ ಈ ಬಗ್ಗೆ ತನ್ನ ಇಷ್ಟ ದೇವತೆಯಾದ ಸೋಮನೊಡನೆ ಅತಿ ದೈನ್ಯದಿಂದ ಪ್ರಾರ್ಥಿಸುತ್ತಾನೆ.

ಭದ್ರಂ ನೋ ಅಪಿವಾತಯ ಮನೋದಕ್ಷಮುತಕ್ರತುಮ್

(ಋ. ವೇ. 10.25.1)

"ಸೋಮ ! ಶ್ರೇಷ್ಠ ಕರ್ಮಗಳಲ್ಲಿ ನಮ್ಮ ಮನಸ್ಸು ನೈಪುಣ್ಯ ಪಡೆವಂತೆಮಾಡು!"

ಹೀಗೆ, ಮನಸ್ಸನ್ನು ಮಲಿನಗೊಳಿಸಬಾರದು ; ಪರಿಶುದ್ಧವಾಗಿಡಬೇಕು. ಅದು ಸದಾ ಜಾಗೃತವಾಗಿರಬೇಕು ; ಕ್ರಿಯಾಶೀಲವಾಗಿರಬೇಕು.

ಸತ್ಯಂ ವದ: ವ್ಯಕ್ತಿತ್ವದ ವಿಕಾಸಕ್ಕೆ ಹಾಗೂ ಹೃದಯದ ಸ್ವಚ್ಛತೆಗೆ ಸತ್ಯವನ್ನು ನುಡಿಯುವುದು ಅತ್ಯಾವಶ್ಯಕ. ವೇದೋಪನಿಷತ್ತುಗಳು ಸಾರುವುದು ಇದನ್ನೇ.

ಸತ್ಯ ಅಸತ್ಯಗಳೆರಡಕ್ಕೂ ಪರಸ್ಪರ ಸ್ಪರ್ಧೆಯಂತೆ, ಆದರೆ ವಿಚಾರಶೀಲರಾದ ಮಾನವರು ಸತ್ಯವನ್ನಾಶ್ರಯಿಸಬೇಕೇ ಹೊರತು ಅಸತ್ಯವನ್ನಲ್ಲ.

ಸುವಿಜ್ಞಾನಂ ಚಿಕಿತುಷೇಜನಾಯ ಸಚ್ಚಾಸಚ್ಚವಚಸೀ ಪಸ್ಪೃಧಾತೇ ।
ತಯೋರ್ಯತ್ಸತ್ಯಂ ಯತರದೃಜೀಯಸ್ತದಿತ್ಸೋಮೋಽವತಿ ಹನ್ತ್ಯಾಸತ್ ॥

[ಋ. ವೇ. 7-104-12]

"ಸತ್ಯವಚನಕ್ಕೂ ಅಸತ್ಯವಚನಕ್ಕೂ ಪರಸ್ಪರ ಸ್ಪರ್ಧೆ. ಮೇಧಾವಿಗಳು ಇದನ್ನು ಬಲ್ಲರು. ಸೋಮ ಸತ್ಯವನ್ನು ಪಾಲಿಸುತ್ತಾನೆ. ಅಸತ್ಯವನ್ನು ನಾಶಮಾಡುತ್ತಾನೆ."

ಮಾಗೃಧಃ ಕಸ್ಯಸ್ವಿದ್ಧನಮ್ : ಮಾನವನನ್ನು ದಾನವನನ್ನಾಗಿ ಮಾಡಿ ಅವನ ನೈತಿಕ ಬಲವನ್ನು ಕುಗ್ಗಿಸುವುದು ಲೋಭ. ಆದ್ದರಿಂದಲೇ ಇದನ್ನು ಅರಿಷಡ್ವರ್ಗಗಳಲ್ಲಿ ಒಂದೆಂದು ಪರಿಗಣಿಸಿದ್ದಾರೆ. ಸಕಲಪಾಪಗಳಿಗೂ ಇದೇ ಮೂಲ. ನಮಗರಿವಿಲ್ಲದಂತೆಯೇ ಇದು ನಮ್ಮ ಜೀವನವನ್ನು ಆಕ್ರಮಿಸುತ್ತದೆ; ಬಾಳನ್ನು ಬರಡಾಗಿಸುತ್ತದೆ. ಇದರ ಕಪಿಮುಷ್ಟಿಯಿಂದ ಎಷ್ಟು ದೂರವಿದ್ದರೆ ಅಷ್ಟು ಒಳ್ಳೆಯದು: ವೈದಿಕ ಋಷಿಗಳು ಹೆಜ್ಜೆಹೆಜ್ಜೆಗೂ ಇದರ ಅನರ್ಥವನ್ನು ಬಣ್ಣಿಸಿದ್ದಾರೆ.

ಆಸೆಗೆ ತುದಿ ಬುಡವಿಲ್ಲ, ಇತಿ ಮಿತಿ ಇಲ್ಲ. ಎಷ್ಟು ಗಳಿಸಿದರೂ ಸಾಲದು. ನೂರಿದ್ದವನಿಗೆ ಸಾವಿರ ಗಳಿಸುವ ಆಸೆ ; ಸಾವಿರವಿದ್ದವನಿಗೆ ಲಕ್ಷಾಧೀಶನಾಗಬೇಕೆಂಬ ಬಯಕೆ. ಲಕ್ಷಾಧಿಪತಿಗೆ ಕೋಟ್ಯಧೀಶನಾಗಬೇಕೆಂಬ ತವಕ. ಋಗ್ವೇದದ ಒಂದು ಮಂತ್ರ ಇದನ್ನು ಬಹು ಸುಂದರವಾಗಿ ನಿರೂಪಿಸುತ್ತದೆ :

ಏಕಪಾದ್ಭೂಯೋ ದ್ವಿಪದೋ ವಿಚಕ್ರಮೇ ದ್ವಿಪಾತ್ತ್ರಿಪಾದಮಭ್ಯೇತಿ ಪಶ್ಚಾತ್ ।
ಚತುಷ್ಪಾದೇತಿ ದ್ವಿಪದಾಮಭಿಸ್ವರೇ ಸಂಪಶ್ಯನ್ಪಂಕ್ತೀರುಪತಿಷ್ಠಮಾನಃ ॥

[ಋ.ವೇ. 10-117-8]

"ಒಂದು ಪಾಲು ಸಂಪತ್ತಿದ್ದವನು ಎರಡು ಪಾಲು ಇರುವವನಿಂದ ಬೇಡುತ್ತಾನೆ. ಎರಡು ಪಾಲಿನವನು ಮೂರು ಪಾಲಿನವನಿಂದ. ಮೂರು ಪಾಲಿನವನು ನಾಲ್ಕು ಪಾಲಿನವನಿಂದ. ಹೀಗೆ ಕಡಿಮೆ ಧನದ ವ್ಯಕ್ತಿ ತನಗಿಂತ ಹೆಚ್ಚು ಧನವಂತನನ್ನು ಕೇಳುತ್ತಾನೆ. ಇದೇ ಜಗತ್ತಿನ ಕ್ರಮ."

ಆದರೆ ಸಂಪತ್ತು ಬಹಳ ಚಂಚಲ. ಇಂದು ಕೋಟ್ಯಧೀಶನಾಗಿದ್ದವನು ನಾಳೆ ಬೀದಿಯ

ಭಿಕಾರಿಯಾಗಬಹುದು. ಇಂದಿನ ಭಿಕಾರಿ ನಾಳೆ ಕೋಟ್ಯಧೀಶನೂ ಆಗಬಹುದು. ಒಬ್ಬನ ಕೈಯಲ್ಲಿ ನಿಲ್ಲುವುದು ಅದರ ಸ್ವಭಾವವೇ ಅಲ್ಲ. ಋಗ್ವೇದದ ಮಂತ್ರ ಈ ಅಂಶವನ್ನು ಹೃದಯಂಗಮವಾಗಿ ವರ್ಣಿಸಿದೆ :

ಓ ಹಿ ವರ್ತಂತೇ ರಥ್ಯೇವ ಚಕ್ರಾಽನ್ಯಮನ್ಯಮುಪತಿಷ್ಠಂತರಾಯಃ ।
[ಋ.ವೇ. 10-117-5]

“ರಥದ ಚಕ್ರಗಳು ಅನೇಕ ದಿಕ್ಕುಗಳಲ್ಲಿ ತಿರುಗುತ್ತವೆ. ಅದೇ ರೀತಿ ಧನವೂ ಅನೇಕ ಜನರ ಕೈಗೆ ಬರುತ್ತ-ಹೋಗುತ್ತ ಇರುತ್ತದೆ. ಅದು ಎಂದೂ ಒಬ್ಬನ ಬಳಿ ಅಥವಾ ಒಂದೇ ಸ್ಥಾನದಲ್ಲಿ ಶಾಶ್ವತವಾಗಿ ನಿಲ್ಲದು.”

ಅಂತೆಯೇ, “ಪೃಣೀಯಾದಿನ್ನಾಧಮಾನಾಯ ತವ್ಯಾನ್” [ಋ.ವೇ. 10-117-5]

“ಸಂಪತ್ತಿನಿಂದ ಸಮೃದ್ಧನಾದವನು ಯಾಚಿಸುವ ಅತಿಥಿಗೆ ಧನಾದಿಗಳನ್ನು ಕೊಡಲೇಬೇಕು.”

ಪ್ರಾಮಾಣಿಕವಾಗಿ ಗಳಿಸಿದ ಐಶ್ವರ್ಯವನ್ನು ನಾಲ್ಕು ಜನರಿಗೆ ಹಂಚಿ ತಾನೂ ಅನುಭವಿಸಬೇಕು. ದೇವತಾಕಾರ್ಯಗಳಿಗೆ, ದಾನಧರ್ಮಾದಿಗಳಿಗೆ ಅಥವಾ ಸಮಾಜಸೇವೆಗೆ ತನ್ನ ದುಡಿಮೆಯ ಒಂದು ಭಾಗವನ್ನಾದರೂ ಮೀಸಲಿಡಬೇಕು. ಅದನ್ನೇ ಋಗ್ವೇದದ ಒಂದು ಮಂತ್ರ ಹೀಗೆ ಹೇಳುತ್ತದೆ :

ಮೋಘಮನ್ನಂ ವಿಂದತೇ ಅಪ್ರಚೇತಾಃ
ಸತ್ಯಂ ಬ್ರವೀಮಿ ವಧ ಇತ್ಸ ತಸ್ಯ ।
ನಾರ್ಯಮಣಂ ಪುಷ್ಯತಿ ನೋ ಸಖಾಯಂ
ಕೇವಲಾಘೋ ಭವತಿ ಕೇವಲಾದೀ ॥ [ಋ. ವೇ. 10-117-6]

“ದಾನ ಮಾಡುವ ಬುದ್ಧಿಯೇ ಬಾರದವನು ಅನ್ನೈಶ್ವರ್ಯಾದಿಗಳನ್ನು ಪಡೆಯುವುದು ವ್ಯರ್ಥ. ಸತ್ಯವಾಗಿ ಹೇಳುತ್ತೇನೆ ; ಅದು ಅವನಿಗೆ ಮೃತ್ಯುಪ್ರಾಯವಾಗಿರುತ್ತದೆ. ಪವಿತ್ರ ದಾನದಿಂದ ಅವನು ದೇವನನ್ನು ಸೇವಿಸಿ ಮಿತ್ರನನ್ನು ಪೋಷಿಸಲಿ. ಯಾರಿಗೂ ದಾನ ಮಾಡದೆ ಕೇವಲ ತಾನೊಬ್ಬನೇ ಅನುಭವಿಸುವ ಆತ ಪಾಪಿಷ್ಠನಾಗುತ್ತಾನೆ.”

ಜೂಜಿನಿಂದ ದೂರವಿರಿ : ಮನುಷ್ಯನ ಜೀವನವನ್ನು ಕೆಡಿಸುವಂಥ ಪರಿಸರಗಳು, ಸಾಧನಗಳು ಹತ್ತಾರು. ಮದ್ಯಪಾನ, ಸ್ತ್ರೀಸಂಗ, ಜೂಜಾಟ—ಇವೆಲ್ಲ ಮಾನವನ ಬಾಳನ್ನು ಹಾಳು ಮಾಡುವಂಥ ದುಶ್ಚಟಗಳು. ಋಗ್ವೇದದ ಅಕ್ಷಸೂಕ್ತವೆಂಬ ಭಾಗದಲ್ಲಿ ಜೂಜಿನ ಹವ್ಯಾಸಕ್ಕೊಳಗಾಗಿ ಸಾಂಸಾರಿಕ ಸುಖಗಳನ್ನು ಸಂಪೂರ್ಣವಾಗಿ ಕಳೆದುಕೊಂಡ ವ್ಯಕ್ತಿಯೊಬ್ಬ ತನ್ನ ದುಃಸ್ಥಿತಿಯನ್ನು ಕುರಿತು ಮರುಗುತ್ತಾನೆ. ಜೂಜಿನ ದುಷ್ಪರಿಣಾಮಗಳನ್ನು ವಿವರಿಸಿ, ಪ್ರಾಮಾಣಿಕವಾದ ಪರಿಶ್ರಮದಿಂದ ಜೀವನವನ್ನು ಸಾಗಿಸಬೇಕೆಂದು ಸಂದೇಶ ನೀಡುತ್ತಾನೆ.

ಮೊದಲನೆಯ ಋಕ್ಕಿನಲ್ಲಿ ತನ್ನ ಪತ್ನಿಯ ಸದ್ಗುಣಗಳನ್ನು ವರ್ಣಿಸಿ, ಜೂಜಿನ ಚಟಕ್ಕೆ ಬಿದ್ದ ತಾನು ಅವಳನ್ನು ಮನೆಯಿಂದ ಓಡಿಸಿದುದಕ್ಕೆ ದುಃಖಪಡುತ್ತಾನೆ:

ನ ಮಾ ಮಿಮೇಥ ನ ಜಿಹೀಳ ಏಷಾ
ಶಿವಾ ಸಖಿಭ್ಯ ಉತ ಮಹ್ಯಮಾಸೀತ್ ।

ಅಕ್ಷಸ್ಯಾಹಮೇಕಪರಸ್ಯ ಹೇತೋಃ
ಅನುವ್ರತಾಮಪ ಜಾಯಾಮರೋಧಮ್॥ [ಋ. ವೇ. 10.34.2]

ಕಲಹ ಮಾಡುವಳಲ್ಲ ಕೋಪ ಮಾಡುವಳಲ್ಲ
ಎನಗು ಮಿತ್ರರಿಗೆಲ್ಲ ದಯೆಯ ತೋರಿಹಳು;
ದಾಳಗಳು ತಾವುರುಳಿ ನಿರ್ಭಾಗ್ಯನಾದ ನಾ
ಸತಿಯ ಮನೆಯಿಂದಾಚೆಗೋಡಿಸಿರುವೆ॥

[ಕನ್ನಡ ಅನುವಾದ: ಎಂ. ಎ. ಕೃಷ್ಣಸ್ವಾಮಿ: 'ಋಗ್ವೇದ'ದಿಂದ]

ಜೂಜಾಡುವ ಇವನನ್ನು ಅತ್ತೆ ದ್ವೇಷಿಸುತ್ತಾಳೆ; ಹೆಂಡತಿ ಹತ್ತಿರಕ್ಕೆ ಸೇರಿಸುವುದಿಲ್ಲ; ಜನರ ಸಹಾನುಭೂತಿಯನ್ನು ಇವನು ಸಂಪೂರ್ಣವಾಗಿ ಕಳೆದುಕೊಳ್ಳುತ್ತಾನೆ. ತಾನು ನಿಷ್ಪ್ರಯೋಜಕ ಎಂಬ ಭಾವನೆ ಅವನಿಗೇ ಮೂಡುತ್ತದೆ:

ದ್ವೇಷ್ಟಿ ಶ್ವಶ್ರೂರಪಜಾಯಾ ರುಣದ್ಧಿ
ನ।ನಾಥಿತೋ ವಿನ್ದತೇ ಮರ್ಡಿತಾರಮ್ ।
ಅಶ್ವಸ್ಯೇವ ಜರತೋ ವಸ್ನ್ಯಸ್ಯ
ನಾಹಂ ವಿಂದಾಮಿ ಕಿತವಸ್ಯ ಭೋಗಮ್ ॥[ಋ. ವೇ. 10.34–37]

ಅವಳ ತಾಯ್ ದ್ವೇಷಿಪಳು, ಅವಳೆ ಬೇಡನ್ನುವಳು
ಇಂಥ ಕಷ್ಟದಲೆನಗೆ ಜನರ ದಯೆಯುಂಟೆ?
ಜೂಜುಗಾರನು ತಾನು ಅತಿ ನಿಷ್ಪ್ರಯೋಜಕನು
ಸಂತೆಮಾಳದಲಿರುವ ಮುದಿಗುದುರೆಯಂತೆ।।

ಸಂತೆಮಾಳದ ಮುದಿಗುದುರೆಯ ಉಪಮೆ ಬಹಳ ಸೊಗಸಾಗಿದೆ. ಆ ಕುದುರೆ ಯೌವನದ ಹರುವಯಸ್ಸಿನಲ್ಲಿದ್ದಾಗ, ತನ್ನ ಪಾಲಿನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿದ್ದಾಗ ಅದನ್ನು ಕೊಳ್ಳಲು ಎಲ್ಲರೂ ಮುಂದೆ ಬರುತ್ತಿದ್ದರು. ಈಗ ಅದು ಸತ್ತ್ವಹೀನವಾಗಿದೆ, ದುರ್ಬಲವಾಗಿದೆ. ಆದ್ದರಿಂದಲೇ ಅದಕ್ಕೆ ಗಿರಾಕಿಗಳಿಲ್ಲ. ಅಂತೆಯೇ ಜೂಜುಕೋರ ಈ ದುಶ್ಚಟಕ್ಕೆ ಬಲಿಯಾಗುವ ಮುನ್ನ ಎಲ್ಲರ ಆದರಕ್ಕೆ, ಪ್ರೀತಿ ವಿಶ್ವಾಸಗಳಿಗೆ ಪಾತ್ರನಾಗಿದ್ದ. ಈಗ ಎಲ್ಲರೂ ಆತನನ್ನು ದ್ವೇಷಿಸುವರು. ತಾನು ಮುದಿಗುದುರೆಯಂತೆ ಅಪ್ರಯೋಜಕ ಎಂಬ ಭಾವನೆ ಅವನಿಗೆ ಮೂಡಿದೆ.

ಸೋತ ಜೂಜುಗಾರನ ಸಂಕಷ್ಟಗಳಿಗೆ ಅಂತ್ಯವಿಲ್ಲ. ಆತನ ಮಡದಿಯನ್ನು ಇತರ ಜೂಜುಗಾರರು ಹೀನಭಾವನೆಯಿಂದ ಹಿಡಿದು ಎಳೆಯುತ್ತಿರುವರು. ಆತನ ತಂದೆ, ತಾಯಿ, ಸಹೋದರರೂ "ನಮಗೆ ಈತನ ಬಗ್ಗೆ ಏನೂ ಗೊತ್ತಿಲ್ಲ. ಇವನನ್ನು ಸೆರೆಮನೆಗೆ ಕಟ್ಟಿ ಒಯ್ಯಿರಿ" ಎನ್ನುವರು :

ಅನ್ಯೇಜಾಯಾಂ ಪರಿಮೃಶಂತ್ಯಸ್ಯ ಯಸ್ಯಾಗೃಧದ್ವೇದನೇ ವಾಜ್ಯಕ್ಷಃ ।
ಪಿತಾ ಮಾತಾ ಭ್ರಾತರ ಏನಮಾಹುಃ ನಜಾನೀಮೋ ನಯತಾ ಬದ್ಧಮೇತಮ್ ॥
[ಋ. ವೇ. 10-34-4]

ಪೇರಾಶೆಯಿಂದಿರುವ ದಾಳಗಳು ಮನೆಮುರಿದ
ಮಾನವನ ಸತಿಯನ್ನು ಇತರರೆಳೆಸುವರು ।
ತಾಯ್ತಂದೆ, ಸೋದರರು ಎಲ್ಲ ಪೇಳುವರಿವನ
'ನಾವ್ ಕಾಣೆವಿವನನ್ನು, ಒಯ್ಯಿರಿ ಸೆರೆಗೆ' ॥

ಜೂಜಾಡುವುದು 'ವ್ಯಸನ'ವೆಂದು ದ್ಯೂತಕಾರನಿಗೂ ಗೊತ್ತು. ದಾಳಗಳಿಂದ ತಪ್ಪಿಸಿಕೊಳ್ಳಬೇಕೆಂದು ಆತ ಮಾಡುವ ಪ್ರಯತ್ನ ಅಷ್ಟಿಷ್ಟಲ್ಲ. ಆದರೂ ಆತನ ಮನಸ್ಸು ದುರ್ಬಲ. ಬಣ್ಣಬಣ್ಣದ ಅಕ್ಷಗಳ ಶಬ್ದ ಕೇಳಿದೊಡನೆಯೇ ಆತ, ಕಾಮವ್ಯಸನದಿಂದ ಸಂಕೇತಸ್ಥಾನವನ್ನು ಸೇರುವ ಜಾರಿಣಿಯಂತೆ, ಜೂಜುಕಟ್ಟೆಯನ್ನು ಸೇರುವನು.

ಯದಾದೀಧ್ಯೇನ ದವಿಷಾಣ್ಯೇಭಿಃ
ಪರಾಯದ್ಭ್ಯೋಽವ ಹೀಯೇ ಸಖಿಭ್ಯಃ ।
ನ್ಯುಪ್ತಾಶ್ಚ ಬಭ್ರವೋ ವಾಚಮಕ್ರತಮ್
ಏಮೀದೇಷಾಂ ನಿಷ್ಕೃತಂ ಜಾರಿಣೀವ ॥ [ಋ. ವೇ. 10-34-5]

ಒಬ್ಬನೇ ಇದ್ದಾಗ ಇನ್ ಪೋಗೆನೆನ್ನುತಲಿ
ಒಗೆವೆ, ಹಿಂದೆಯೆ ಉಳಿವೆ ಜೂಜುಗಾರರ ಬಿಟ್ಟು ।
ಕೆಳಗುರುಳ್ದ ಕಂದಾಳ ಕೂಗಲೊಡನೆಯೆ ನಾನು
ಜಾರಿಣಿಯು ತೆರದಲ್ಲಿ ಜೂಜುಕಟ್ಟೆಗೆ ನಡೆವೆ ॥

ಅಕ್ಷಗಳ ಪ್ರಭಾವ ಅಪರಿಹಾರ್ಯವಾದುದು. ಜೂಜುಗಾರನನ್ನು ಇವು ಸೆಳೆಯುವುವು. ಗೆದ್ದವನಿಗೆ ಧನಧಾನ್ಯಾದಿಗಳ ಲಾಭವಾದರೆ. ಸೋತವನಿಗೆ ಸಂತಾಪ. ಆದರೂ ಜೂಜುಗಾರ ಅವುಗಳ ಮೋಹದ ಬಲೆಗೆ ಸಿಲುಕಿಹೋಗುತ್ತಾನೆ. ದಾಳಗಳು ತುಂಟ ಹುಡುಗನಂತೆ ಇವನೊಡನೆ ಕಣ್ಣುಮುಚ್ಚಾಲೆ ಆಡುತ್ತವೆ :

ಅಕ್ಷಾಸ ಇದಂಕುಶಿನೋ ನಿತೋದಿನೋ
ನಿಕೃತ್ವಾನಸ್ತಪನಾಸ್ತಾಪಯಿಷ್ಣವಃ ।
ಕುಮಾರದೇಷ್ಣಾ ಜಯತಃ ಪುನರ್ಹಣೋ
ಮಧ್ವಾ ಸಂಪೃಕ್ತಾಃ ಕಿತವಸ್ಯ ಬರ್ಹಣಾ ॥ [ಋ.ವೇ. 10-34-7]

ದಾಳ ಜೂಜಿಗನೆಳೆದು ವಂಚಿಸುತೆ ನೋಯಿಸುತೆ
ನೋವನಿತ್ತಲು ನೋವನೆತ್ತಲುಂ ಮಾಡಿ ।
ಹುಡುಗರಂದದಿ ಆಸೆ ತೋರಿಸಿಯು ಹಿಂದೆಳೆದು
ಕೈಯ ಮುಸುಕುವುದಾಗ ಮಧುರ ಮಧುಮಾಯೆ ॥

ಈ ದಾಳಗಳು ಕೆಳಗುರುಳುತ್ತಿದ್ದರೂ ಸೋಲಿನ ಹೆದರಿಕೆಯಿಂದ ನಡುಗುವ ಜೂಜುಕೋರನ ಹೃದಯದ ಮೇಲಕ್ಕೆ ಹೊರಳುತ್ತವೆ. ಹಸ್ತಗಳೇ ಇಲ್ಲದ ಇವು ಕೈಗಳಿರುವ ಜೂಜುಕೋರನನ್ನೂ ಗೆಲ್ಲುತ್ತವೆ. ದಿವ್ಯವಾದ ಮಾಯೆಯ ಇದ್ದಿಲಿನಂತಿರುವ ಈ ದಾಳಗಳು ಅಕ್ಷಫಲಕದ

ಮೇಲೆಸೆಯಲ್ಪಟ್ಟಾಗ ತಾವು ತಣ್ಣಗಿದ್ದರೂ ಸಹ ಜೂಜುಗಾರನ ಹೃದಯವನ್ನು ಸೋಲಿನ ಸಂತಾಪದಿಂದ ಸುಡುತ್ತವೆ :

ನೀಚಾ ವರ್ತನ್ತ ಉಪರಿಸ್ಫುರನ್ತ್ಯಹಸ್ತಾಸೋ ಹಸ್ತವನ್ತಂ ಸಹನ್ತೇ ।
ದಿವ್ಯಾ ಅಂಗಾರಾ ಇರಿಣೇನ್ಯುಪ್ತಾಃ ಶೀತಾಃ ಸನ್ತೋ ಹೃದಯಂ ನಿರ್ದಹನ್ತಿ॥
[ಋ.ವೇ. 10-34-9]

ಕೆಳಗುರುಳಿ ಒಡನೆಯೇ ಮೇಲಕ್ಕೆ ತಾನುರುಳಿ
ಕೈಯಿಲ್ಲದಿರ್ದೊಡೆಯು ನರನ ಮೇಲ್ ಕೈಮಾಡಿ ।
ಹಾಸ ಮೇಲ್ಚೆಲ್ಲಿತು ತಾ ಮಾಯೆಯಿದ್ದಿಲ ತೆರದಿ
ತಣ್ಣಗಿರುತಲೆ ಹೃದಯ ಬೂದಿಮಾಡುವುದು ॥

ಹಣವಿಲ್ಲದೆ ಎಲ್ಲಿಗೋ ಓಡಿಹೋದ ಜೂಜುಗಾರನ ಹೆಂಡತಿ ಸದಾಕಾಲ ದುಃಖಿಸುತ್ತಿರುವಳು. ಅವನ ತಾಯಿಯಂತೂ ಪುತ್ರಶೋಕದಿಂದ ಸಂತಪ್ತಳಾಗುವಳು. ಕೈಯಲ್ಲಿ ಹಣವಿಲ್ಲ ; ಸಾಲ ಕೊಡುವವರಿಲ್ಲ. ಕೊನೆಗೆ ಉಳಿದ ಏಕೈಕ ಮಾರ್ಗವೆಂದರೆ ಕಳ್ಳತನ. ಅದಕ್ಕೂ ಅಂಜುವುದಿಲ್ಲ ಈತ. ಜೂಜಿನಲ್ಲಿ ಸೋತು ಸಾಲಗಾರನಾದ ಇವನು ಇತರರ ಮನೆಗಳಿಗೆ ರಾತ್ರಿ ಕನ್ನವಿಕ್ಕಲು ಪ್ರಯತ್ನಿಸುತ್ತಾನೆ :

ಜಾಯಾ ತಪ್ಯತೇ ಕಿತವಸ್ಯ ಹೀನಾ ಮಾತಾ ಪುತ್ರಸ್ಯ ಚರತಃ ಕ್ವಸ್ವಿತ್ ।
ಋಣಾವಾ ಬಿಭ್ಯದ್ಧನಮಿಚ್ಛಮಾನೋಽನ್ಯೇಷಾಮಸ್ತಮುಪ ನಕ್ತಮೇತಿ ॥
[ಋ.ವೇ. 10-34-10]

ದುಃಖಿತಳು ಜೂಜುಗಾರನ ಸತಿ ಪರಿತ್ಯಕ್ತೆ
ದುಃಖಿತಳು ಅವನ ತಾಯ್, ನೆಲೆಯಿಲ್ಲದಲೆವವನ
ಋಣಿಯಾಗಿ ಭಯಹೊಂದಿ ಹಣವನರಸುತ್ತ
ಇರುಳಿನಲಿ ಪರಗೃಹದ ಬಳಿ ಸುಳಿಯುತಿಹನು

ಅವನಿಗೆ ಬೇರೆ ಗೃಹಿಣಿಯರನ್ನು, ಸದ್ಗೃಹಸ್ಥರನ್ನು ಕಂಡಾಗ ತುಂಬ ವೇದನೆಯಾಗುತ್ತದೆ. ಅವರ ಮನೆಯ ಅಚ್ಚುಕಟ್ಟನ್ನು ಕಂಡಾಗ ತನ್ನ ದುಃಸ್ಥಿತಿಯನ್ನು ನೆನೆದು ಕಣ್ಣಲ್ಲಿ ನೀರು ಬರುತ್ತದೆ. ಆದರೆ ಅದು ಸ್ವಲ್ಪ ಕಾಲ ಮಾತ್ರ. ಮತ್ತೆ ಜೂಜಿನಕಟ್ಟೆಗೆ ಬರುವನು. ತಂದ ಕಾಸನ್ನು ಕಳೆದುಕೊಂಡು ಪುನಃ ಭಿಕಾರಿಯಂತೆ ಹಿಂದಿರುಗುವನು :

ಸ್ತ್ರಿಯಂ ದೃಷ್ಟಾಯ ಕಿತವಂ ತತಾಪಾನ್ಯೇಷಾಂ ಜಾಯಾಂ ಸುಕೃತಂ ಚ
ಯೋನಿಂ ।
ಪೂರ್ವಾಹ್ಣೇ ಅಶ್ವಾನ್ಯುಯುಜೇ ಹಿ ಬಭ್ರೂನ್ತ್ಸೋ ಅಗ್ನೇರಂತೇ ವೃಷಲಃ
ಪಪಾದ ॥
[ಋ.ವೇ. 10-34-11]

ಅನ್ಯಸತಿಯರ ಮನೆಯ ಅಚ್ಚುಕಟ್ಟನು ಕಂಡು
ಜೂಜಿಗನ ಹೃದಯ ನೊಂದಶ್ರು ಸುರಿಸುವುದು

ಆದರೂ ಉದಯದಲಿ ಕಂದುಬಣ್ಣದ ಕುದುರೆ
ಹೂಡಿ, ರವಿತಾನಿಳಿಯೆ, ತಿರುಕನಾಗಿಹನು

ಕೊನೆಗೆ ಆತ ಧೈರ್ಯಮಾಡಿ ಇನ್ನೆಂದೆಂದಿಗೂ ಜೂಜಿಗೆ ಹೋಗುವುದಿಲ್ಲವೆಂದು ಜೂಜಿನ ವಸ್ತುಗಳ ಮೇಲೆ ಆಣೆಯಿಟ್ಟು ಶಪಥಮಾಡುತ್ತಾನೆ. ಜೂಜಿಗಾಗಿ ಹಣ ಸಂಪಾದಿಸುವುದಿಲ್ಲ ವೆಂದು ತೀರ್ಮಾನಿಸುತ್ತಾನೆ :

ಯೋವಃ ಸೇನಾನೀರ್ಮಹತೋ ಗಣಸ್ಯ ರಾಜಾ ವ್ರಾತಸ್ಯ ಪ್ರಥಮೋ ಬಭೂವ।
ತಸ್ಮೈ ಕೃಣೋಮಿ ನಧನಾ ರುಣಧ್ಮಿ ದಶಾಹಂ ಪ್ರಾಚೀಸ್ತದೃತಂ ವದಾಮಿ॥
[ಋ. ವೇ. 10.34.12]

ಜೂಜಿನುಪಕರಣಗಳೆ ನಿಮ್ಮ ಗಣಮುಖ್ಯನಿಗೆ
ಇದಿಗೊ ಕೈಜೋಡಿಸಿದೆ ನಮಸ್ಕಾರ।
ಜೂಜಿಗಿನ್ನೆಂದಿಗೂ ಧನವನಾರ್ಜಿಸೆ ನಾನು
ಶಪಥವಿದು ಹೇಳುವೆನು ಸತ್ಯವಾಗಿ ॥

ಈ ಸೂಕ್ತದ ಕೊನೆಯಲ್ಲಿ ಪ್ರಾಮಾಣಿಕವಾದ ಪರಿಶ್ರಮದಿಂದ ಹಣ ಸಂಪಾದಿಸಿ ಜೀವನ ನಡೆಸ ಬೇಕೆಂಬ ಸಂದೇಶ ಬಲು ಮಾರ್ಮಿಕವಾಗಿ ಮೂಡಿಬಂದಿದೆ. 'ಕಾಯಕವೇ ಕೈಲಾಸ' ಎಂಬ ತತ್ತ್ವ ಇಲ್ಲಿ ಅಡಗಿದೆ. ಆ ಜೂಜುಕೋರನೇ ಇತರರನ್ನುದ್ದೇಶಿಸಿ ಹೀಗೆ ಹೇಳುತ್ತಾನೆ : 'ಅಕ್ಷಗಳಿಂದ ಜೂಜಾಡಬೇಡಿ. ಕಷ್ಟಪಟ್ಟು ವ್ಯವಸಾಯ ಮಾಡಿ. ಅದರಿಂದ ಬಂದ ಉತ್ಪನ್ನವೇ ಅಧಿಕಧನವೆಂದು ಭಾವಿಸಿ ತೃಪ್ತಿಗೊಂಡು ಸುಖ-ಸಂತೋಷಗಳನ್ನನುಭವಿಸಿ. ಕೃಷಿಯಿಂದಲೇ ಕಷ್ಟಪಟ್ಟು ಹಣ ಸಂಪಾದಿಸಿದಾಗ ಗೋವುಗಳನ್ನು ಸಾಕಬಹುದು; ಹೆಂಡತಿಯೂ ಪ್ರೇಮದಿಂದ ವರ್ತಿಸುತ್ತಾ ನಿಮ್ಮೊಡನೆ ತೃಪ್ತಿಯಿಂದ ಸುಖವಾಗಿ ಸಂಸಾರ ಮಾಡುತ್ತಾಳೆ.

ಅಕ್ಷೈರ್ಮಾದೀವ್ಯಃ ಕೃಷಿಮಿತ್ಕೃಷಸ್ವ ವಿತ್ತೇ ರಮಸ್ವ ಬಹು ಮನ್ಯಮಾನಃ।
ತತ್ರಗಾವಃ ಕಿತವ ತತ್ರ ಜಾಯಾ ತನ್ಮೇ ವಿ ಚಷ್ಟೇ ಸವಿತಾಯಮರ್ಯಃ॥
[ಋ.ವೇ. 10.34.13]

ಓ ನನ್ನ ಬಾಂಧವರೆ, ಸುಖವನರಸುವರೆ
ಜೂಜನಾಡಲು ಬೇಡಿ ಕೃಷಿಯ ಮಾಡಿ ।
ಸವಿತೃ ಹೇಳಿದ ನುಡಿಯ ಹೇಳುವೆನು ನಾನೀಗ
ಅಲ್ಲೇ ಪಶುಸಮೃದ್ಧಿ, ಪತ್ನಿಗೂ ತೃಪ್ತಿ॥

ಒಟ್ಟಿನಲ್ಲಿ ಜೂಜು ಮನೆಹಾಳು ಮಾಡುವಂಥದು, ವ್ಯಕ್ತಿಯ ಜೀವನಕ್ಕೆ ಮಾರಕವಾದುದು. ಆದರೆ ಕಷ್ಟಪಟ್ಟು ದುಡಿಮೆ ತೃಪ್ತಿ ತರುವಂಥದು: ಸುಖಕ್ಕೆ ಸೋಪಾನ. ವ್ಯಕ್ತಿಯ ಜೀವನವೂ ಇದರಿಂದ ಪರಿಶುದ್ಧವಾಗುವುದು : ತನ್ಮೂಲಕ ಸಾಮಾಜಿಕ ಜೀವನ ಹಸನಾಗುವುದು. ಋಗ್ವೇದದ ಈ ಅಕ್ಷಸೂಕ್ತ, ವ್ಯಸನಗಳಲ್ಲೊಂದಾದ ಜೂಜಿನ ಅಪಾಯಗಳನ್ನು ಎತ್ತಿ ತೋರಿಸಿ, ಕೊನೆಗೆ ಕಷ್ಟಪಟ್ಟು ಪ್ರಾಮಾಣಿಕವಾಗಿ ಸಿಕ್ಕಿರುವುದರಲ್ಲೇ ಸಂತೃಪ್ತಿಯನ್ನು ಪಡೆಯಬೇಕೆಂಬ ಅಮರತತ್ತ್ವವನ್ನು ಬಹು ಹೃದಯಂಗಮವಾಗಿ ಸಾರುತ್ತದೆ. ಇಂದಿನ ಸಮಾಜದಲ್ಲೂ ಇಂತಹ ವ್ಯಸನಗಳಿಗೆ ಸಿಲುಕಿ ಮನೆಮಠಗಳನ್ನು ಕಳೆದುಕೊಂಡು

ಜೀವನವನ್ನೇ ವ್ಯರ್ಥಮಾಡಿಕೊಂಡವರ ಸಂಖ್ಯೆ ಬಹಳಷ್ಟು. ಅವರೆಲ್ಲರಿಗೂ ಒಂದು ನೀತಿ ಪಾಠದಂತಿದೆ, ಋಗ್ವೇದದ ಈ ಭಾಗ.

ಜೀವನ ಕರ್ಮಮಯವಾಗಲಿ : ವೇದಗಳು ಸದಾ ಕ್ರಿಯಾಶೀಲರಾಗಿರಲು ಸಂದೇಶ ನೀಡುತ್ತವೆ. ಸಾಧನೆಯಿಲ್ಲದೆ ಸಿದ್ಧಿಯುಂಟಾಗಲಾರದು. ಸತ್ಯಸಾಕ್ಷಾತ್ಕಾರದಂತಹ ನಿಶಿತವಾದ, ಕತ್ತಿಯ ಅಲಗಿನಂತಿರುವ ದುರ್ಗಮ ಪಥದಲ್ಲಂತೂ ಅದರ ಆವಶ್ಯಕತೆ ಅಷ್ಟಿಷ್ಟಲ್ಲ. ನಮ್ಮ ಪಾಲಿಗೆ ಬರುವ ಕರ್ತವ್ಯಗಳನ್ನು ಶ್ರದ್ಧೆಯಿಂದ, ತೃಪ್ತಿಕರವಾಗಿ ನಿರ್ವಹಿಸಬೇಕು. ಅದೇ ಸಿದ್ಧಿಗೆ ಸೋಪಾನ. ಕ್ರಿಯಾಶೀಲರಲ್ಲದ ಸೋಮಾರಿಗಳನ್ನು ದೇವತೆಗಳೂ ಮೆಚ್ಚರು :

> 'ನ ಋತೇ ಶ್ರಾಂತಸ್ಯ ಸಖ್ಯಾಯ ದೇವಾಃ '। (ಋ.ವೇ.)
> [ಶ್ರಮಪಡುವವರೇ ಪ್ರಿಯರು ದೇವತೆಗಳಿಗೆ]
> 'ಇಚ್ಛನ್ತಿದೇವಾಃ ಸುನ್ವನ್ತಂ ನ ಸ್ವಪ್ನಾಯ ಸ್ಪೃಹಯಂತಿ ಯಂತಿ ಪ್ರಮಾದ ಮಂತ್ರದಾಃ'॥ (ಋ.ವೇ. 8.2.18)
> ಸೋಮಶೋಧಿಸುವವನ
> ಯಜ್ಞಮಾಡುತಲಹನ
> ಬಯಸುವರು ದೇವತೆಗಳಾವಾಗಲು ।
> ಆಲಸಿಗಳಾಗಿಹರ
> ತಪ್ಪು ಮಾರ್ಗದೊಳಿಹರ
> ನೋಡಿ ಮೆಚ್ಚರು ಅವರು ಎಂದೆಂದಿಗೂ॥

ಕರ್ಮ ಮಾಡಬೇಕು ; ಆದರೆ ಆ ಕರ್ಮಗಳಿಗಾಗಲಿ ಅವುಗಳ ಫಲಗಳಿಗಾಗಲಿ ಎಂದೆಂದಿಗೂ ದಾಸರಾಗಬಾರದು, ಅವುಗಳ ಜಾಲದಲ್ಲಿ ಸಿಕ್ಕಿ ಬೀಳಬಾರದು. ಇದೇ ತತ್ತ್ವ ಮುಂದೆ ಭಗವದ್ಗೀತೆಯಲ್ಲಿ ಪ್ರತಿಪಾದಿತವಾಗಿರುವ ಕರ್ಮಯೋಗ. ಯಜುರ್ವೇದದ ಕೊನೆಯಲ್ಲಿರುವ ಮಂತ್ರವೊಂದರಲ್ಲಿ ಈ ತತ್ತ್ವ ಸೂಕ್ಷ್ಮವಾಗಿ ನಿರೂಪಿತವಾಗಿದೆ :

> ಕುರ್ವನ್ನೇವೇಹ ಕರ್ಮಾಣಿ.
> ಜಿಜೀವಿಷೇಚ್ಛತಗ್ಂ ಸಮಾಃ ।
> ಏವಂ ತ್ವಯಿ ನಾನ್ಯಥೇತೋಽಸ್ತಿ
> ನ ಕರ್ಮ ಲಿಪ್ಯತೇ ನರೇ॥ [ಯ.ವೇ. 40.2]

"ಲೋಕದಲ್ಲಿ ಕರ್ಮಮಾಡುತ್ತಾ ನೂರು ವರ್ಷ ಬದುಕಲು ಬಯಸೋಣ. ಈ ರೀತಿ ನಿಷ್ಕಾಮಕರ್ಮ ಮಾಡುವುದರಿಂದ ನಮಗೆ ಕರ್ಮ ಅಂಟದು : ಇದೇ ಮುಕ್ತಿಯ ದಾರಿ."

ಒಟ್ಟಿನಲ್ಲಿ ಕರ್ಮ ಮಾಡಬೇಕು; ಫಲ ಬಯಸಬಾರದು. ಅಹಂಕಾರ ಮಮಕಾರಗಳು ಸಂಪೂರ್ಣವಾಗಿ ನಿರಸನವಾಗಬೇಕು. ಪ್ರತಿಯೊಬ್ಬರೂ ಇದೇ ಆದರ್ಶವನ್ನು ಪಾಲಿಸಿದರೆ ಸಮಾಜದ ಎಲ್ಲ ಕಾರ್ಯವೂ ಸುಗಮವಾಗುವುದು. ಎಲ್ಲರೂ ಕ್ರಿಯಾಶೀಲರಾಗಿ, ಉತ್ಸಾಹ ಶಾಲಿಗಳಾಗಿ ಉಲ್ಲಸಿತರಾಗುವರು.

ವಧೂವರರಿಗೆ ಕಿವಿಮಾತು : ನಮ್ಮ ಸಂಸ್ಕೃತಿಯ ಹಾಗೂ ಸಾಂಸ್ಕೃತಿಕ ಜೀವನದ ಮುಖ್ಯ ಅಂಗವಾದ ವಿವಾಹ ಸಂಸ್ಕಾರದ ವಿಚಾರವೂ ವೇದಗಳಲ್ಲಿ ಸಾಕಷ್ಟಿದೆ. "ಧನ್ಯೋ

ಗೃಹಸ್ಥಾಶ್ರಮಃ' ಎಂಬ ಸೂಕ್ತಿಯಂತೆ ವ್ಯಕ್ತಿಯೊಬ್ಬ ಪರಿಪೂರ್ಣನಾಗುವುದು ಗೃಹಸ್ಥನಾದಾಗಲೇ. ಸತ್ಸಂತಾನವನ್ನು ಪಡೆಯುವುದು ಗೃಹಸ್ಥಾಶ್ರಮದ ಮುಖ್ಯ ಉದ್ದೇಶವಾದರೂ ಗೃಹಸ್ಥನೊಬ್ಬ ಬ್ರಹ್ಮಚಾರಿಗಳಿಗೂ ಸಂನ್ಯಾಸಿಗಳಿಗೂ ದೀನದಲಿತರಿಗೂ ಆಶ್ರಯ ನೀಡಬಲ್ಲ. ಷೋಡಶ ಸಂಸ್ಕಾರಗಳಲ್ಲಿ ಪ್ರಧಾನವಾದ ಸಂಸ್ಕಾರವೆಂದರೆ ವಿವಾಹ. ಪಾಶವೀ ಕಾಮತೃಪ್ತಿ ವಿವಾಹದ ಉದ್ದೇಶವಲ್ಲ. ಸಂಯಮ, ಸಹಬಾಳ್ವೆ, ಸೇವೆ. ಸ್ವಾರ್ಥತ್ಯಾಗಗಳ ಮೂಲಕ ಕಾಲಕ್ರಮದಲ್ಲಿ ತನ್ನನ್ನು ತಾನು ಸಂಪೂರ್ಣ ಜಯಿಸಿ ಸಮಾಜದ ಪ್ರಯೋಜನಕಾರೀ ಘಟಕವಾಗಿ ಬಾಳುವುದು ಅದರ ನಿಜವಾದ ಗುರಿ. ಚತುರ್ವಿಧ ಪುರುಷಾರ್ಥಗಳನ್ನು ಗಳಿಸಲು ಸ್ತ್ರೀ ಪುರುಷರು ಪರಸ್ಪರ ಸಹಕರಿಸುವ ಧರ್ಮಮಾರ್ಗವೇ ಅದು. ಈ ಧರ್ಮವೇ ಅವರಿಬ್ಬರನ್ನೂ ಒಂದುಗೂಡಿಸುವ ಶಕ್ತಿ. ಈ ಕಾರಣದಿಂದಲೇ ಹಿಂದೂಧರ್ಮದಲ್ಲಿ ವಿವಾಹ ಅವಿಚ್ಛೇದನೀಯವಾದ ಪರಮ ಪವಿತ್ರ ಬಾಂಧವ್ಯವೆಂದು ಪರಿಗಣಿಸಲ್ಪಟ್ಟಿರುವುದು. ಈ ವಿವಾಹ ಸಂಸ್ಕಾರಕ್ಕೆ ಸಂಬಂಧಪಟ್ಟ ಹಲವಾರು ಮಂತ್ರಗಳು ವೇದಗಳಲ್ಲಿ ಬರುತ್ತವೆ. ಈ ಮಂತ್ರಗಳೆಲ್ಲವೂ ಬಹಳ ಅರ್ಥಪೂರ್ಣವಾಗಿದ್ದು ಅವುಗಳ ಮಹತ್ತ್ವದ ಅರಿವು ನಮಗುಂಟಾದರೆ ನಮ್ಮ ವೈವಾಹಿಕ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಲು ಸಾಧ್ಯ. ವಿವಾಹ ಮಂಟಪದಲ್ಲಿ ಮಂಡಿಸಿದ ವಧೂವರರಿಗೆ ಈ ಮಂತ್ರಗಳ ಅರ್ಥಜ್ಞಾನವಿದ್ದರೆ ಅವರು ಮತ್ತಷ್ಟು ಸೌಹಾರ್ದದಿಂದ ಬಾಳಲು ಸಾಧ್ಯವಾಗುತ್ತದೆ.

ಪಾಣಿಗ್ರಹಣದ ಸಂದರ್ಭದಲ್ಲಿ ಹೇಳುವ ಈ ಕೆಳಗಿನ ಮಂತ್ರ ಹೃದಯಸ್ಪರ್ಶಿಯಾಗಿದೆ. ವರನು ವಧುವಿನ ಕೈಹಿಡಿದು ಹೀಗೆ ಹೇಳುತ್ತಾನೆ :

> ಗೃಹ್ಣಾಮಿ ತೇ ಸೌಭಾಗತ್ವಾಯ ಹಸ್ತಂ
> ಮಯಾ ಪತ್ಯಾ ಜರದೃಷ್ಟಿರ್ಯಥಾ ಸಃ ।
> ಭಗೋ ಅರ್ಯಮಾ ಸವಿತಾ ಪುರಂಧಿಃ
> ಮಹ್ಯಂ ತ್ವಾದುರ್ಗಾರ್ಹಪತ್ಯಾಯದೇವಾಃ ॥

[ಋ.ವೇ. 10. 85. 36]

"ವಧುವೆ.! ಸೌಭಾಗ್ಯಕ್ಕಾಗಿ. ಅಂದರೆ ನಮ್ಮಿಬ್ಬರ ಸುಖಸಂತೋಷಕ್ಕಾಗಿ ನಿನ್ನ ಪಾಣಿಗ್ರಹಣ ಮಾಡುತ್ತಿದ್ದೇನೆ. ನನ್ನೊಡನೆ ಬಾಳಿ ವಾರ್ಧಕ್ಯ ಹೊಂದು. ನಿನ್ನ ಮೂಲಕ ನಾನು ಗೃಹಪತಿಯಾಗಲೆಂದು ಅರ್ಯಮಾ, ಸವಿತಾ ಮತ್ತು ಪೂಷನ್ ದೇವತೆಗಳು ನಿನ್ನನ್ನು ನನಗೆ ಕೊಡುತ್ತಲಿದ್ದಾರೆ."

ಹಿಂದೂ ಪದ್ಧತಿಯ ಪ್ರಕಾರ ಒಮ್ಮೆ ವಿವಾಹ ಬಂಧನದಲ್ಲಿ ವ್ಯಕ್ತಿಗಳಿಬ್ಬರು ಬಂಧಿಸಲ್ಪಟ್ಟರೆ ಮುಗಿಯಿತು. ಜೀವನಪರ್ಯಂತವೂ ಅವರು ಬಾಳಸಂಗಾತಿಗಳು ; ಜೀವನದ ನೋವು ನಲಿವುಗಳಿಗೆ, ಸುಖದುಃಖಗಳಿಗೆ ಇಬ್ಬರೂ ಸರಿಸಮನಾದ ಹಕ್ಕುದಾರರು. "ಧರ್ಮೇಚ, ಅರ್ಥೇಚ, ಕಾಮೇಚ, ನಾತಿಚರಿತವ್ಯಾ ತ್ವಯೇಯಮ್" ಎಂದು ವಧುವಿನ ತಂದೆ ವರನನ್ನು ಕುರಿತು ಅಗ್ನಿಯ ಮುಂದೆ ವಿವಾಹದ ಮಂಗಳ ಮುಹೂರ್ತದಲ್ಲಿ ಎಚ್ಚರಿಕೆ ಕೊಟ್ಟಾಗ "ನಾತಿಚರಾಮಿ" ಎಂದು ವರನು ಪುರುಷಾರ್ಥಗಳ ವಿಚಾರದಲ್ಲೂ ತಾನು ಪತ್ನಿಯನ್ನು ಮೀರುವುದಿಲ್ಲವೆಂದು ಪ್ರತಿಜ್ಞೆ ಮಾಡುತ್ತಾನೆ. ಈ ವಾಗ್ದಾನವನ್ನು ಆತ ಕೊನೆಯವರೆಗೂ ಪಾಲಿಸಬೇಕು. ಮುಂದೆ ವಧುವನ್ನು ಕುರಿತು ವರ ಈ ರೀತಿ ಹೇಳುತ್ತಾನೆ :

ಸಂಪ್ರಿಯೌ ರೋಚಿಷ್ಣೂ ಸುಮನಸ್ಯಮಾನೌ [ಯ.ವೇ. 12.57]
ಪಶ್ಯೇಮ ಶರದಃ ಶತಮ್, ಜೀವೇಮ ಶರದಃ ಶತಮ್,
ಶೃಣುಯಾಮ ಶರದಃ ಶತಮ್ [ಯ.ವೇ. 36.24]

"ನಾವಿಬ್ಬರೂ ಪರಸ್ಪರ ಪ್ರೀತಿಯುಕ್ತರಾಗೋಣ, ಉಜ್ವಲರಾಗೋಣ, ಪ್ರಸನ್ನಚಿತ್ತ ರಾಗೋಣ."

"ನಾವು ನೂರು ವರ್ಷಗಳವರೆಗೂ ಒಬ್ಬರನ್ನೊಬ್ಬರು ನೋಡುವಂತೆಯೂ ನೂರು ವರ್ಷಗಳ ತನಕ ಬದುಕಿರುವಂತೆಯೂ ನೂರು ವರ್ಷಗಳ ತನಕ ಪರಸ್ಪರ ಸಂಭಾಷಿಸುವಂತೆಯೂ ಅನುಗ್ರಹವಾಗಲಿ."

ಸಮಂಜಂತು ವಿಶ್ವೇ ದೇವಾಃ ಸಮಾಪೋ ಹೃದಯಾನಿ ನೌ
ಸಂಮಾತರಿಶ್ವಾ ಸಂಧಾತಾ ಸಮುದೇಷ್ಟ್ರೀ ದಧಾತು ನೌ
[ಋ.ವೇ. 10. 85. 47]

"ಸಕಲ ದೇವತೆಗಳೂ ನಮ್ಮಿಬ್ಬರ ಹೃದಯವನ್ನು ಒಂದುಗೂಡಿಸಲಿ, ಅಬ್ದೇವತೆಗಳೂ ಒಂದಾಗುವಂತೆ ಮಾಡಲಿ ; ವಾಯುವು ನಮ್ಮಿಬ್ಬರನ್ನೂ ಜೋಡಿಸಲಿ. ಸದುಪದೇಶಕಾರಿಣಿ ಯಾದ ಸರಸ್ವತಿಯೂ ಧಾತೃವೂ ನಮ್ಮಿಬ್ಬರಿಗೂ ಏಕಭಾವವನ್ನೀಯಲಿ."

ಸಹಬಾಳ್ವೆ ನಡೆಸುವ ಪತಿಪತ್ನಿಯರು ಪರಸ್ಪರ ಅರಿತುಕೊಳ್ಳಬೇಕು. ಅವರ ಹೃನ್ಮನ ಗಳು ಒಂದಾಗಬೇಕು. ಅರುಂಧತೀ ವಸಿಷ್ಠರಂತೆ ಹಿತಕರವಾದ ಆದರ್ಶಜೀವನವನ್ನು ಸಾಗಿಸ ಬೇಕು. ಆಗ ಬಾಳು ಭವ್ಯ, ಸಾರ್ಥಕ, ಎಂಬ ಭಾವನೆ ಈ ಮಂತ್ರಗಳಲ್ಲಿವೆ.

ಮುಂದೆ ವಿವಾಹಕ್ಕೆ ಬಂದ ಹಿರಿಯರು ವಧುವನ್ನು ಆಶೀರ್ವದಿಸುತ್ತಾ :

ಅಘೋರಚಕ್ಷುರಪತಿಘ್ನ್ಯೇಧಿ ಶಿವಾಪಶುಭ್ಯಃ ಸುಮನಾ ಸುವರ್ಚಾಃ ।
ವೀರ ಸೂರ್ದೇವಕಾಮಾಸ್ಯೋನಾ ಶನ್ನೋ ಭವದ್ವಿಪದೇಶಂ ಚತುಷ್ಪದೇ ।।
[ಋ.ವೇ 10. 85. 44]

"ವಧುವೆ, ನೀನು ಘೋರವಾದ ದೃಷ್ಟಿಯಿಲ್ಲದವಳಾಗಿ (ಸೌಮ್ಯದೃಷ್ಟಿಯಿಂದ) ವರ್ಧಿಸು. ಪತಿಗೆ ಕೇಡು ಬಯಸದಿರು. ಪ್ರಾಣಿಗಳಿಗೆ ಹಿತಕರಳಾಗು. ಸುಮನಳೂ ಸುವರ್ಚಸ್ಸುಳ್ಳವಳೂ ಆಗು. ವೀರಮಾತೆಯಾಗು. ದೈವಭಕ್ತಿಯನ್ನು ಹೊಂದಿ ಸಂತೋಷದ ಬಾಳ್ವೆಯನ್ನು ಸಾಗಿಸುತ್ತಾ ಪ್ರಾಣಿಗಳಿಗೂ ಕುಟುಂಬದ ಎಲ್ಲ ವ್ಯಕ್ತಿಗಳಿಗೂ ಹಿತವನ್ನು ಬಯಸು."

ಇಹೇಮಾವಿಂದ್ರ ಸಂನೂದ ಚಕ್ರವಾಕೇವ ದಂಪತೀ ।।
ಪ್ರಜಾಯೈನೌ ಸ್ವಸ್ತಕೌ ವಿಶ್ವಮಾಯುರ್ವ್ಯಶ್ನುತಾಮ್।।[ಅ.ವೇ. 14.2. 64]

"ಎಲೈ ಇಂದ್ರನೆ ! ಚಕ್ರವಕ್ಕಿಗಳಂತೆ ಈ ದಂಪತಿಗಳನ್ನು ಜೋಡಿಸುವವನಾಗು. ಇವರಿಬ್ಬರೂ ಸಂತಾನಲಾಭವನ್ನು ಪಡೆಯಲಿ. ಇವರ ಮನೆ ಉತ್ತಮವಾಗಲಿ ಮತ್ತು ಇವರಿಗೆ ಪೂರ್ಣ ಯಶಸ್ಸು ದೊರೆಯಲಿ."

ಸ್ಯೋನಾಭವ ಶ್ವಶುರೇಭ್ಯಃ ಸ್ಯೋನಾಪತ್ಯೇ ಗೃಹೇಭ್ಯಃ ।
ಸ್ಯೋನಾಸ್ಯೈ ಸರ್ವಸ್ಯೈ ವಿಶೇ ಸ್ಯೋನಾ ಪುಷ್ಟಾಯೈಷಾಂ ಭವ ।। [ಅ.ವೇ.]

"ವಧುವೆ ! ನೀನು ಅತ್ತೆಮಾವಂದಿರಿಗೆ ಸುಖವನ್ನುಂಟುಮಾಡುವವಳಾಗು ; ನೀನು ನಿನ್ನ ಗಂಡನ ಮನೆಗೆ ಸೌಖ್ಯವನ್ನು ತಾ. ಈ ಸಮಸ್ತ ಜನಗಳಿಗೂ ಸುಖವನ್ನುಂಟುಮಾಡು. ನೀನು ಇವರ ಪುಷ್ಟಿಗಾಗಿ ಸುಖವನ್ನು ತರುವವಳಾಗು" ಎನ್ನುವರು.

ಗೃಹಿಣಿಯ ಮಹೋನ್ನತವಾದ ಆದರ್ಶ ಮತ್ತು ನಿರೀಕ್ಷೆಗಳನ್ನು ಇಲ್ಲಿ ನಾವು ಕಾಣಬಹುದು. ಆದರ್ಶ ಸತೀತ್ವದ ವರ್ಣನೆಯೇ ಇದಾಗಿದೆ. ಪತಿಗೃಹವನ್ನು ಪ್ರವೇಶಿಸಿದ ವಧು ಪತಿಯೊಡನೆಯೂ ಕುಟುಂಬದ ಇತರ ವ್ಯಕ್ತಿಗಳೊಡನೆಯೂ ಈ ರೀತಿ ಹಸನ್ಮುಖಿಯಾಗಿ, ವಿನಯ ವಿಧೇಯತೆಗಳಿಂದ ನಡೆದರೆ ಅವರ ಹೃದಯಗಳನ್ನು ಗೆದ್ದು ಇನ್ನೊಂದು ಮಂತ್ರದಲ್ಲುಕ್ತವಾದಂತೆ–"ಸಮ್ರಾಜ್ಞೀ ಶ್ವಶುರೇ ಭವ ಸಮ್ರಾಜ್ಞೀ ಶ್ವಶ್ರ್ವಾಂ ಭವ" [ಋ. ವೇ. 10. 85.46]—ಕೌಟುಂಬಿಕ ರಾಜ್ಯದ ಸಮ್ರಾಜ್ಞಿಯಾಗುತ್ತಾಳೆ. ಆಗ ಗೃಹಕಲಹವಿಲ್ಲ. ಗೃಹಭಂಗವಿಲ್ಲ. "ಗೃಹಿಣೀ ಗೃಹಮುಚ್ಯತೇ" ಎಂಬಂತೆ ಆ ಸದ್ಗೃಹಿಣಿಯಿಂದ ಮನೆ ಉದ್ಧಾರವಾಗುತ್ತದೆ. ಕುಟುಂಬದಲ್ಲಿ ಶಾಂತಿ ಸಮಾಧಾನಗಳು ಶಾಶ್ವತವಾಗಿ ನೆಲಸುತ್ತವೆ.

ಕೇಳು ಕಿಶೋರ : ಗೃಹಸ್ಥರಿಗೆ ಹೇಗೋ ಹಾಗೆ ಬ್ರಹ್ಮಚಾರಿಗಳಿಗೂ, ಅಂದರೆ ವಿದ್ಯಾರ್ಥಿಗಳಿಗೂ ಬೇಕಾದ ಸಂದೇಶ ವೇದಗಳಲ್ಲಿದೆ. ಆತನೇ ಮುಂದೆ ದೇಶದ ಜವಾಬ್ದಾರಿಯನ್ನು ಹೊರುವ ಪೌರನಾಗುತ್ತಾನೆ. ವೇದಗಳಲ್ಲಿ ವಿದ್ಯೆಯ ನಿಜವಾದ ಅರ್ಥವನ್ನು ಬೋಧಿಸಿ, ವಿದ್ಯಾರ್ಥಿಯೊಬ್ಬ ಆದರ್ಶಜೀವಿಯಂತೆ ಬಾಳಲು ಏನು ಮಾಡಬೇಕೋ ಅದನ್ನೆಲ್ಲ ಹೇಳಲಾಗಿದೆ.

ನತಾ ನ ಶಂತಿ ನ ದಭಾತಿ ತಸ್ಕರೋ ನಾಸಾಮಾಽಮಿತ್ರೋ ವ್ಯಥಿರಾದಧರ್ಷತಿ
ದೇವಾಂಶ್ಚಯಾಭಿರ್ಯಜತೇದದಾತಿ ಚ ಜ್ಯೋಗಿತ್ತಾಭಿಃ ಸ ಚ ತೇ ಗೋಪತೇಃ ಸಹ ॥

[ಋ.ವೇ. 6. 28. 3]

"ವಿದ್ಯೆಯನ್ನು ಕಳ್ಳ ಕದಿಯಲಾರ, ದುಃಖವನ್ನುಂಟುಮಾಡುವ ಶತ್ರುಗಳು ಸಹ ಅದನ್ನು ತಿರಸ್ಕರಿಸಲಾರರು. ವಿದ್ಯೆಯೆಂಬ ಧನದಿಂದಲೇ ದೈವಯಜ್ಞವೇ ಮೊದಲಾದ ಪಂಚಯಜ್ಞಗಳನ್ನು ಮಾಡಬಹುದು. ಇಂದ್ರಿಯಗಳ ಒಡೆಯನಾದ ಜೀವಾತ್ಮನಿಗೂ ಈ ವಿದ್ಯೆಗೂ ನಿರಂತರವಾದ ಸಂಬಂಧವಿದೆ."

ಪ್ರಾಚೀನಕಾಲದಲ್ಲಿ ಇಂತಹ ವಿದ್ಯೆಯನ್ನು ಸಂಪಾದಿಸಲು ವಿದ್ಯಾರ್ಥಿಗಳು ಗುರುಕುಲವನ್ನರಸಿಕೊಂಡು ಹೋಗುತ್ತಿದ್ದರು. ಶುಶ್ರೂಷಾದಿಗಳಿಂದ ಅವನನ್ನು ಒಲಿಸಿಕೊಂಡು ವಿದ್ಯೆಯನ್ನು ಪಡೆಯುತ್ತಿದ್ದರು. ಈ ಸಂದರ್ಭದಲ್ಲಿ ಗುರು–ಶಿಷ್ಯರ ನಡುವೆ ಅಪೂರ್ವವಾದ ವಾತ್ಸಲ್ಯ ಬೆಳೆಯುತ್ತಿತ್ತು. ವಿದ್ಯಾಭ್ಯಾಸ ಮುಗಿಸಿ ಹೊರಡುವಾಗ ಅವನ ಭಾವೀ ಜೀವನಕ್ಕೆ ದಾರಿದೀಪದಂತಿರುವ ನಲ್ನುಡಿಗಳನ್ನು ಆಚಾರ್ಯ ಅರುಹುತ್ತಿದ್ದ. ಕೃಷ್ಣ ಯಜುರ್ವೇದದ ಕೊನೆಯ ಕೆಲವು ಮಂತ್ರಗಳು ಇಂತಹ ಕುಲಪತಿಗಳು ತಮ್ಮ ಶಿಷ್ಯರಿಗೆ ಮಾಡಿದ ಉಪದೇಶ ವಾಕ್ಯಗಳಾಗಿವೆ :

ಸತ್ಯಂ ವದ, ಧರ್ಮಂ ಚರ । ಸ್ವಾಧ್ಯಾಯಾನ್ಮಾ ಪ್ರಮದಃ।। [ಯ.ವೇ.]
"ಸತ್ಯವನ್ನು ನುಡಿ ; ಧರ್ಮದಿಂದ ನಡೆ. (ವೇದದ) ಅಧ್ಯಯನವನ್ನು ಮರೆಯಬೇಡ."

ಮಾತೃದೇವೋಭವ ; ಪಿತೃದೇವೋಭವ ।
ಅತಿಥಿದೇವೋಭವ, ಆಚಾರ್ಯದೇವೋಭವ ।

ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ । ನೋ ಇತರಾಣಿ।।

"ತಾಯಿಯೇ ನಿನಗೆ ದೇವರಾಗಲಿ, ತಂದೆಯೇ ನಿನಗೆ ದೇವರಾಗಲಿ, ಆಚಾರ್ಯನೇ ನಿನಗೆ ದೇವರಾಗಲಿ, ಅತಿಥಿಯೇ ನಿನಗೆ ದೇವರಾಗಲಿ. ಯಾವ ಕರ್ಮಗಳು ಅನಿಂದಿತವೋ ಅವುಗಳನ್ನು ಮಾಡಬೇಕು, ಉಳಿದವನ್ನು ಮಾಡಬಾರದು. ನಮಗಿಂತ ಉತ್ತಮರಾದವರನ್ನು ನೀನು ಆದರಿಸಬೇಕು."—ಇವೇ ಮೊದಲಾದ ಉಪದೇಶಗಳನ್ನಿತ್ತು, "ನಿನಗೆ ಕರ್ಮಾಚರಣೆಯ ವಿಷಯದಲ್ಲಾಗಲಿ ಸದಾಚಾರದ ವಿಷಯದಲ್ಲಾಗಲಿ ಸಂದೇಹ ಬಂದಾಗ ವಿಚಾರಶೀಲರೂ ಅನುಭವಸ್ಥರೂ ಶಾಂತಚಿತ್ತರೂ ಧರ್ಮದರ್ಶಿಗಳೂ ಆದ ಹಿರಿಯರು ಹೇಗೆ ನಡೆಯುವರೋ ಹಾಗೆ ನಡೆದುಕೊ," ಎಂದು ಮಾರ್ಗದರ್ಶನ ನೀಡಿ ಕೊನೆಗೆ :

ಏಷ ಆದೇಶಃ, ಏಷ ಉಪದೇಶಃ
ಏಷಾ ವೇದೋಪನಿಷತ್, ಏವಮುಪಾಸಿತವ್ಯಮ್ ।। [ಯ. ವೇ.]

ಎಂದು ಪ್ರಭುಸಮ್ಮಿತೆ ಎನಿಸಿದ ವೇದ ಅಧಿಕಾರವಾಣಿಯಿಂದ ನುಡಿಯುತ್ತದೆ : ಇದು ವಿಧಿ, ಅಂದರೆ ನಿಯಮ : ಹಿಂದಿನವರು ನಮಗೆ ತೋರಿಸಿದ ದಾರಿ. ಈ ದಾರಿಯಲ್ಲಿ ನಡೆಯಿರಿ. ಇದು ಸರಿಯಾದ ಮಾರ್ಗವೆಂದು ಹಿಂದಿನವರು ಹೇಳಿದ್ದಾರೆ. ನಾವೊಬ್ಬರೇ ಇಲ್ಲಿ ನಡೆಯುವ ಹಾಗಿದ್ದರೆ ನಮಗೆ ತಪ್ಪು ದಾರಿಯಲ್ಲಿ ಹೋಗುವೆವೇನೋ ಎಂದು ಭಯವಾಗಬಹುದು. ಆದರೆ ಈ ಹಿಂದೆ ಅನೇಕರು ಈ ಹಾದಿ ಹಿಡಿದು ಸಫಲರಾಗಿದ್ದಾರೆ. ಆದ್ದರಿಂದ ನಾವೂ ನಿರ್ಭಯವಾಗಿ ಹೋಗಬಹುದು. ನಮ್ಮ ಒಳಿತಿಗಾಗಿ ಅವರು ತಮ್ಮ ಅನುಭವದಿಂದ ನುಡಿದ ಉಪದೇಶ ವಾಕ್ಯವಿದು.

ಕಲ್ಲಾಗಿ ಮಾಡೆಮ್ಮ ಕಾಯವನು : ಆರೋಗ್ಯವೇ ಭಾಗ್ಯ. "ಶತಂ ಜೀವಶರದೋ ವರ್ಧಮಾನಃ ಶತಂ ಹೇಮಂತಾನ್ ಶತಮುವಸಂತಾನ್" ಎಂಬಂತೆ ನೂರು ಶರದೃತುಗಳಷ್ಟೋ ನೂರು ವಸಂತಋತುಗಳಷ್ಟೋ ಕಾಲ ದೈಹಿಕ ಹಾಗೂ ಮಾನಸಿಕ ಪೀಡೆಗಳಿಗೆ ತುತ್ತಾಗಿ ಬಾಳಿದರೆ ಸಾಲದು. ಬಾಳಿದಷ್ಟು ಕಾಲವೂ ನಿರೋಗ ದೃಢಕಾಯರಾಗಿ ಬಾಳಬೇಕು. ಆದ್ದರಿಂದಲೇ ಅಥರ್ವವೇದದ ಋಷಿಯೊಬ್ಬ "ಅಶ್ಮಾನಂ ತನ್ವಂ ಕೃಧಿ" [ಅ. ವೇ. 1. 2. 2] "ಕಲ್ಲಾಗಿ ಮಾಡೆಮ್ಮ ಕಾಯವನು," ಎಂದು ತಾನು ನಂಬಿದ ದೇವತೆಯನ್ನು ಪ್ರಾರ್ಥಿಸುತ್ತಾನೆ. ಆದ್ದರಿಂದಲೇ ಅಥರ್ವ ವೇದದ ಮತ್ತೊಂದು ಮಂತ್ರದಲ್ಲಿ ಒಬ್ಬ ವ್ಯಕ್ತಿ ತನ್ನ ಮಗನನ್ನು ಕುರಿತು:

ಏಹ್ಯಶ್ಮಾನಮಾತಿಷ್ಠ ಅಶ್ಮಾ ಭವತು ತೇ ತನೂಃ ।
ಕೃಣ್ವನ್ತು ವಿಶ್ವೇದೇವಾಃ ಆಯುಷ್ಟೇ ಶರದಃಶತಮ್ ॥ [ಅ.ವೇ. 2-13-4]

"ಮಗನೆ, ಬಾ ; ಕಲ್ಲಮೇಲೆ ಬಂದು ನಿಲ್ಲು. ನಿನ್ನ ದೇಹವು ಕಲ್ಲಿನಂತೆ ದೃಢವಾಗಲಿ. ಎಲ್ಲ ದೇವತೆಗಳೂ ನಿನಗೆ ನೂರು ಶರತ್ಕಾಲಗಳ ಆಯುಸ್ಸನ್ನು ಕರುಣಿಸಲಿ," ಎಂದು ಪ್ರಾರ್ಥಿಸುತ್ತಾನೆ. ಹೀಗೆ ನಮ್ಮ ಪ್ರಾಚೀನರು ಹುಟ್ಟಿದ ಘಳಿಗೆಯಲ್ಲಿಯೇ ತಮ್ಮ ಎಳೆಗೂಸು ವಜ್ರಕಾಯನಾಗಬೇಕು ; "ಆನೋಭದ್ರಾಃ ಕ್ರತವೋ ಯಂತು ವಿಶ್ವತಃ", ಎಂಬಂತೆ ಎಲ್ಲೆಡೆಯಿಂದಲೂ

ಒಳ್ಳೆಯುದನ್ನು ಸ್ವಾಗತಿಸುವ ಹೃದಯವಂತಿಕೆಯನ್ನು, ವಿಶಾಲಭಾವನೆಯನ್ನು ಬೆಳೆಸಿಕೊಳ್ಳಬೇಕೆಂದು ಬಯಸಿ ಸಂದೇಶ ನೀಡಿದರು.

ರಾಷ್ಟ್ರೀಯ ಏಕತೆ: ಅನೇಕತೆಯಲ್ಲಿ ಏಕತೆಯನ್ನು ಕಾಣುವುದು ಭಾರತೀಯರ ವೈಶಿಷ್ಟ್ಯ. ಭಾರತದ ದರ್ಶನ, ತತ್ತ್ವಶಾಸ್ತ್ರಗಳ ಗುರಿಯೂ ಇದೇ. "ವಸುಧೈವ ಕುಟುಂಬ" ಎಂಬ ಉದಾತ್ತವಾದ, ಮಹೋನ್ನತವಾದ ಕಲ್ಪನೆ ನಮ್ಮ ಪೂರ್ವಜರದು. "ಮಾತಾಭೂಮಿಃ ಪುತ್ರೋಹಂ ಪೃಥಿವ್ಯಾಃ" ಪೃಥ್ವಿಯೇ ನನ್ನ ತಾಯಿ, ನಾನು ಆಕೆಯ ಪುತ್ರ" ಎಂಬ ಗೌರವದ ಹೆಮ್ಮೆಯ ಭಾವನೆ ಅವರದು. ಹೀಗಿರುವಾಗ ಪ್ರಾಂತೀಯತೆಯ ಅಥವಾ ಭಾಷಾವಾರು ಭಾವನೆಯ ಸಂಕುಚಿತ ವ್ಯಾಮೋಹಕ್ಕೆ ಎಡೆಯಲ್ಲಿ ? ಅಥರ್ವವೇದದ ಒಂದು ಮಂತ್ರ ಈ ಏಕತೆಯ ಸಂದೇಶವನ್ನು ಬಲು ಮಾರ್ಮಿಕವಾಗಿ ನೀಡಿದೆ :

ಜನಂ ಬಿಭ್ರತೀ ಬಹುಧಾ ವಿವಾಚಸಂ ನಾನಾ ಧರ್ಮಾಣಂ ಪೃಥಿವೀ
ಯಥೌಕಸಮ್ ।
ಸಹಸ್ರಂಧಾರಾ ದ್ರವಿಣಸ್ಯಮೇ ದುಹಾಮ್ ಧ್ರುವೇವ ಧೇನುರನಪಸ್ಫುರನ್ತೀ ॥
[ಅ.ವೇ.]

ಹಲವಾರು ಧರ್ಮಗಳಿಗೆ ಪಂಥಗಳಿಗೆ ಪೃಥ್ವಿ ಆಶ್ರಯದಾತೆ. ಭಾಷೆಗಳಿಗಂತೂ ಮಿತಿಯೇ ಇಲ್ಲ. ಆದರೆ ಅಖಂಡವಾದ ಈ ಪೃಥ್ವಿಯನ್ನು ಆಶ್ರಯಿಸಿರುವ ಮಾನವರು ಭಾಷೆ–ಧರ್ಮಗಳ ಕ್ಷುಲ್ಲಕವಾದ ಸಂಕುಚಿತ ಭಾವನೆಗಳಿಗೆ ಗಮನ ಕೊಡಬಾರದು. ಸಹಸ್ರಧಾರೆಯಾಗಿ ಹರಿದಿರುವ ಆಕೆಯ ಅಪಾರ ಸಂಪತ್ತನ್ನು ಎಲ್ಲರೂ ಸಮಾನವಾಗಿ ಅನುಭವಿಸಬೇಕು. ರಾಷ್ಟ್ರೀಯ ಏಕತೆಗೆ, ವಿಶ್ವಶಾಂತಿಗೆ ಇದೇ ತಾರಕಮಂತ್ರ. ಈ ಮಂತ್ರಾರ್ಥವನ್ನು ಮೈಗೂಡಿಸಿಕೊಂಡು ನಮ್ಮ ನಡೆನುಡಿಗಳಲ್ಲಿ ಅದನ್ನು ಆಚರಣೆಗೆ ತರುವ ಆವಶ್ಯಕತೆ ಇಂದು ಎಂದಿಗಿಂತಲೂ ಹೆಚ್ಚಾಗಿದೆ.

ಮೈತ್ರಿಭಾವ : ರಾಷ್ಟ್ರೀಯ ಏಕತೆಯನ್ನು ಸಾಧಿಸುವ ಈ ಭಾವ ದೃಢವಾಗುವುದು ಪರಸ್ಪರ ಮೈತ್ರಿಯಲ್ಲಿ. ಎಲ್ಲರ ಮನಗಳೂ ಹತ್ತಿರವಾಗಿ, ಸಂಘಶಕ್ತಿ ಮಾಡಲು ಈ ಮೈತ್ರಿಯೇ ನೆಲಗಟ್ಟು. ಪ್ರಜಾಪ್ರಭುತ್ವದ ಇಂದಿನ ಯುಗದಲ್ಲಂತೂ ಸಂಘಶಕ್ತಿಯ ಸ್ಥಾನ ತುಂಬ ಹಿರಿದಾದುದು. ಮೈತ್ರಿಯಿಂದ ಸಂಘಟನಾಶಕ್ತಿಯುದಿಸಿ, ಅದು ಕ್ರಮೇಣ ಬೆಳೆದು ಕೇವಲ ಪ್ರಾಂತ್ಯ ದೇಶಗಳನ್ನಲ್ಲ, ಇಡೀ ವಿಶ್ವವನ್ನೇ ಒಂದಾಗಿ ಬೆಸೆದೀತು. ಈ ರಹಸ್ಯವನ್ನು ವೈದಿಕ ಋಷಿಗಳರಿತಿದ್ದರು. ಋಗ್ವೇದದ ಕೊನೆಯ ಭಾಗದ ಈ ಮಂತ್ರಗಳಲ್ಲಿ ಅವರು ಮೈತ್ರಿಭಾವದ ಹಾಗೂ ಐಕ್ಯಮತದ ಸಂದೇಶವನ್ನು ನೀಡಿದ್ದಾರೆ :

ಸಂಗಚ್ಛಧ್ವಂ ಸಂವದಧ್ವಂ ಸಂವೋ ಮನಾಂಸಿ ಜಾನತಾಮ್ ।
ದೇವಾ ಭಾಗಂ ಯಥಾ ಪೂರ್ವೇ ಸಂಜಾನಾನಾ ಉಪಾಸತೇ ॥
[ಋ.ವೇ. 10-19-2]

"ನೀವು ಯಾವಾಗಲೂ ಜೊತೆಯಲ್ಲೇ ಇರಿ. ಪರಸ್ಪರ ವಿರೋಧಭಾವವನ್ನು ತ್ಯಜಿಸಿ ; ಒಂದೇ ವಿಧವಾಗಿ ಮಾತನ್ನಾಡಿ. ನಿಮ್ಮ ಮನಸ್ಸುಗಳು ಪರಸ್ಪರ ವೈಷಮ್ಯವನ್ನು ಮರೆತು ಒಂದೇ ವಿಧವಾದ ಮಾರ್ಗದಲ್ಲಿ ಪ್ರವೃತ್ತವಾಗಲಿ–ದೇವತೆಗಳು ಹೇಗೆ ಐಕಮತ್ಯದಿಂದ ಕೂಡಿ

ತಮ್ಮ ಪಾಲಿನ ಹವಿರ್ಭಾಗವನ್ನು ಸ್ವೀಕರಿಸುತ್ತಾರೋ ಹಾಗೆಯೇ ನೀವೂ ಐಕಮತ್ಯದಿಂದ ಸಾಮಾಜಿಕ ಜೀವನದ ಸುಖಸಂತೋಷಗಳನ್ನನುಭವಿಸಿ."

ನಮ್ಮ ನಡೆ ಒಂದಾಗಬೇಕು ; ನುಡಿ ಒಂದಾಗಬೇಕು; ಭಿನ್ನಾಭಿಪ್ರಾಯಗಳನ್ನು ದೂರ ವಿಡಬೇಕು. ಜೀವನದ ಸುಖಸಂತೋಷಗಳನ್ನು ಸಾಮೂಹಿಕವಾಗಿ ಅನುಭವಿಸಬೇಕು. ಈ ಉದಾತ್ತ ಕಲ್ಪನೆ ಈ ಮಂತ್ರದಲ್ಲಿ ಅಡಕವಾಗಿದೆ ! ಇಂತಹ ಮೈತ್ರಿ ಸಂಘಟನೆಗಳಿದ್ದರೆ ವ್ಯಕ್ತಿಯ ಸಾಮಾಜಿಕ ಜೀವನ ಸುಗಮ, ಉಲ್ಲಾಸಪೂರ್ಣ.

ಈ ಮೈತ್ರಿ ಕೇವಲ ಬಾಹ್ಯಾಡಂಬರವಾದರೆ ಸಾಲದು ; ಹೃದಯಾಂತರಾಳದಿಂದ ಹೊರಹೊಮ್ಮಬೇಕು. ಒಂದು ಸಮಾಜದಲ್ಲಿ ಸಾಮೂಹಿಕವಾಗಿ ಬಾಳುವ ಎಲ್ಲ ವ್ಯಕ್ತಿಗಳ ಹೃದಯದ ತುಡಿತ-ಮಿಡಿತಗಳಲ್ಲೂ ಸಮಾನವಾದ ಸಂವೇದನೆ ಇರಬೇಕು :

ಸಮಾನೀವ ಆಕೂತಿಃ ಸಮಾನಾ ಹೃದಯಾನಿ ವಃ ।
ಸಮಾನಮಸ್ತು ವೋ ಮನೋ ಯಥಾವಃ ಸು ಸಹಾಸತಿ ॥

[ಋ. ವೇ. 10.191.4]

"ನಮ್ಮ ಉದ್ದೇಶ ಒಂದೇ ವಿಧವಾಗಿರಲಿ; ನಮ್ಮ ಹೃದಯದ ಬಯಕೆಗಳು ಒಂದೇ ವಿಧವಾಗಿರಲಿ. ನಮ್ಮ ಅಂತರಂಗದ ಅಭಿಪ್ರಾಯವೂ ಒಂದೇ ವಿಧವಾಗಿರಲಿ."

ಇಂತಹ ಮೈತ್ರಿಯನ್ನು ಕೇವಲ ಮನುಷ್ಯಮಾತ್ರಕ್ಕೆ ಸೀಮಿತವಾಗಿರಿಸದೆ, ಪ್ರಾಣಿ ವರ್ಗಕ್ಕೂ ವಿಸ್ತರಿಸುವ ಹೃದಯವೈಶಾಲ್ಯ ನಮ್ಮ ಪೂರ್ವಜರದು :

ಮಿತ್ರಸ್ಯ ಮಾ ಚಕ್ಷುಷಾ ಸರ್ವಾಣಿ ಭೂತಾನಿ ಸಮೀಕ್ಷಂತಾಮ್।
ಮಿತ್ರಸ್ಯಾಹಂ ಚಕ್ಷುಷಾ ಸರ್ವಾಣಿ ಭೂತಾನಿ ಸಮೀಕ್ಷೇ ॥ [ಅ.ವೇ.]

"ಎಲ್ಲ ಪ್ರಾಣಿಗಳೂ ನನ್ನನ್ನು ಗೆಳೆಯನನ್ನಾಗಿ ಕಾಣಲಿ. ನಾನೂ ಎಲ್ಲ ಪ್ರಾಣಿ ಗಳನ್ನೂ ಗೆಳೆಯರನ್ನಾಗಿ ಕಾಣುತ್ತೇನೆ." ಅವರ ಉಪದೇಶದ ವೈಖರಿ ಹೀಗಿದೆ:

ಸಹೃದಯಂ ಸಾಂಮನಸ್ಯಮವಿದ್ವೇಷಂ ಕೃಣೋಮಿವಃ।
ಅನ್ಯೋ ಅನ್ಯಮಭಿಹರ್ಯತ ವತ್ಸಂ ಜಾತಮಿವಾಘ್ನ್ಯಾ॥ [ಅ.ವೇ.]

"ನಿಮ್ಮ-ನಿಮ್ಮೊಳಗೆ ಜಗಳವಾಡುವ ಮನುಷ್ಯರೆ, ನಿಮ್ಮೊಳಗಿರುವ ಪರಸ್ಪರ ದ್ವೇಷ ಭಾವವನ್ನು ಅಳಿಸಿಹಾಕಿ. ಹಸು ತನ್ನ ಕರುವನ್ನು ವಾತ್ಸಲ್ಯದಿಂದ ಪ್ರೀತಿಸುವಂತೆ ನೀವೂ ಒಬ್ಬರನ್ನೊಬ್ಬರು ಪ್ರೀತಿಸಿ."

ಹೀಗೆ ವಿಶ್ವವಿಶಾಲವಾದ ಈ ಸಮಾನತೆಯ ಭಾವನೆ ಅಂತರಂಗದಿಂದ ಸ್ಫುರಿಸಬೇಕು. ಎಲ್ಲರ ಹೃನ್ಮನಗಳೂ ನೀರಕ್ಷೀರದಂತೆ ಒಂದಾಗಿ ಬೆಸೆಯಬೇಕು. ಹಸು-ಕರುಗಳ ವಾತ್ಸಲ್ಯ ಪೂರ್ಣ ಮೈತ್ರಿ ಬೇರೂರಬೇಕು. ಇಂತಹ ಮೈತ್ರಿ ಭಾವವನ್ನೂ ಐಕಮತ್ಯವನ್ನೂ ಸಾಧಿಸಿ ದರೆ ವ್ಯಕ್ತಿಯ ಜೀವನ ಆನಂದಮಯವಾಗುತ್ತದೆ; ಸಮಷ್ಟಿಯ ಬದುಕು ಸತ್ತ್ವಪೂರ್ಣ ವಾಗುತ್ತದೆ.

ಪುರುಷಾರ್ಥ ಸಾಧನೆ : ಆಲಸ್ಯವನ್ನು ತೊರೆದು ಉತ್ತಮ ವ್ಯವಹಾರಸಿದ್ಧಿಗಾಗಿ ಮನ, ವಚನ, ಕಾಯ ಹಾಗೂ ಧನದಿಂದ ಮಾಡಬೇಕಾದ ಅವಿರತ ಉದ್ಯೋಗವನ್ನೇ ಪುರು ಷಾರ್ಥ ಎನ್ನುತ್ತಾರೆ. ವೇದಗಳಲ್ಲಿ ಪುರುಷಾರ್ಥದ ಮಹಿಮೆಯನ್ನು ಇನ್ನಿಲ್ಲದಂತೆ ವರ್ಣ

ಸಿದ್ದಾರೆ. ಯಾವಾಗಲೂ ಪುರುಷಾರ್ಥವನ್ನು ಸಾಧಿಸುತ್ತಿರುವಂತೆ ಸಂದೇಶ ನೀಡಿದ್ದಾರೆ. ಅಥರ್ವವೇದದ ಈ ಮಂತ್ರದಲ್ಲಿ ಜೀವನದ ಅದೆಂತಹ ಸುಂದರ ಚಿತ್ರಣವಿದೆ.

ಉದ್ಯಾನಂ ತೇ ಪುರುಷ ನ್ಯಾವಯಾನಂ ಜೀವಾತುಂ ತೇ ದಕ್ಷತಾತಿಂ ಕೃಣೋಮಿ।
ಆಹಿ ರೋಹ ಹೇಮಮಮೃತಂಸುಖಂ ರಥಂ ಅಥಜಿರ್ವಿರ್ಜಿದಥಮಾವದಾಸಿ

[ಅ.ವೇ. 8.1.6]

"ಓ ಪುರುಷನೇ, ನೀನು ಮೇಲೇರಬೇಕು; ಕೆಳಕ್ಕೆ ಬೀಳಬಾರದು. ಪುರುಷಸಿಂಹನಾಗಿದ್ದೂ ಷಂಡನಂತೆ ಎದೆಗುಂದಿ ಅಧೀರನಾಗಿದ್ದೀಯೆ. ಪೌರುಷ, ಗಂಡಸುತನ ಕರ್ತವ್ಯ ಪಾಲನೆಯಲ್ಲಿದೆ ; ಕರ್ತವ್ಯವಿಮುಖನಾಗುವುದರಲ್ಲಿ, ಧರ್ಮಚ್ಯುತನಾಗುವುದರಲ್ಲಿ, ಇಲ್ಲ." ಅಥರ್ವವೇದದಲ್ಲಿಯೇ ಮತ್ತೊಂದೆಡೆ ಹೇಳಿದಂತೆ :

"ಆರೋಹಣಮಾಕ್ರಮಣಂ ಜೀವತೋ ಜೀವತೋ ಅಯನಮ್"

"ಮಗು ! ಉಸಿರಾಡುವ ಜೀವಿಗಳೆಲ್ಲದರ ಗುರಿ ಮೇಲೇಳುವುದು, ಮುಂದೆ ಸಾಗುವುದು. ಪ್ರಭುವಿನ ಸೃಷ್ಟಿಯನ್ನೇ ನೋಡು ; ಇದರಲ್ಲಿ ಮುಂದುವರಿಯುವ, ಊರ್ಜಿತ ಭಾವ ತುಂಬಿದೆ." ಎಲ್ಲ ಪದಾರ್ಥಗಳಲ್ಲೂ ಊರ್ಧ್ವಗಮನದ ಪುರುಷಾರ್ಥವಿದೆ. ಅವನತಿ ಜಡದ ಧರ್ಮ. ಚೇತನಕ್ಕೆ ಪತನವೆಲ್ಲಿಯದು? ಮುಂದುವರಿಯುತ್ತಲೇ ಇರುವುದು ಚೇತನದ ಧರ್ಮ. ಚೇತನದಲ್ಲಿ ಪ್ರಗತಿಶೀಲತೆ ಇದೆ; ಅದು ಸ್ವತಃ ಗತಿಶೀಲವಾಗಿರುತ್ತದೆ. ಅಥವಾ ಉಳಿದವುಗಳಿಗೆ ಗತಿ ನೀಡುತ್ತದೆ. ಆದ್ದರಿಂದಲೇ ವೇದಮಾತೆ ಸ್ಫೂರ್ತಿದಾಯಕವಾಗಿ, "ಉದ್‌ಯಾನಂ ತೇ ಪುರುಷನಾವಯಾನಮ್," ಎನ್ನುತ್ತಾಳೆ.

ಮಗ ಹೇಳಬಹುದು : "ಅಮ್ಮಾ ! ನಾನು ಸೋತೆ ; ಗೆಲ್ಲುವುದು ಹೇಗೆ ? ನನ್ನ ಕೈಯಲ್ಲಿ ಏನೂ ಆಗದು. ನನ್ನಲ್ಲಿ ಏನು ತಾನೆ ಸಾಧನವಿದೆ?" ವೇದಮಾತೆ ಬೆನ್ನು ತಟ್ಟಿ ಹೇಳುತ್ತಾಳೆ : "ಜೀವಾತುಂ ತೇ ದಕ್ಷತಾತಿಂ ಕೃಣೋಮಿ." "ನಾನು ನಿನಗೆ ಬದುಕಲು ದಕ್ಷತೆಯ ಸಾಮಗ್ರಿ ನೀಡುತ್ತೇನೆ. ಇಗೋ, ಮೊಟ್ಟ ಮೊದಲು ಶರೀರವೆಂಬ ರಥವನ್ನು ಕೊಡುತ್ತೇನೆ." "ಆ ಹಿ ರೋಹೇಮಮ್" "ಏರು ! ಈ ತೇರನೇರು !" "ಈ ಶರೀರ ಉಪೇಕ್ಷೆಗೆ ತಕ್ಕುದಲ್ಲ, ಪೂರ್ವ ಜನ್ಮದ ಪುಣ್ಯಪರಿಪಾಕದಿಂದ ಬಂದುದಿದು. ಈ ರಥದ ಮಹಿಮೆಯನ್ನು ತಿಳಿ." ಯಜುರ್ವೇದ ಕೂಡ ಈ ವಿಷಯದಲ್ಲಿ ಹೀಗೆ ಹೇಳುತ್ತದೆ :

ರಥೇತಿಷ್ಠನ್ನಯತಿ ವಾಜಿನಃ ಪುರೋ
ಯತ್ರ ಯತ್ರ ಕಾಮಯತೇ ಸುಷಾರಥಿಃ ॥ [ಯ.ವೇ. 19-42]

"ಭಗವಂತನ ಸೃಷ್ಟಿಯಲ್ಲಿ ಮಾನವಶರೀರ ಸರ್ವೋತ್ತಮ ಸೃಷ್ಟಿ. ಆದ್ದರಿಂದ ಈ ಶರೀರವೆಂಬ ರಥದಲ್ಲಿ ಕುಳಿತು ಉತ್ತಮ ಸಾರಥಿಯುಳ್ಳ ಕುದುರೆಗಳನ್ನು (ಇಂದ್ರಿಯಗಳನ್ನು) ಮುಂದೆ ಹೂಡು. ಅವು ನೀನು ಹೇಳಿದ ಕಡೆಗೆ ನಿನ್ನನ್ನು ಕೊಂಡೊಯ್ಯುವುವು." ಈ ರಥವನ್ನು ಏರಿ, ಅತ್ಯುತ್ತಮ ಸಾರಥಿಯನ್ನು ಇಟ್ಟುಕೊಂಡರೆ ಇಚ್ಛೆ ಬಂದಲ್ಲಿಗೆ ಹೋಗಬಹುದು. ಆದ್ದರಿಂದ ಇದನ್ನು "ಅಮೃತಂ ಸುಖಂ ರಥಂ," ಮೋಕ್ಷ ಮತ್ತು ಎಲ್ಲ ಪ್ರಾಪಂಚಿಕ ಸುಖವನ್ನು ನೀಡುವ ರಥ ಎಂದು ಕರೆದಿದೆ. ಇದನ್ನು ಏರಿ ನೀನು "ಜಿರ್ವಿ"-ಸ್ತುತಿಯೋಗ್ಯನಾಗು ; ಮತ್ತು "ವಿದಥಮಾವದಾಸಿ"-ನಿನ್ನ ಪೂರ್ಣ ಪುರುಷಾರ್ಥದಿಂದ ಎಂದರೆ ಮನ, ವಚನ, ಕಾಯ ಈ

ರೀತಿ ತ್ರಿಕರಣಪೂರ್ವಕವಾಗಿ ಸಾತ್ತ್ವಿಕ ಜೀವನವನ್ನು ಸಾಗಿಸುತ್ತ ಜ್ಞಾನಪ್ರಾಪ್ತಿಯ ಸಾಧನವನ್ನು ಜಗತ್ತಿಗೆ ತಿಳಿಯಹೇಳು.

ಆತ್ಮದ ಏಕತೆ: ವೇದಗಳು ಆತ್ಮದ ಏಕತೆಯನ್ನು ಒತ್ತಿ ಹೇಳುತ್ತವೆ. ಬಾಳನ್ನು ಸಾರ್ಥಕಗೊಳಿಸುವ ಈ ತತ್ತ್ವ ತಿಳಿದರೆ ಮನುಷ್ಯ ಎಲ್ಲರನ್ನೂ ಸೌಹಾರ್ದದಿಂದ ಕಂಡಾನು. "ಎಲ್ಲ ಜೀವದೊಳು ಒಂದೇ ಉಸಿರು ನಿನ್ನದು" ಎಂಬುದನ್ನು ಅರಿತವನು ಯಾರ ಮೇಲೂ ಸಿಟ್ಟಾಗಲಾರ. ಆತ ಯಾರನ್ನೂ ಹೊಡೆಯಲಾರ. ಯಾರನ್ನೂ ಕಡಿಯಲೊಲ್ಲ, ಬೈಯುವುದಿಲ್ಲ. ಯಜುರ್ವೇದದ ಒಂದು ಮಂತ್ರ ಅದನ್ನೇ ಹೀಗೆ ಹೇಳುತ್ತದೆ :

ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂದ್ವಿಜಾನತಃ ।
ತತ್ರ ಕೋ ಮೋಹಃ ಕಃ ಶೋಕಃ ಏಕತ್ವಮನುಪಶ್ಯತಿ ॥

"ಎಲ್ಲ ಪ್ರಾಣಿಗಳಲ್ಲೂ ಒಂದೇ ಆತ್ಮನನ್ನು ಯಾರು ನೋಡುವನೋ ಅವನಿಗೆ ಎಂಥ ಮೋಹ? ಎಂಥ ಶೋಕ?"

ನಾವು ಇದುವರೆಗೂ ಗಮನಿಸಿದಂತೆ ವೇದಗಳಲ್ಲಿ ಸುಖೀಜೀವನವನ್ನು ಸಾಧಿಸಲು ಬೇಕಾದ ಸುಮಧುರ ಸಂದೇಶವಿದೆ. ವೈದಿಕ ಋಷಿಗಳ ಜೀವನದರ್ಶನ ಪರಿಪೂರ್ಣ, ಅರ್ಥಪೂರ್ಣ. ಸಾವಿರಾರು ವರ್ಷಗಳ ಹಿಂದೆ ಅವರು ಅನುಭವಿಸಿ ನುಡಿದ ಮಾತುಗಳು ಇಂದಿಗಷ್ಟೇ ಅಲ್ಲ, ಎಂದೆಂದಿಗೂ ಅನ್ವಯಿಸುವಂಥವು.

ಧರ್ಮಪಾಲನೆಯನ್ನು, ಸದಾಚಾರವನ್ನು, ಪಾಪದಿಂದ ದೂರ ಇರುವಿಕೆಯನ್ನು ಒತ್ತಿ ಹೇಳುತ್ತದೆ, ವೇದ. ವೈದಿಕ ಋಷಿಗಳು ಬದುಕನ್ನು ಅಸಡ್ಡೆಮಾಡಿದ್ದರು ಎಂದು ಇದರ ಅರ್ಥವಲ್ಲ. ಮನುಷ್ಯ ಸರಿಯಾದ ರೀತಿಯಲ್ಲಿ ವಿಕಾಸಗೊಳ್ಳಲಿ ಎಂಬುದು ಅವರ ಬಯಕೆ.

ಜೀವನದ ಇಡೀ ಶಾಸ್ತ್ರವಿದೆ ವೇದದಲ್ಲಿ. ಅದು ಕೇವಲ ಆತ್ಮ-ಪರಮಾತ್ಮರ ವರ್ಣನಾಗ್ರಂಥವಲ್ಲ ; ಯಜ್ಞ-ಧರ್ಮಗಳ ಪ್ರಚಾರ ಸಾಧನವಲ್ಲ. ಆನಂದಮಯವಾದ ಸುಖೀಜೀವನ ನಡೆಸಲು ಪ್ರೇರಣೆ ನೀಡುವ ಮೇರುಕೃತಿ.

ಭಾರತದ ದರ್ಶನಗಳು ಪರಸ್ಪರ ಸಂಬಂಧವೇ ಇಲ್ಲದೆ ಭಿನ್ನ ಭಿನ್ನ ಸಂಪುಟಗಳಲ್ಲಿ ಬೆಳೆದ ವೆಂದೂ ಕಟ್ಟುನಿಟ್ಟಾದ ತಾರ್ಕಿಕ ವಿಚಾರದ ಆಧಾರದ ಮೇಲೆ ಒಂದು ಸರ್ವಾನ್ವಯಿ ದರ್ಶನ ವನ್ನು ರೂಪಿಸಲು ಭಾರತದಲ್ಲಿ ಪ್ರಯತ್ನಿಸಲೇ ಇಲ್ಲವೆಂದೂ ಭಾವಿಸಬಾರದು. ತಾತ್ತ್ವಿಕ ವಾದ ವಿವಾದಗಳಲ್ಲಿ ಜ್ಞಾನದ ಮೂಲಗಳೆಷ್ಟೆಂಬುದನ್ನು ನಿರ್ಣಯಿಸುವುದರಲ್ಲಿಯೂ ಸತ್ಯದ ಸ್ವರೂಪವೇನೆಂಬುದನ್ನು ನಿರೂಪಿಸುವುದರಲ್ಲಿಯೂ ಬಲವಾದ ಪೊಡೆತಗಳನ್ನು ಕೊಡುವುದು ತೆಗೆದುಕೊಳ್ಳುವುದು ಭಾರತದಲ್ಲಿ ಒಂದು ವಾಡಿಕೆಯೇ ಆಗಿಹೋಗಿತ್ತು. ತಾರ್ಕಿಕ ವಿಚಾರ ಮಾರ್ಗದ ನಿಯಮಗಳು ಎಲ್ಲರಿಗೂ ಒಂದೇ ಎಂಬ ನಂಬಿಕೆಯಿಲ್ಲದಿದ್ದರೆ, ಇಂತಹ ವಾದ ವಿವಾದಗಳು ಅರ್ಥಶೂನ್ಯವಾಗುತ್ತಿದ್ದುವು. ವಾಸ್ತವವಾಗಿ, ಬೌದ್ಧಿಕ ದೃಷ್ಟಿಯಿಂದ ತಾನೊಂದೇ ಅತ್ಯಂತ ಸುಸಂಗತವೂ ಸಮಗ್ರವೂ ಆದದ್ದೆಂದು ಒಂದೊಂದು ದರ್ಶನವೂ ಹೇಳಿಕೊಳ್ಳುತ್ತಿತ್ತು. ಒಬ್ಬನು ತನ್ನ ಆಧ್ಯಾತ್ಮಿಕ ಚಿಂತನವನ್ನು ಯಾವುದೇ ಸಂಪ್ರದಾಯದಲ್ಲಿ ಆರಂಭಿಸಬಹುದು, ಯಾವುದೇ ಸಾಕ್ಷಾತ್ಕಾರದಲ್ಲಿ ಮುಗಿಸಬಹುದು ; ಆದರೆ ಈ ಉಪಕ್ರಮ ಹಾಗೂ ಉಪಸಂಹಾರ ಗಳ ನಡುವೆ ಮನನದ, ಎಂದರೆ ತಾರ್ಕಿಕ ವಿಚಾರದ, ಪ್ರಪಂಚವೊಂದು ಇದ್ದೇ ಇರುತ್ತಿತ್ತು. ಇಲ್ಲದಿದ್ದರೆ, ಅವನ ಶ್ರದ್ಧೆಯು ಕೇವಲ ಮೂಢನಂಬಿಕೆಯಾಗುತ್ತಿತ್ತು, ಅವನ ಸಾಕ್ಷಾತ್ಕಾರ ಬರಿಯ ಡಂಭವಾಗುತ್ತಿತ್ತು. ಭಾರತದ ತತ್ತ್ವಶಾಸ್ತ್ರದಲ್ಲಿ ತಾರ್ಕಿಕ ಸಾಹಿತ್ಯವು ಅಗಾಧವಾಗಿದೆ. ಈ ಸಾಹಿತ್ಯವು ಚಿಂತನದ ಓಜಸ್ಸು ಮತ್ತು ತಾರ್ಕಿಕವಾಗಿ ಊರ್ಜಿತವಾಗದ ಯಾವುದೇ ವಿಷಯಕ್ಕೆ ತನಗೆ ಶರಣಾಗೆಂದು ಕೇಳುವ ಅಧಿಕಾರವಿಲ್ಲವೆಂಬ ಭಾವನೆಗಳಿಗೆ ಸಾಕ್ಷ್ಯ ನೀಡುತ್ತವೆ. ಸಾಮಾಜಿಕ ಆಚಾರಗಳ ವೈವಿಧ್ಯವು ಮಾತ್ರವಲ್ಲದೆ, ಪಂಥಪಂಥಗಳಲ್ಲಿ ರೂಢಿಯಾಗಿದ್ದ ಪರಸ್ಪರ ಸಂಪರ್ಕವೇ ಕೂಡದೆಂಬ ನಿಷೇಧವೂ ಸಹ ಶಾಸ್ತ್ರೀಯ ದೃಷ್ಟಿಯಿಂದ ನಡೆಯುತ್ತಿದ್ದ ಖಂಡನ ಖಂಡನಗಳನ್ನು ತಪ್ಪಿಸಲಿಲ್ಲ. ತಾತ್ತ್ವಿಕ ಚರ್ಚೆಯಲ್ಲಿ ಸೋತವನು ಮತಾಂತರಗೊಳ್ಳುವುದೂ ಕೂಡ ವಿರಳವೇನೂ ಆಗಿರಲಿಲ್ಲ. ಇಂತಹ ಒಂದು ಬೌದ್ಧಿಕ ಸಂಗ್ರಾಮದಲ್ಲಿ ಜಯಿಸಲ್ಪಟ್ಟಾಗ ಸೋತವನು ಪ್ರಾಮಾಣಿಕನಾಗಿದ್ದರೆ, ತನ್ನ ಪೂರ್ವಸಿದ್ಧಾಂತದ ಮರೆಗೆ ಕಳ್ಳನಂತೆ ಹಿಂದಿರುಗು ತ್ತಿರಲಿಲ್ಲ. ಬ್ರಾಹ್ಮಣ, ಬೌದ್ಧ, ಜೈನ ಧರ್ಮಗಳ ವಿಷಯದಲ್ಲಿ ಮಾತ್ರವೇ ಅಲ್ಲದೆ ಈ ಮಾತು ಒಂದೇ ಧರ್ಮದ ಶಾಖೆಗಳಿಗೂ ತಾತ್ತ್ವಿಕ ನಿಲುವುಗಳಿಗೂ ಅನ್ವಯಿಸುತ್ತದೆ.*

ಹರಿದಾಸ ಭಟ್ಟಾಚಾರ್ಯ

---

* 'ಯುಗಯಾತ್ರೀ ಭಾರತೀಯ ಸಂಸ್ಕೃತಿ'ಯ ಮುನ್ನುಡಿ (ಅನು : ಕೆ. ವಿ. ಶ್ರೀನಿವಾಸ ತಾತಾಚಾರ್ಯ)

ಡಾ. ಎಸ್. ಎಸ್. ವೀರಪ್ಪ

ಮುಕ್ತ ವಿಶ್ವವಿದ್ಯಾಲಯ

ಶಿಕ್ಷಣ ಸೌಲಭ್ಯದ ವಿಸ್ತರಣ ಕಾರ್ಯ ಈ ಶತಮಾನದ ಶಿಕ್ಷಣಕ್ಷೇತ್ರದಲ್ಲಿ ಕಂಡುಬರುವ ಪ್ರಧಾನ ಲಕ್ಷಣ. ಪ್ರಪಂಚದ ಜನಸಂಖ್ಯೆಯಲ್ಲಿ ಸುಮಾರು ಕಾಲುಭಾಗದಷ್ಟು ಈ ಉದ್ಯಮದಲ್ಲಿ ಭಾಗವಹಿಸುತ್ತಿದೆ. ಜನತೆಯ ಸೇವಾಕಾರ್ಯಗಳಲ್ಲೆಲ್ಲ ಶಿಕ್ಷಣಕ್ಕೆ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ರಾಷ್ಟ್ರದ ಧನ ವಿನಿಯೋಗವಾಗುತ್ತಿದೆ. ವಿದ್ಯಾರ್ಥಿಗಳ, ಅಧ್ಯಾಪಕರ ಮತ್ತು ಇತರ ಸಿಬ್ಬಂದಿಯವರ ಸಂಖ್ಯಾಬಾಹುಳ್ಯದಲ್ಲೂ ಅದಕ್ಕಾಗಿ ವಿನಿಯೋಗವಾಗುವ ಧನವ ಪ್ರಮಾಣದಲ್ಲಿ ಇಷ್ಟೊಂದು ಬೃಹದಾಕಾರವನ್ನು ತಾಳಿರುವ ಶಿಕ್ಷಣ ಸ್ವಾಭಾವಿಕವಾಗಿ ಅನೇಕ ಸಮಸ್ಯೆಗಳನ್ನು ಪ್ರದರ್ಶಿಸುತ್ತಿದೆ. ಜೊತೆಗೆ ಆ ಒಂದೊಂದು ಸಮಸ್ಯೆಯೂ ವಿಭಿನ್ನ ಆಯಾಮಗಳ ಹಲವಾರು ಮುಖಗಳನ್ನು ಪ್ರದರ್ಶಿಸುತ್ತದೆ. ಆ ಸಮಸ್ಯೆ ಅವಷ್ಟಕ್ಕೆ ದೂಷ್ಯವೇನಲ್ಲ. ನಡೆವರೆಡಹದೆ ಕುಳಿತರೆಡಹುವರೆ ಎಂಬಂತೆ ಮುನ್ನಡೆಯುತ್ತಿರುವ ಶಿಕ್ಷಣಕ್ಷೇತ್ರದಲ್ಲಿ ಅವು ಸ್ವಾಭಾವಿಕ. ಆದರೆ ಅವನ್ನು ಪರಿಶೀಲಿಸಿ ವಿಹಿತವೆನಿಸುವ ಮಾರ್ಗದಲ್ಲಿ ಪರಿಹರಿಸಿಕೊಂಡು ಮುಂದುವರಿಯುವುದು ಶಿಕ್ಷಣಕ್ಷೇತ್ರವನ್ನು ವ್ಯವಸ್ಥೆಗೊಳಿಸುತ್ತಿರುವ ಆಡಳಿತಗಾರರಿಗೂ ನಿರ್ದೇಶಕರಿಗೂ ಅಗತ್ಯವಾಗಿ ಇರಬೇಕಾದ ಜಾಣತನ.

ಇಪ್ಪತ್ತನೆಯ ಶತಮಾನದ ಪ್ರಥಮ ಪಾದದಲ್ಲಿ ಪ್ರಾಥಮಿಕ ಶಿಕ್ಷಣ ಸೌಲಭ್ಯದ ವಿಸ್ತರಣ ಕಾರ್ಯವೂ ಎರಡು ಮತ್ತು ಮೂರನೆಯ ಪಾದದ ಆರಂಭದಲ್ಲಿ ಪ್ರೌಢಶಿಕ್ಷಣದ ವಿಸ್ತರಣ ಕಾರ್ಯವೂ ಅನಂತರ ಉನ್ನತ ಶಿಕ್ಷಣ ಸೌಲಭ್ಯದ ವಿಸ್ತರಣದ ಕಾರ್ಯವೂ ತೀವ್ರ ವೇಗದಲ್ಲಿ ನಡೆದಿವೆ. ಈ ಮಾತು ಭಾರತಕ್ಕೆ ಸಾಮಾನ್ಯವಾಗಿ ಅನ್ವಯಿಸುವುದಾದರೂ ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಅವೆಲ್ಲ ಕ್ಷೇತ್ರಗಳಲ್ಲಿನ ಶಿಕ್ಷಣ ಸೌಲಭ್ಯವೂ ಗಣನೀಯ ಪ್ರಮಾಣದಲ್ಲಿ ಹೆಚ್ಚುತ್ತ ಬಂದಿದೆ. ಮುಖ್ಯವಾಗಿ ಉನ್ನತ ಶಿಕ್ಷಣದ ಸೌಲಭ್ಯ ವಿಸ್ತೀರ್ಣದಲ್ಲೂ ವೈವಿಧ್ಯದಲ್ಲೂ ಮತ್ತಾವ ದೇಶದಲ್ಲೂ ಕಂಡುಬರದಷ್ಟು ಪ್ರಮಾಣದಲ್ಲಿ ಮುನ್ನಡೆ ಸಾಧಿಸಿದೆ. 1947ರಲ್ಲಿ ಕೇವಲ ಹತ್ತೊಂಬತ್ತು ವಿಶ್ವವಿದ್ಯಾಲಯಗಳಿದ್ದ ಭಾರತದಲ್ಲಿ ಈಗ ಅವುಗಳ ಸಂಖ್ಯೆ ನೂರಕ್ಕೂ ಮಿಕ್ಕಿದೆ. ಜೊತೆಗೆ ಒಂಬತ್ತು ಪರಿಗಣಿತ ವಿಶ್ವವಿದ್ಯಾಲಯಗಳೂ ಹತ್ತು ರಾಷ್ಟ್ರೀಯ ಪ್ರಾಮುಖ್ಯದ ಸಂಸ್ಥೆಗಳೂ ಕೆಲವು ರಾಷ್ಟ್ರೀಯ ಪ್ರಯೋಗಾಲಯಗಳೂ ಆ ಮಟ್ಟದ ಶಿಕ್ಷಣವನ್ನೊದಗಿಸುತ್ತಿವೆ. 1947ರಲ್ಲಿದ್ದ 1,395 ಕಾಲೇಜುಗಳ ಸಂಖ್ಯೆ ಈಗ 3,300ಕ್ಕೂ ಹೆಚ್ಚಾಗಿದೆ. ಆಗ ಉನ್ನತ ಶಿಕ್ಷಣ ಪಡೆಯುತ್ತಿದ್ದವರ ಸಂಖ್ಯೆ ಕೇವಲ ಎರಡೂವರೆ ಲಕ್ಷದಷ್ಟಿದ್ದರೆ ಈಗ ಅದು ಮೂವತ್ತುಮೂರು ಲಕ್ಷಕ್ಕೂ ಮಿಕ್ಕಿದೆ. ಇಷ್ಟು ಅಗಾಧ ಪ್ರಮಾಣದಲ್ಲಿ ಬೆಳೆದಿರುವ ಉನ್ನತ ಶಿಕ್ಷಣಕ್ಷೇತ್ರದಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಪ್ರಯತ್ನ ನಡೆಸಿ

ದ್ದರೂ ಅದೇ ಪ್ರಮಾಣದಲ್ಲಿ ಹೆಚ್ಚಿಸುವುದು ಅಸಾಧ್ಯವಾಗಿದೆ. ಕಟ್ಟಡಗಳ ಅಭಾವ, ತಕ್ಕಷ್ಟು ಮಂದಿ ದಕ್ಷ ಅಧ್ಯಾಪಕರ ಕೊರತೆ, ಗ್ರಂಥಾಲಯ ಉಪಕರಣಾದಿಗಳ ಪೂರೈಕೆಯಲ್ಲಿ ನ್ಯೂನತೆ ಇವೇ ಮುಂತಾದ ಅಸಮರ್ಪಕ ಸನ್ನಿವೇಶಗಳು ಹೆಚ್ಚಿಕೊಂಡಿವೆ. ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಖ್ಯೆಯ ಮಿತಿಮೀರಿದ ಹೆಚ್ಚಳದಿಂದಾಗಿ ಶಿಕ್ಷಣದ ಮತ್ತು ಕಲಿವಿನ ಮಟ್ಟಗಳೆರಡರಲ್ಲೂ ಇಳಿತಾಯ ವ್ಯಕ್ತಪಟ್ಟಿದೆ. ಆಡಳಿತದಲ್ಲಿ ದಕ್ಷತೆ ಕಡಮೆಯಾಗಿದೆ. ಇಷ್ಟಕ್ಕೆಲ್ಲ ಕಾರಣವೆನಿಸಿರುವ ಅಂಶಗಳಲ್ಲಿ ವಿದ್ಯಾರ್ಥಿ ಸಂಖ್ಯೆಯಲ್ಲಾಗುತ್ತಿರುವ ಹೆಚ್ಚಳ ಪ್ರಮುಖ ಕಾರಣವೆಂದು ಎಲ್ಲರೂ ಒಪ್ಪಿರುವರು. ಅದನ್ನು ತಪ್ಪಿಸಲು ಕೇವಲ ಆಯ್ದ ಕೆಲವೇ ವಿದ್ಯಾರ್ಥಿಗಳಿಗೆ ಮಾತ್ರ ವಿಶ್ವವಿದ್ಯಾಲಯಕ್ಕೆ ಪ್ರವೇಶ ನೀಡುವುದರ ಮೂಲಕ ಆ ಸಮಸ್ಯೆಯನ್ನು ಪರಿಹರಿಸಬಹುದೆಂದು ಕೆಲವರು ಬಹಳ ಸರಳವಾದ ಪರಿಹಾರವನ್ನು ಸೂಚಿಸಿರುವರು. ಆದರೆ ಇದರಿಂದ ಆಗುವ ಅನಾಹುತ ಸದ್ಯದಲ್ಲಿ ಆಗುತ್ತಿರುವ ಅನಾಹುತಕ್ಕಿಂತ ಹೆಚ್ಚಿನದಾಗುತ್ತದೆಂದು ಇನ್ನೂ ಕೆಲವರು ಇದನ್ನು ಪ್ರತಿಭಟಿಸಿರುವರು. ಆದ್ದರಿಂದ ಈ ಸಮಸ್ಯೆಗೆ ಪರಿಹಾರ ಹುಡುಕುವಾಗ ಪೌರಸತ್ತೆಯಾದ ಭಾರತದಲ್ಲಿ ಜನತೆಯ ಆಶೋತ್ತರಗಳನ್ನು ಗಣನೆಗೆ ತೆಗೆದುಕೊಳ್ಳುವುದು ಅಗತ್ಯವೆನಿಸುತ್ತದೆ.

ಸದ್ಯದಲ್ಲಿ ಉನ್ನತ ಶಿಕ್ಷಣಕ್ಷೇತ್ರದಲ್ಲಿ ಹೆಚ್ಚುತ್ತಿರುವ ವಿದ್ಯಾರ್ಥಿ ಸಂಖ್ಯೆಗೆ ಎರಡು ಪ್ರಮುಖ ಸಾಮಾಜಿಕ ಪ್ರವೃತ್ತಿಗಳು ಕಾರಣವೆನಿಸಿವೆ. ಮೊದಲನೆಯದಾಗಿ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಫಲವಾಗಿ ಶತಮಾನಗಳಿಂದ ಶಿಕ್ಷಣದ ಪ್ರಸಾದವಿಲ್ಲದೆ ಹಿಂದುಳಿದಿದ್ದ ಜನಸಾಮಾನ್ಯರ ಮಕ್ಕಳು ಪ್ರಾಥಮಿಕ ಶಿಕ್ಷಣ ಮುಗಿಸಿ ಪ್ರೌಢಶಿಕ್ಷಣವನ್ನು ಹಾದು ಉನ್ನತ ಶಿಕ್ಷಣಕ್ಕೆ ಬರುವುದು ಹೆಚ್ಚುತ್ತಿದೆ. ಅವರು ತಮ್ಮ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸ್ಥಾನಮಾನಗಳನ್ನು ಉತ್ತಮಪಡಿಸಿಕೊಳ್ಳಲು ಶಿಕ್ಷಣ ಹಾಗೂ ಉನ್ನತ ಶಿಕ್ಷಣ ಪರಿಣಾಮಕಾರಿಯಾದ ಉಪಕರಣವೆಂದು ಖಚಿತಪಡಿಸಿಕೊಂಡಿರುವರು. ಆದ್ದರಿಂದ ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದಿರುವ ಬಹುಸಂಖ್ಯಾತ ಜನತೆಯ ಮಕ್ಕಳೇ ಈ ವಿದ್ಯಾರ್ಥಿ ಸಂಖ್ಯಾಬಲದ ಹೆಚ್ಚಳಕ್ಕೆ ಪ್ರಧಾನ ಕಾರಣವಾಗಿದ್ದಾರೆ. ಬಹುಸಂಖ್ಯೆಯಲ್ಲಿರುವ ಆ ವರ್ಗದ ಜನತೆಯ ಆಶೋತ್ತರವನ್ನು ಈಡೇರಿಸದೆ ಹೋದರೆ ಸರ್ವಸಮಾನತೆಯನ್ನು ಘೋಷಿಸಿರುವ ಭಾರತದಲ್ಲಿ ಸಾಮಾಜಿಕ ನ್ಯಾಯವನ್ನು ದೊರಕಿಸಿದಂತಾಗುವುದಿಲ್ಲ. ಎರಡನೆಯದಾಗಿ ಆಯ್ದ ಕೆಲವರಿಗೇ ಉನ್ನತ ಶಿಕ್ಷಣದ ಸೌಲಭ್ಯವನ್ನು ದೊರಕಿಸುವುದರಿಂದ ಕೇವಲ ಹಿಂದಿನಿಂದ ಶಿಕ್ಷಣ ಸಂಸ್ಕೃತಿ ಕ್ಷೇತ್ರಗಳಲ್ಲಿ ಅನುಭವ ಸಾಧಿಸಿರುವ ಉನ್ನತ ಸಾಮಾಜಿಕ ವರ್ಗದವರೇ ಆಯ್ಕೆಯಾಗಿ ಉನ್ನತ ಶಿಕ್ಷಣಕ್ಕೆ ಬರತಕ್ಕ ಸಂಭವವಿದ್ದು ಮಿಕ್ಕ ಬಹುತೇಕ ಮಂದಿಯ ಮಕ್ಕಳಿಗೆ ಆ ಸೌಲಭ್ಯ ಇಲ್ಲವಾಗುತ್ತದೆ. ಈ ಪರಿಸ್ಥಿತಿ ಮುಂದುವರಿದರೆ ಬಹು ಬೇಗ ಉನ್ನತ ಶಿಕ್ಷಣ ಪಡೆದ ಪದವೀಧರರೆನಿಸಿದವರ ನೂತನ 'ಜಾತಿ'ಯೊಂದರ ಉದಯವಾಗಿ ವರ್ಗರಹಿತ ಸಮಾಜ ರಚನೆಗೆ ಅಡ್ಡಿಯಾಗುತ್ತದೆ. ಆದ್ದರಿಂದ ಹೊಸದಾಗಿ ಉನ್ನತ ಶಿಕ್ಷಣಕ್ಕೆ ಬಂದು ತಮ್ಮ ಜೀವನವನ್ನು ಉತ್ತಮಪಡಿಸಿಕೊಳ್ಳಲು ಯತ್ನಿಸುತ್ತಿರುವ ಕೆಳವರ್ಗದ ಜನತೆಯ ಆಶೋತ್ತರಗಳನ್ನು ಈಡೇರಿಸುವುದು ಅನಿವಾರ್ಯವಾಗಿದೆ.

ವಿದ್ಯಾರ್ಥಿ ಹೆಚ್ಚಳಕ್ಕೆ ಮಹಿಳೆಯರಲ್ಲಿಗಿರುವ ಜಾಗೃತಿ ಮತ್ತೊಂದು ಕಾರಣ. ಜೀವನ

ದಲ್ಲಿ ಯುಗಯುಗಾಂತರಗಳಿಂದ ಪುರುಷರ ಅಡಿಯಾಳಾಗಿ ಬಾಳಿದ ಅವರು ಈಗ ಸಮಾನತೆಯ ಸೌಲಭ್ಯವನ್ನು ಸಾಧಿಸುವ ಕಾರ್ಯದಲ್ಲಿ ನಿರ್ದಿಷ್ಟ ಯತ್ನ ನಡೆಸುತ್ತಿದ್ದಾರೆ. ಈ ಸಮಾನತೆಯ ಸಾಧನೆಗೆ ಸ್ವಾವಲಂಬನೆಯ ಸಾಧನೆ ಅಗತ್ಯವೆನಿಸುತ್ತದೆ. ಅಂಥ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಲು ಉನ್ನತ ಶಿಕ್ಷಣ ಪರಿಣಾಮಕಾರಿಯಾಗಿ ನೆರವಾಗಬಲ್ಲದೆಂಬುದನ್ನು ಅವರು ಅರಿತು ಕೊಂಡಿರುವರು. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಮಹಿಳೆಯರು ಉನ್ನತ ಶಿಕ್ಷಣಕ್ಕೆ ಬರುವುದು ಗಣನೀಯ ಪ್ರಮಾಣದಲ್ಲಿ ಹೆಚ್ಚಿದೆ. 1947ರಲ್ಲಿ ಉನ್ನತ ಶಿಕ್ಷಣದಲ್ಲಿರುವ ವಿದ್ಯಾರ್ಥಿಗಳಲ್ಲಿ ಕೇವಲ ಶೇ 13ರಷ್ಟು ಮಾತ್ರವಿದ್ದ ಮಹಿಳಾ ವಿದ್ಯಾರ್ಥಿಗಳ ಪ್ರಮಾಣ ಈಗ ಸುಮಾರು ಶೇ 24ರಷ್ಟಕ್ಕೆ ಹೆಚ್ಚಿದೆ. ರಾಷ್ಟ್ರಘಟನೆಯೂ ಮಹಿಳೆಯರಿಗೆ ಪುರುಷರೊಡನೆ ಸಮಾನ ಸ್ಥಾನ ಪಡೆಯುವ ಹಕ್ಕನ್ನು ಪುರಸ್ಕರಿಸಿರುವುದರಿಂದ ಉನ್ನತ ಶಿಕ್ಷಣಕ್ಕೆ ಅವರು ಅಧಿಕ ಸಂಖ್ಯೆಯಲ್ಲಿ ಬರುವ ಪ್ರವೃತ್ತಿ ಹೆಚ್ಚುತ್ತ ಹೋಗುತ್ತದೆ. ಅವರಿಗೆ ಆ ಸೌಲಭ್ಯವನ್ನೊದಗಿಸುವುದು ನಮ್ಮ ರಾಜಕೀಯ ಮತ್ತು ಸಾಮಾಜಿಕ ದೃಷ್ಟಿಗಳಿಗೆ ಅಗತ್ಯವೆನಿಸಿದೆ.

ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯಲ್ಲಾಗಿರುವ ಹೆಚ್ಚಳಕ್ಕೆ ಕಾರಣವಾದ ಎರಡು ಪ್ರಮುಖ ಅಂಶಗಳನ್ನು ಮೇಲೆ ಉಲ್ಲೇಖಿಸಿದೆ. ಅವರ ಆ ಮುಖವಾದ ಆಶೋತ್ತರಗಳನ್ನು ಪೂರೈಸುವುದು ಅನಿವಾರ್ಯವಾಗಿದೆ. ಯಾವ ಕಾರಣದಿಂದಲೂ ಯಾರಿಗೂ ಉನ್ನತ ಶಿಕ್ಷಣ ಪಡೆಯುವ ಸೌಲಭ್ಯವನ್ನು ಮೊಟಕು ಮಾಡುವಂತಿಲ್ಲ. ಪ್ರವೇಶಾವಕಾಶ ಬಯಸುವವರಿಗೆಲ್ಲ ಪ್ರವೇಶ ನೀಡುವುದು ರಾಷ್ಟ್ರದ ಹೊಣೆಗಾರಿಕೆಯಾಗುತ್ತದೆ. ಈ ಸಮಯದಲ್ಲಿ ಶಿಕ್ಷಣದ ಗುಣಮಟ್ಟದ ಬಗ್ಗೆಯೂ ಚಿಂತಿಸುವುದು ಅಗತ್ಯವಾಗುತ್ತದೆ. ಇತಿಮಿತಿಯಿಲ್ಲದೆ ಬೆಳೆಯುತ್ತಿರುವ ವಿದ್ಯಾರ್ಥಿ ಸಂಖ್ಯೆಗೆ ಪ್ರವೇಶಾವಕಾಶ ಕಲ್ಪಿಸಲು ಇರುವ ವಿಶ್ವವಿದ್ಯಾಲಯಗಳ ಮತ್ತು ಕಾಲೇಜುಗಳ ಸೀಮಿತ ಸೌಲಭ್ಯಗಳಲ್ಲೆ ಅವರಿಗೆಲ್ಲ ಅವಕಾಶ ಕಲ್ಪಿಸಿದರೆ ಆಗಲೇ ಉಲ್ಲೇಖಿಸಿರುವಂತೆ ವಿವಿಧ ಸಮಸ್ಯೆಗಳು ಹುಟ್ಟಿಕೊಂಡು ಬೋಧನೆಯ ಮಟ್ಟವೂ ಆಡಳಿತದ ದಕ್ಷತೆಯೂ ಕುಸಿಯುತ್ತವೆ. ಈ ಅಹಿತ ಫಲಗಳನ್ನು ತಪ್ಪಿಸಲು ಪರ್ಯಾಯ ವ್ಯವಸ್ಥೆ ಅನಿವಾರ್ಯವಾಗುತ್ತದೆ. ಈಚೆಗೆ ಕೆಲವು ವಿಶ್ವವಿದ್ಯಾಲಯಗಳು ಪ್ರವೇಶದ ಒತ್ತಡದ ಸಮಸ್ಯೆಯನ್ನು ಪರಿಹರಿಸಲು ಬಾಹ್ಯ ವಿದ್ಯಾರ್ಥಿಗಳಾಗಿ ಅಧ್ಯಯನ ಮಾಡಿಕೊಂಡು ತಾವು ನಡೆಸುವ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ಕಲ್ಪಿಸಿವೆ ; ಇನ್ನು ಕೆಲವು ವಿಶ್ವವಿದ್ಯಾಲಯಗಳು ಸಂಜೆಯ ತರಗತಿ, ಸಂಜೆಯ ಕಾಲೇಜು ಮುಂತಾದ ಸೌಲಭ್ಯಗಳನ್ನು ರೂಪಿಸಿವೆ. ಮತ್ತೆ ಕೆಲವು ವಿಶ್ವವಿದ್ಯಾಲಯಗಳು ಅಂಚೆ ಮತ್ತು ತೆರಪಿನ ಶಿಕ್ಷಣದ ಸೌಲಭ್ಯವನ್ನು ಆರಂಭಿಸಿವೆ. ಈ ನೂತನ ಸೌಲಭ್ಯಗಳ ಫಲವಾಗಿ ಸಾಂಪ್ರದಾಯಿಕ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶದ ಒತ್ತಡ ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ.

ಉನ್ನತ ಶಿಕ್ಷಣಕ್ಕಾಗಿ ಏರ್ಪಟ್ಟಿರುವ, ಮೇಲಿನ ನೂತನ ವ್ಯವಸ್ಥೆಗಳೆಲ್ಲ ಸಾಂಪ್ರದಾಯಿಕ ಶಿಕ್ಷಣಾರ್ಹತೆಯನ್ನು ಪಡೆದಿರುವವರಿಗೆ ಮಾತ್ರ ಪ್ರವೇಶಾವಕಾಶ ನೀಡುತ್ತವೆ. ಸಾಂಪ್ರದಾಯಿಕ ವಿದ್ಯಾಲಯಗಳು ನಿಷ್ಕರ್ಷಿಸಿರುವ ಅವಶ್ಯಕತೆಗಳನ್ನೆಲ್ಲ ಅಲ್ಲಿಗೆ ಸೇರತಕ್ಕ ವಿದ್ಯಾರ್ಥಿಗಳು ಪೂರೈಸಬೇಕು. ಆದರೆ ಅಂಚೆ ಮತ್ತು ತೆರಪಿನ ಶಿಕ್ಷಣದಲ್ಲಿ ಶಿಕ್ಷಣಾರ್ಹತೆಯನ್ನು ಕಡ್ಡಾಯ ಮಾಡಿರುವುದಾದರೂ ಹಾಜರಾತಿಯಲ್ಲಿ ಪಡೆದಿರುವವರು. ಅವರು ಯಾವುದಾದರೂ.

ಉದ್ಯೋಗದಲ್ಲಿ ಸೇರಿಕೊಂಡು ಉನ್ನತ ಶಿಕ್ಷಣವನ್ನು ಪಡೆಯುವ ಅವಕಾಶವುಂಟು. ಶಿಕ್ಷಣಾರ್ಹತೆಯಿಲ್ಲದವರು ನಿಜವಾಗಿ ಅನ್ಯವಿಧಾನಗಳಿಂದ ತಮ್ಮ ಆಸಕ್ತಿಯ ಕ್ಷೇತ್ರದಲ್ಲಿ ಪಾಂಡಿತ್ಯ ಸಾಧಿಸಿದ್ದರೂ ಸಾಂಪ್ರದಾಯಿಕ ಶಿಕ್ಷಣ ಪಡೆದಿರುವ ಅರ್ಹತಾ ಪತ್ರವಿಲ್ಲದ್ದರಿಂದ ಅವರು ಸದ್ಯದಲ್ಲಿ ಏರ್ಪಟ್ಟಿರುವ ಯಾವ ಸೌಲಭ್ಯವನ್ನೂ ಬಳಸಿಕೊಳ್ಳಲಾರರು. ಆದರೆ ಉನ್ನತ ಶಿಕ್ಷಣ ಪಡೆಯಲಾಶಿಸುವ ಅಂಥವರಿಗೊಪ್ಪುವ ಉನ್ನತ ಶಿಕ್ಷಣಸೌಲಭ್ಯವನ್ನು ಒದಗಿಸುವುದು ಸಾಮಾಜಿಕ ನ್ಯಾಯವನ್ನೊದಗಿಸುವ ದೃಷ್ಟಿಯಿಂದ ಅಗತ್ಯವೆನಿಸುತ್ತದೆ.

ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಮತ್ತೊಂದು ಅಂಶವನ್ನಿಲ್ಲಿ ಪರಿಗಣಿಸಬೇಕಾಗುತ್ತದೆ. ಆಧುನಿಕ ಪ್ರಪಂಚದ ಎಲ್ಲ ದೇಶಗಳಲ್ಲೂ ಕಾರ್ಖಾನೆ ಕಾರ್ಯಾಲಯಗಳೂ ಇತರ ವಾಣಿಜ್ಯೋದ್ಯಮಗಳೂ ಅಧಿಕ ಸಂಖ್ಯೆಯಲ್ಲಿ ಏರ್ಪಡುತ್ತವೆ; ಸಾರಿಗೆ ಸಂಪರ್ಕಸಾಧನಗಳು, ಶೀಘ್ರಗತಿಯಲ್ಲಿ ವಿಸ್ತರಿಸುತ್ತಿವೆ. ಅವೆಲ್ಲ ಕ್ಷೇತ್ರಗಳಿಗೆ ಕೆಲಸಗಾರರ ಅಗತ್ಯವನ್ನು ಪೂರೈಸಬೇಕಾಗುತ್ತದೆ. ಮುಖ್ಯವಾಗಿ ಅಲ್ಲಿಗೆ ಸೇರತಕ್ಕವರಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಮುಗಿಸಿದ ತರುಣವರ್ಗ ಅಧಿಕ ಸಂಖ್ಯೆಯಲ್ಲಿರುತ್ತದೆ. ಆದರೆ ಜನತೆಯಲ್ಲಿ ಉನ್ನತ ಶಿಕ್ಷಣ ಪಡೆಯುವ ಬಯಕೆ ಹೆಚ್ಚಿರುವುದರಿಂದ ಅವರು ಉದ್ಯೋಗನಿರತರಾಗುವ ಬದಲು ಸಾಂಪ್ರದಾಯಿಕ ಶಿಕ್ಷಣಸಂಸ್ಥೆಗಳಿಗೆ ಸೇರಲು ಹಾತೊರೆಯುತ್ತಿರುತ್ತಾರೆ. ಆದರಿಂದ ಉದ್ಯೋಗಕ್ಷೇತ್ರಗಳಿಗೆ ತಕ್ಕಷ್ಟು ಜನಬಲ ಒದಗದೆ ರಾಷ್ಟ್ರದ ಆರ್ಥಿಕ ಶಕ್ತಿ ಕುಂಠಿತವಾಗಬಹುದು. ಉನ್ನತ ಶಿಕ್ಷಣವನ್ನು ಅಗತ್ಯ ವಿದ್ಯಾರ್ಹತೆಯಿಲ್ಲದವರೂ ಪಡೆಯುವ ಸೌಲಭ್ಯ ರೂಪುಗೊಳ್ಳುವುದಾದರೆ ಯುವಜನರು ನೇರವಾಗಿ ಉದ್ಯೋಗಕ್ಕೆ ಸೇರಿಕೊಂಡು ಅನಂತರ ಅವಕಾಶವಾದಾಗ ಉನ್ನತ ಶಿಕ್ಷಣ ಪಡೆದು ಪದವೀಧರರಾಗಿ ತಮ್ಮ ಉದ್ಯೋಗಗಳಲ್ಲಿ ಉನ್ನತಿ ಪಡೆಯುವುದರ ಜೊತೆಗೆ ಉತ್ತಮ ಮಟ್ಟದ ಜೀವನವನ್ನು ನಡೆಸುವ ಅವಕಾಶವಿರುತ್ತದೆ. ಮುಖ್ಯವಾಗಿ ಅಂಥವರ ಉಪಯೋಗಕ್ಕೆಂದು ಮುಕ್ತ ವಿಶ್ವವಿದ್ಯಾಲಯದ ಕಲ್ಪನೆ ಪ್ರಚಾರಕ್ಕೆ ಬರುತ್ತಿದೆ.

ಮುಕ್ತ ವಿಶ್ವವಿದ್ಯಾಲಯದ ಸ್ವರೂಪ : ಸಾಂಪ್ರದಾಯಿಕ ಶಿಕ್ಷಣಸಂಸ್ಥೆಗಳಲ್ಲಿ ಹಾಜರಾತಿ ಮತ್ತು ಕೆಳಗಿನ ತರಗತಿಗಳಲ್ಲಿ ಉತ್ತೀರ್ಣರಾಗಿರುವ ಶಿಕ್ಷಣಾರ್ಹತೆ, ಇವೆರಡಂಶಗಳನ್ನು ಕಡ್ಡಾಯ ಮಾಡುತ್ತಿವೆ. ಇವೆರಡಂಶಗಳಿಗೂ ವಿನಾಯಿತಿ ದೊರಕಿಸಿಕೊಡುವುದೆ ಮುಕ್ತವಿಶ್ವವಿದ್ಯಾಲಯದ ವಿಶಿಷ್ಟ ಲಕ್ಷಣ. ಯಾವ ಶಿಕ್ಷಣಾರ್ಹತೆ ಸಾಧಿಸದೆ ಇರತಕ್ಕವರು ಕೂಡ ಅಲ್ಲಿಗೆ ವಿದ್ಯಾರ್ಥಿಗಳಾಗಿ ಸೇರಿಕೊಳ್ಳುವ ಪ್ರವೇಶಸೌಲಭ್ಯದಿಂದ, ಕಾರಣಾಂತರಗಳಿಂದ ಸಾಂಪ್ರದಾಯಿಕ ಶಿಕ್ಷಣವನ್ನು ಮುಗಿಸದಿರುವ ಆದರೆ ಯಾವುದಾದರೂ ವಿಷಯಕ್ಷೇತ್ರದಲ್ಲಿ ಆಸಕ್ತಿಯನ್ನು ಬೆಳಸಿಕೊಂಡಿರುವ ಉದ್ಯೋಗನಿರತರು ನೇರವಾಗಿ ಮುಕ್ತ ವಿಶ್ವವಿದ್ಯಾಲಯಕ್ಕೆ ಸೇರಿ ಶಿಕ್ಷಣ ಪಡೆದು ಪದವೀಧರರಾಗಬಹುದು. ತಾವು ಜೀವನೋಪಾಯಕ್ಕಾಗಿ ಸೇರಿಕೊಂಡಿರುವ ಉದ್ಯೋಗದಲ್ಲೇ ಇದ್ದುಕೊಂಡು ಹೆಚ್ಚಿನ ಶಿಕ್ಷಣವನ್ನು ಪಡೆದು ತಮ್ಮ ವೃತ್ತಿಯಲ್ಲಿ ಮುನ್ನಡೆ ಸಾಧಿಸಬಹುದು,

ಮೊಟ್ಟಮೊದಲ ಮುಕ್ತ ವಿಶ್ವವಿದ್ಯಾಲಯ : ಈ ಶತಮಾನದ ಆರನೆಯ ದಶಕದಿಂದ ಇಂಗ್ಲೆಂಡಿನಲ್ಲಿ ಉನ್ನತ ಶಿಕ್ಷಣಕ್ಕೆ ಬರುವವರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚುತ್ತ

ಬಂದಿದೆ. ಕೇವಲ 19 ವಿಶ್ವವಿದ್ಯಾಲಯಗಳು ಮಾತ್ರವಿದ್ದ ಆ ದೇಶದಲ್ಲಿ ಈಗ ನಲವತ್ತೆರಡು ವಿಶ್ವವಿದ್ಯಾಲಯಗಳಿವೆ. ಜೊತೆಗೆ ಆ ಮಟ್ಟದ ಶಿಕ್ಷಣವೀಯುತ್ತಿರುವ ಐದು ತಾಂತ್ರಿಕ ವಿಶ್ವ ವಿದ್ಯಾಲಯಗಳಿವೆ. ಎಂದರೆ ಉನ್ನತ ಶಿಕ್ಷಣಕ್ಕೆ ಬರತಕ್ಕವರ ಸಂಖ್ಯೆ ಸುಮಾರು ಮುಮ್ಮಡಿ ಹೆಚ್ಚಿದೆ. ಅದು ತನಕ ಅಲ್ಲಿ ಸಾಮಾನ್ಯವಾಗಿ 18 ವರ್ಷ ವಯಸ್ಸಿನ ವರೆಗೆ ಕಡ್ಡಾಯ ಶಿಕ್ಷಣ ಪಡೆದು ನೂರಕ್ಕೆ 95 ಮಂದಿ ಉದ್ಯೋಗನಿರತರಾಗುತ್ತಿದ್ದರು. ಉನ್ನತ ಶಿಕ್ಷಣಕ್ಕೆ ಅಧಿಕ ಸಂಖ್ಯೆಯಲ್ಲಿ ಧಾವಿಸುವ ಈ ಹೊಸ ಪ್ರವೃತ್ತಿಯ ಫಲವಾಗಿ ಔದ್ಯೋಗಿಕ ಕ್ಷೇತ್ರಕ್ಕೆ ಅಗತ್ಯ ಜನಬಲವನ್ನು ಒದಗಿಸುವುದು ಅಸಾಧ್ಯವಾಗುತ್ತ ಬಂತು. ಆದರೆ ಅದಷ್ಟೇ ಕಾರಣಕ್ಕಾಗಿ ಜನತೆಯಲ್ಲಿರುವ ಉನ್ನತ ಶಿಕ್ಷಣ ಪಡೆಯುವ ಆಶೋತ್ತರವನ್ನು ಕಡೆಗಣಿಸಿ ಅವರು ಉನ್ನತ ಶಿಕ್ಷಣಕ್ಕೆ ಹೋಗದಂತೆ ತಡೆಯುವುದು ಸೂಕ್ತವೆನಿಸಲಾರದು. ಎಂದರೆ ಪ್ರೌಢಶಾಲೆಯ ವರೆಗೆ ಓದಿದವರು ನೇರವಾಗಿ ಉದ್ಯೋಗನಿರತರಾಗುವುದಕ್ಕೂ ಅನಂತರ ಉದ್ಯೋಗದಲ್ಲಿದ್ದುಕೊಂಡೇ ಉನ್ನತ ಶಿಕ್ಷಣ ಪಡೆದು ಪದವೀಧರರಾಗುವುದಕ್ಕೂ ಅವಕಾಶ ಕಲ್ಪಿಸುವುದು ಅಗತ್ಯವೆನಿಸಿತ್ತು. ಆದರೆ ಅಲ್ಲಿನ ಸರ್ಕಾರ 1966ರಲ್ಲಿ ಅದಕ್ಕಾಗಿ ರಾಬಿನ್ ಸಮಿತಿಯನ್ನು ರಚಿಸಿತು. ಅದು ಇತರ ಅನೇಕ ಸಲಹೆಗಳ ಜೊತೆಗೆ ವೃತ್ತಿನಿರತರಿಗೆ ಉನ್ನತ ಶಿಕ್ಷಣದ ಸೌಲಭ್ಯವನ್ನೊದಗಿಸಲು ಮುಕ್ತ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವನ್ನು ಸೂಚಿಸಿತು. ಸರ್ಕಾರ ಆ ಸಲಹೆಗಳನ್ನು ಪರಿಶೀಲಿಸಿ ಒಪ್ಪಿಗೆ ನೀಡಿತು. 1969ರಲ್ಲಿ ಪಾರ್ಲಿಮೆಂಟಿನ ಶಾಸನವೊಂದರ ಮೂಲಕ ಪ್ರಪಂಚದ ಮೊಟ್ಟಮೊದಲನೆಯ ಮುಕ್ತ ವಿಶ್ವವಿದ್ಯಾಲಯವನ್ನು ಸಂಘಟಿಸಿತು. ಅದು 1971ರಲ್ಲಿ ತನ್ನ ಕಾರ್ಯವನ್ನು ಆರಂಭಿಸಿತು. ಸುಮಾರು 2,500 ಮಂದಿ ವಿದ್ಯಾರ್ಥಿಗಳು ನೂತನ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಾಗಿ ಸೇರಿದರು. ವಿವಿಧ ಪದವಿಗಳನ್ನು ಪಡೆದ ಅವರ ಪ್ರಥಮ ತಂಡ 1974ರಲ್ಲಿ ಹೊರಬಂದಿತು. ಸರ್ಕಾರ ಅದನ್ನು ಸ್ಥಾಪಿಸಿದ ಮೊದಲಲ್ಲಿ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳು ಅದರಿಂದ ಶಿಕ್ಷಣದ ಮಟ್ಟಕ್ಕೆ ಅವನತಿಯೊದಗಿ ಪದವಿಗಳ ಪಾವಿತ್ರ್ಯ ಕಲುಷಿತವಾಗುವುದೆಂದು ಬೊಬ್ಬೆ ಹಾಕಿದ್ದುವು. ಆದರೆ ಹೊರಬಂದ ಪದವೀಧರರ ನಿಷ್ಪತ್ತಿಯ ಉನ್ನತಮಟ್ಟವನ್ನು ಅರಿತಾಗ ಅವರ ಟೀಕೆ ತಣ್ಣಗಾದುದಲ್ಲದೆ ನೂತನ ವಿಶ್ವವಿದ್ಯಾಲಯಕ್ಕೆ ವಿದ್ವಜ್ಜನರ ಮನ್ನಣೆ ದೊರಕುವಂತಾಯಿತು.

ಭಾರತದಲ್ಲಿ ಮುಕ್ತ ವಿಶ್ವವಿದ್ಯಾಲಯ : ಇಂಗ್ಲೆಂಡಿನಲ್ಲಿ ಮುಕ್ತ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಕಾರಣವೆನಿಸಿದ್ದ ಸನ್ನಿವೇಶಗಳೆಲ್ಲ ಭಾರತದಲ್ಲೂ ಕಂಡುಬರುತ್ತಿವೆ. ವಿದ್ಯಾರ್ಥಿಗಳ ಹೆಚ್ಚಳದಿಂದ ಸದ್ಯದಲ್ಲಿ ಅಸ್ತಿತ್ವದಲ್ಲಿರುವ ಎಲ್ಲ ವಿಶ್ವವಿದ್ಯಾಲಯಗಳಿಗೂ ಅಧಿಕ ಹೊರೆಯಾಗಿ ಆಡಳಿತದಲ್ಲಿ ದಕ್ಷತೆ ಕುಂದಿರುವುದಲ್ಲದೆ, ಶಿಕ್ಷಣದ ಮಟ್ಟ ಇಳಿದಿದೆ; ಸಂಶೋಧನೆಗಳು ನಡೆಯಲು ಅವಕಾಶವಿಲ್ಲವಾಗಿದೆ. ಈಚೆಗೆ ಖಾಸಗಿ ವ್ಯಾಸಂಗ, ಸಂಜೆ ತರಗತಿ, ಅಂಚೆ ಶಿಕ್ಷಣ ಮುಂತಾದ ಪರ್ಯಾಯ ಸೌಲಭ್ಯಗಳು ಏರ್ಪಟ್ಟಿದ್ದರೂ, ವಿಶ್ವವಿದ್ಯಾಲಯಗಳ ಪರಿಸ್ಥಿತಿ ಉತ್ತಮಗೊಂಡಿಲ್ಲ. ಜೊತೆಗೆ ಸದ್ಯದಲ್ಲಿ ಅಸ್ತಿತ್ವದಲ್ಲಿರುವ ಎಲ್ಲ ಸೌಲಭ್ಯಗಳೂ ಕನಿಷ್ಠ ಶಿಕ್ಷಣಾರ್ಹತೆಯನ್ನು ಕಡ್ಡಾಯ ಮಾಡಿವೆ. ಅದಿಲ್ಲದವರು ಪ್ರವೇಶಾವಕಾಶ ಪಡೆಯುವಂತೆಯೇ ಇಲ್ಲ. ಎಂದರೆ, ಪ್ರೌಢಶಾಲೆಯ ಶಿಕ್ಷಣ ಮುಗಿಸಿದವರು ಪದವೀಧರರಾಗುವ ಹವಣಿಕೆಯಿಂದ ಜೂನಿಯರ್ ಕಾಲೇಜುಗಳಿಗೂ ಅನಂತರ ಪದವಿ ತರಗಳಿಗೂ ಸೇರಲು ಧಾವಿಸುತ್ತಿದ್ದಾರೆ. ಸಾಂಪ್ರದಾಯಿಕ ಶಿಕ್ಷಣಾರ್ಹತೆ ವಿಶ್ವವಿದ್ಯಾಲಯದ ಪ್ರವೇಶಕ್ಕೆ ಕಡ್ಡಾಯ ಮಾಡಿರದಿದ್ದರೆ, ಇಷ್ಟು ಅಧಿಕ ಪ್ರಮಾಣದಲ್ಲಿ

ಪ್ರವೇಶದ ಒತ್ತಡ ಏರುತ್ತಿರಲಿಲ್ಲ. ಆದರೆ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿ ಆ ನಿಯಮವನ್ನು ಸಡಿಲಗೊಳಿಸುವುದು ಸೂಕ್ತವೆನಿಸದು. ಅಲ್ಲದೆ ಯುವಜನರು ಅಧಿಕ ಸಂಖ್ಯೆಯಲ್ಲಿ ಉನ್ನತ ಶಿಕ್ಷಣಕ್ಕೆ ನೇರವಾಗಿ ಧಾವಿಸುವುದರಿಂದ ರಾಷ್ಟ್ರದ ಔದ್ಯೋಗಿಕ ಮತ್ತು ಇನ್ನಿತರ ಕ್ಷೇತ್ರಗಳಿಗೆ ಅವರ ಸೇವೆ ಇಲ್ಲದಂತಾಗುತ್ತದೆ. ಜೊತೆಗೆ ಕನಿಷ್ಠ ಶಿಕ್ಷಣಾರ್ಹತೆ ಇರಲಿ, ಇಲ್ಲದಿರಲಿ, ಬಯಸುವ ಎಲ್ಲರಿಗೂ ಉನ್ನತ ಶಿಕ್ಷಣ ಪಡೆಯುವ ಅವಕಾಶವನ್ನು ಕಲ್ಪಿಸುವುದರಿಂದ ರಾಷ್ಟ್ರಘಟನೆಯಲ್ಲಿ ಉಲ್ಲೇಖವಾಗಿರುವ ಸಾಮಾಜಿಕ ನ್ಯಾಯವನ್ನೂ ಸಮಾನ ಶಿಕ್ಷಣ ಸೌಲಭ್ಯವನ್ನೂ ಎತ್ತಿಹಿಡಿದಂತಾಗುತ್ತದೆ. ಈ ಎಲ್ಲ ಕಾರಣಗಳಿಂದ ಭಾರತದಲ್ಲೂ ಮುಕ್ತ ವಿಶ್ವವಿದ್ಯಾಲಯದ ಸ್ಥಾಪನೆ ಅಗತ್ಯವೇ ಆಗುತ್ತದೆ.

ಇಂಗ್ಲೆಂಡಿನ ಮುಕ್ತ ವಿಶ್ವವಿದ್ಯಾಲಯ ಇಡೀ ಇಂಗ್ಲೆಂಡಿನ ಪ್ರಾದೇಶಿಕ ವ್ಯಾಪ್ತಿಯನ್ನು ಹೊಂದಿರುತ್ತದೆ. ಭಾರತದಲ್ಲೂ ಇಡೀ ರಾಷ್ಟ್ರಕ್ಕೆಲ್ಲ ಒಂದು ಮುಕ್ತ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ಸೂಕ್ತವೆಂದು ಕೆಲವರು ಭಾವಿಸಿರುವರು. ಇದು ಸ್ವಾಭಾವಿಕವೂ ಸುಲಭವೂ ಎಂದು ತೋರಿದರೂ ಬಗೆಬಗೆಯ ಸಮಸ್ಯೆಗಳನ್ನು ತಂದೊಡ್ಡುತ್ತದೆ. ಮೊದಲನೆಯದಾಗಿ ಇಷ್ಟು ವಿಶಾಲ ಭೂಭಾಗದಲ್ಲಿ ಹಾಗೂ ಪ್ರಪಂಚದ $\frac{1}{6}$ ಭಾಗ ಜನಸಂಖ್ಯೆಯುಳ್ಳ ಈ ರಾಷ್ಟ್ರದಲ್ಲಿ ಒಂದೇ ವಿಶ್ವವಿದ್ಯಾಲಯವಿದ್ದರೆ, ಅದರ ಆಡಳಿತಕೇಂದ್ರ ದೆಹಲಿಯಲ್ಲಿದ್ದರೆ ಕಾರ್ಯನಿರ್ವಹಣೆಯಲ್ಲಿ ದಕ್ಷತೆ ಕಡಮೆಯಾಗಬಹುದಲ್ಲದೆ, ವಿದ್ಯಾರ್ಥಿಗಳಿಗೆ ಸಂಪರ್ಕ ಹೊಂದಲು ತೀರ ಕಷ್ಟವಾಗುವುದು. ಕಾರ್ಯಕ್ರಮಗಳನ್ನು ಕ್ರಮವಾಗಿ ವ್ಯವಸ್ಥೆಗೊಳಿಸುವುದೂ ಕಷ್ಟವಾಗುವುದು. ಬಹು ದೂರಪ್ರದೇಶದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ಮೋಸ ಮಾಡಿ ಪದವಿ ಗಳಿಸಲು ಯತ್ನಿಸಬಹುದು. ಇಂಗ್ಲೆಂಡಿನಲ್ಲೇನೊ ವಿಸ್ತೀರ್ಣದಂತೆ ಜನಸಂಖ್ಯೆಯೂ ಅಷ್ಟಾಗಿ ಅಧಿಕವಾಗಿಲ್ಲವಾದ್ದರಿಂದ ಒಂದೇ ವಿಶ್ವವಿದ್ಯಾಲಯ ಸುಸೂತ್ರವಾಗಿ ಕಾರ್ಯನಿರ್ವಹಿಸಬಹುದು. ಭಾರತದಲ್ಲಿ ಅದು ಅಸಾಧ್ಯವಾದ್ದರಿಂದ ಪ್ರಾದೇಶಿಕ ಮುಕ್ತ ವಿಶ್ವವಿದ್ಯಾಲಯಗಳನ್ನು ಆರಂಭಿಸುವುದು ಸೂಕ್ತವೆಂದು ತೋರುತ್ತದೆ. ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ-ಈ ನಾಲ್ಕು ಪ್ರದೇಶಗಳಲ್ಲಿ ನಾಲ್ಕು ಪ್ರಾದೇಶಿಕ ಮುಕ್ತ ವಿಶ್ವವಿದ್ಯಾಲಯಗಳನ್ನು ಏರ್ಪಡಿಸಿ ಅವುಗಳ ಪ್ರಾದೇಶಿಕ ವ್ಯಾಪ್ತಿಯನ್ನು ನಾಲ್ಕೈದು ರಾಜ್ಯಗಳನ್ನೊಳಗೊಂಡಂತೆ ನಿಷ್ಕರ್ಷಿಸಬಹುದು.

ಮುಕ್ತವಿಶ್ವವಿದ್ಯಾಲಯ ಇಡೀ ರಾಷ್ಟ್ರಕ್ಕೆಲ್ಲ ಒಂದೇ ಇರಲಿ, ಪ್ರಾದೇಶಿಕವಾಗಿ ನಾಲ್ಕೇ ಇರಲಿ ಅದು ಯಾವೊಂದು ರಾಜ್ಯಕ್ಕೂ ಸೇರಿದ್ದಲ್ಲ, ಎಂದರೆ ಅದು ರಾಷ್ಟ್ರೀಯ ಸ್ವರೂಪವನ್ನು ತಾಳಿರುತ್ತದೆ. ಆದ್ದರಿಂದ ಅದಕ್ಕೆ ಕೇಂದ್ರೀಯ ವಿಶ್ವವಿದ್ಯಾಲಯಗಳ ಸ್ವರೂಪವೂ ಅಂತಸ್ತು ಮತ್ತು ಸ್ಥಾನಮಾನಗಳೂ ಇರುತ್ತವೆ. ಇದನ್ನು ಪಾರ್ಲಿಮೆಂಟಿನ ಶಾಸನವೊಂದರ ಮೂಲಕ ಸಂಘಟಿಸಬೇಕು. ಸದ್ಯದಲ್ಲಿರುವ ಆರು ಕೇಂದ್ರೀಯ ವಿಶ್ವವಿದ್ಯಾಲಯಗಳ ಜೊತೆಗೆ ಮುಕ್ತ ವಿಶ್ವವಿದ್ಯಾಲಯಗಳೂ ರಾಷ್ಟ್ರೀಯ ಪ್ರಾಮುಖ್ಯದ ವಿಶ್ವವಿದ್ಯಾಲಯಗಳಾಗುತ್ತವೆ.

ಆಡಳಿತ ಮತ್ತು ವ್ಯವಸ್ಥೆ: ಇತರ ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿರುವಂತೆ ರಾಷ್ಟ್ರಾಧ್ಯಕ್ಷರು ಮುಕ್ತ ವಿಶ್ವವಿದ್ಯಾಲಯದ ವಿಸಿಟರ್ ಆಗಿರುತ್ತಾರೆ. ಅವರು ವಿಶ್ವವಿದ್ಯಾಲಯದ ಕುಲಪತಿಗಳನ್ನು ನೇಮಕಮಾಡುವರು. ಅವರು ವಿಶ್ವವಿದ್ಯಾಲಯದ ಪ್ರಧಾನ ಕಾರ್ಯನಿರ್ವಹಣಾಧಿಕಾರಿಗಳಾಗಿರುತ್ತಾರೆ. ದಿನನಿತ್ಯದ ಆಡಳಿತದಲ್ಲಿ ಅವರಿಗೆ ಸರ್ವಸ್ವಾತಂತ್ರ್ಯವಿರು

ತ್ತದೆ. ವಿಶ್ವವಿದ್ಯಾಲಯದ ಮೂಲಭೂತ ನೀತಿ ನಿರೂಪಣೆಗಾಗಿ ಸೆನೆಟ್ ಸಭೆಯಿರುತ್ತದೆ. ಅದು ವಿಶ್ವವಿದ್ಯಾಲಯದ ಪರಮಾಧಿಕಾರಮಂಡಲಿ. ಅವರಲ್ಲಿ ಆ ಪ್ರದೇಶದ ಬೇರೆ ಬೇರೆ ರಾಜ್ಯಗಳ ಸರ್ಕಾರಗಳ ಮತ್ತು ವಿಶ್ವವಿದ್ಯಾನಿಲಯಗಳ ಪ್ರತಿನಿಧಿಗಳೂ ಉದ್ಯೋಗ, ವಾಣಿಜ್ಯ, ಕಲೆ ಮುಂತಾದ ಕ್ಷೇತ್ರಗಳ ಪ್ರತಿನಿಧಿಗಳೂ ಮುಕ್ತ ವಿಶ್ವವಿದ್ಯಾಲಯದ ವಿವಿಧ ಕ್ಷೇತ್ರಗಳಿಂದ ಆರಿಸಿ ಬಂದ ಹಾಗೂ ನಾಮಕರಣ ಮಾಡಿದ ಪ್ರತಿನಿಧಿಗಳೂ ಇರುತ್ತಾರೆ. ಕುಲಪತಿಗಳು ಅದರ ಸಭೆಗಳಲ್ಲಿ ಅಧ್ಯಕ್ಷತೆ ವಹಿಸುತ್ತಾರೆ. ಅವರಿಗೆ ದಿನನಿತ್ಯದ ಕಾರ್ಯನಿರ್ವಹಣೆಯಲ್ಲಿ ಸಲಹೆ ನೀಡಲು ಸೆನೆಟ್ ಮತ್ತು ಅಕಾಡೆಮಿಕ್ ಕೌನ್ಸಿಲ್‌ಗಳಿಂದ ಆರಿಸಿದ ಪ್ರತಿನಿಧಿಗಳೂ ಕೆಲವು ನಾಮಕರಣ ಪ್ರತಿನಿಧಿಗಳೂ ಇರುವ ಸಿಂಡಿಕೇಟ್ ಅಥವಾ ಕಾರ್ಯನಿರ್ವಾಹಕ ಮಂಡಲಿಯೂ ಇರುತ್ತದೆ. ಶೈಕ್ಷಣಿಕ ವಿಷಯಗಳನ್ನು ಪರಿಶೀಲಿಸಿ ಸೂಕ್ತ ತೀರ್ಮಾನಗಳನ್ನು ಕೈಗೊಳ್ಳಲು ಮುಕ್ತ ಮತ್ತು ಇತರ ವಿಶ್ವವಿದ್ಯಾಲಯಗಳ ವಿದ್ವಜ್ಜನರನ್ನೇ ಪ್ರಧಾನವಾಗಿ ಒಳಗೊಂಡ ಅಕೆಡೆಮಿಕ್ ಕೌನ್ಸಿಲ್ ಇರುತ್ತದೆ. ಇದರ ಜೊತೆಗೆ ವಿವಿಧ ಅಧ್ಯಯನ ವಿಷಯಗಳ ವಿದ್ಯಾಮಂಡಲಿಗಳೂ ಇರುತ್ತವೆ. ವಿಶ್ವವಿದ್ಯಾಲಯದ ಕುಲಸಚಿವರು, ದ್ರವ್ಯಾಧಿಕಾರಿಗಳು, ಪರೀಕ್ಷಾಧಿಕಾರಿಗಳು ವಿಶ್ವವಿದ್ಯಾಲಯದ ಶಾಸನದತ್ತ ಪ್ರಾಧಿಕಾರ ವರ್ಗದವರಾಗಿರುತ್ತಾರೆ. ಅವರಿಗೆ ತಕ್ಕ ಸಹಾಯಕ ಸಿಬ್ಬಂದಿಯಿರುತ್ತದೆ. ವಿಶ್ವವಿದ್ಯಾಲಯ ಕೈಗೊಳ್ಳುವ ಎಲ್ಲ ತೀರ್ಮಾನಗಳಿಗೂ ವಿಸಿಟರ್‌ರವರ ಅನುಮೋದನೆ ಅಗತ್ಯವಾಗುತ್ತದೆ. ಸಾಮಾನ್ಯವಾಗಿ ಅವರು ಕಾರ್ಯಬಾಹುಳ್ಯದಿಂದ ಅದನ್ನೆಲ್ಲ ನಿರ್ವಹಿಸಲು ಅವಕಾಶವಿಲ್ಲವಾದರೆ ವಿಶ್ವವಿದ್ಯಾಲಯಕ್ಕೆ ಪ್ರೊ-ಛಾನ್ಸಲರನ್ನು ನೇಮಕ ಮಾಡಬಹುದು. ವಿಶ್ವವಿದ್ಯಾಲಯದ ಆಡಳಿತ ವ್ಯವಸ್ಥೆಗೆ ಸ್ಥೂಲರೂಪದ ಹೆಗ್ಗುರೆಗಳನ್ನು ಮಾತ್ರ ಸೂಚಿಸಿದೆ. ವಿಶ್ವವಿದ್ಯಾಲಯದ ಕಾನೂನಿನಲ್ಲಿ ಅದಕ್ಕೆ ಸಂಬಂಧಿಸಿದ ವಿವರಗಳನ್ನು ಸೂಚಿಸಿರುತ್ತದೆ. ತನ್ನ ಆಡಳಿತ ವ್ಯಾಪ್ತಿಯ ಪ್ರದೇಶದ ವಿವಿಧ ಕೇಂದ್ರಗಳಲ್ಲಿ ತನ್ನ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸಲು ಮುಕ್ತ ವಿಶ್ವವಿದ್ಯಾಲಯ ಸ್ಥಳೀಯವಾಗಿ ಗೌರವ ಅಧ್ಯಾಪಕರನ್ನು ನೇಮಿಸಿಕೊಳ್ಳುವುದರ ಜೊತೆಗೆ ಕೇಂದ್ರದಲ್ಲಿ ಪೂರ್ಣಕಾಲದ ಪ್ರಾಧ್ಯಾಪಕರನ್ನು ವಿವಿಧ ವಿಷಯಗಳಲ್ಲಿ ನೇಮಕ ಮಾಡಿಕೊಳ್ಳಬೇಕಾಗುತ್ತದೆ.

ಶೈಕ್ಷಣಿಕ ಕಾರ್ಯಕ್ರಮಗಳು : ಮುಕ್ತ ವಿಶ್ವವಿದ್ಯಾಲಯ ಬಯಸುವವರಿಗೆಲ್ಲ ಪ್ರವೇಶಾವಕಾಶ ನೀಡಿದರೂ ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟವನ್ನು ಕಾಪಾಡಿಕೊಂಡು ಬರಬೇಕಾಗಿರುವುದರಿಂದ ಪರಿಣಾಮಕಾರಿಯಾದ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸಬೇಕಾಗುತ್ತದೆ. ಪತ್ರಮುಖೇನ ಶಿಕ್ಷಣ, ರೇಡಿಯೋ ಮತ್ತು ಟೆಲಿವಿಷನ್ ಪ್ರಸಾರ ಪಾಠಗಳು ಮತ್ತು ವಸತಿ ಪಠ್ಯಕ್ರಮ (residential teaching) ಇವುಗಳ ಮೂಲಕ ವಿದ್ಯಾರ್ಥಿಗಳಿಗೆ ಶಿಕ್ಷಣಸೌಲಭ್ಯವನ್ನೊದಗಿಸಬೇಕು. ಅದಕ್ಕಾಗಿ ಈಗಾಗಲೆ ದೇಶದಲ್ಲಿ ಅಭಿವೃದ್ಧಿಯಾಗಿರುವ ಅಂಚೆ ಶಿಕ್ಷಣ ತಂತ್ರವನ್ನು ಬಳಸಿಕೊಳ್ಳಬೇಕು. ಆಡಳಿತ ವ್ಯಾಪ್ತಿಯ ಪ್ರದೇಶದ ಪ್ರಮುಖ ನಗರಗಳಲ್ಲಿ ರೇಡಿಯೋ ಶ್ರವಣಕೇಂದ್ರಗಳನ್ನು ಏರ್ಪಡಿಸಬೇಕು. ಟೆಲಿವಿಷನ್ ಪ್ರಸಾರ ಭಾರತದಲ್ಲಿ ಈಗ ತಾನೆ ಕ್ರಮಕ್ರಮವಾಗಿ ವಿಸ್ತರಿಸುತ್ತಿದೆ. ಅದರ ಸೌಲಭ್ಯ ಲಭಿಸಿರುವ ಕಡೆಗಳಲ್ಲಿ ದರ್ಶನಕೇಂದ್ರಗಳನ್ನು (viewing centre) ಸ್ಥಾಪಿಸಬೇಕು. ವಿಶ್ವವಿದ್ಯಾಲಯದ ಕೇಂದ್ರ ಕಾರ್ಯಾಲಯಕ್ಕೆ ಹತ್ತಿರವಿರುವ ಪ್ರಸಾರ ಕೇಂದ್ರದಿಂದ ದಕ್ಷ ಅಧ್ಯಾಪಕರಿಂದ ಪಾಠ ಪ್ರಸಾರವನ್ನು ಪೂರ್ವ

ಯೋಜಿತ ಕ್ರಮದಂತೆ ಏರ್ಪಡಿಸಬೇಕು. ಆ ಕಾರ್ಯಕ್ರಮವನ್ನು ಮುಂಚಿತವಾಗಿ ವಿದ್ಯಾರ್ಥಿಗಳಿಗೆ ತಿಳಿಸಬೇಕು. ಬೇಸಗೆ ರಜದಲ್ಲೋ ಇತರ ದೀರ್ಘಾವಧಿ ರಜಾ ಕಾಲಗಳಲ್ಲೋ ಪ್ರಮುಖ ನಗರಗಳಲ್ಲಿ ವಿವಿಧ ವಿಷಯಗಳ ಮೇಲೆ ಉಪನ್ಯಾಸಮಾಲೆ ಏರ್ಪಡಿಸಬೇಕು. ಬರುವ ವಿದ್ಯಾರ್ಥಿಗಳಿಗೆ ಊಟ ವಸತಿಗಳಿಗೆ ಏರ್ಪಡಿಸಬೇಕಾಗುತ್ತದೆ. ಆಯಾ ಕೇಂದ್ರಗಳಲ್ಲಿ ಸ್ಥಳೀಯ ಅಧ್ಯಾಪಕರ ಸಹಾಯ ಸಹಕಾರಗಳಿಂದ ಉಪನ್ಯಾಸಮಾಲೆಯನ್ನು ಏರ್ಪಡಿಸುವುದಾದರೂ ವಿಶ್ವವಿದ್ಯಾಲಯದ ಆಯಾ ವಿಭಾಗದ ಪ್ರಾಧ್ಯಾಪಕರು ಮಾರ್ಗದರ್ಶನ ನೀಡಬೇಕು.

ಪರೀಕ್ಷಾ ವ್ಯವಸ್ಥೆ : ಬೇಡಿ ಬರುವವರಿಗೆಲ್ಲ ಪ್ರವೇಶಾವಕಾಶ ನೀಡಿದರೂ ಮುಕ್ತ ವಿಶ್ವವಿದ್ಯಾಲಯ ಕಟ್ಟುನಿಟ್ಟಿನ ಪರೀಕ್ಷಾ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಸಿಮೆಸ್ಟರ್ ಪದ್ಧತಿಯನ್ನು ಅನುಸರಿಸಿ ಆಯಾ ಅರ್ಧವರ್ಷದ ಪಾಠಪ್ರವಚನಗಳನ್ನು ಅಂದಿಗಂದಿಗೆ ಪರೀಕ್ಷಿಸುತ್ತ ಹೋಗಬಹುದು. ಪರೀಕ್ಷೆಯಲ್ಲಿ ಪಡೆದ ಅಂಕಗಳ ಜೊತೆಗೆ ವಿದ್ಯಾರ್ಥಿಗಳಿಗೆ ಹಂಚಿಕೆ ಹಾಕಿಕೊಟ್ಟು ಬರೆದು ಬಂದ ಪ್ರಬಂಧಾದಿಗಳನ್ನು ಪರೀಕ್ಷಿಸಿ ಆಂತರಿಕ ಮೌಲ್ಯಮಾಪನ ಮಾಡಿ ಬಂದ ಅಂಕಗಳನ್ನು ಪರಿಗಣನೆಗೆ ತೆಗೆದುಕೊಂಡು ಫಲಿತಾಂಶವನ್ನು ನಿರ್ಧರಿಸುವುದು ಒಳ್ಳೆಯದು. ಪರೀಕ್ಷಾ ವ್ಯವಸ್ಥೆಯಲ್ಲಿ ಉತ್ತರ ಪತ್ರಿಕೆಗಳ ಮೌಲ್ಯಮಾಪನದಲ್ಲಿ ಆಯಾ ಕ್ಷೇತ್ರದಲ್ಲಿರುವ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳ ಅಧ್ಯಾಪಕವರ್ಗದವರ ಸಹಾಯವನ್ನು ಅಗತ್ಯವಾಗಿ ಪಡೆದುಕೊಳ್ಳಬೇಕು. ಆ ಮೂಲಕ ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟವನ್ನು ಕಾಯ್ದುಕೊಳ್ಳಲು ಅವಕಾಶವಾಗುತ್ತದೆ. ಸಿಮೆಸ್ಟರ್ ಪರೀಕ್ಷೆ ನಡೆಸಲು ಆಯಾ ಪ್ರದೇಶದ ಪ್ರಮುಖ ಸ್ಥಳಗಳಲ್ಲಿ ಪರೀಕ್ಷಾಕೇಂದ್ರಗಳನ್ನು ಏರ್ಪಡಿಸಬೇಕು.

ಆರ್ಥಿಕ ವ್ಯವಸ್ಥೆ : ಮುಕ್ತ ವಿಶ್ವವಿದ್ಯಾಲಯ ರಾಷ್ಟ್ರೀಯ ಪ್ರಾಮುಖ್ಯದ ಶಿಕ್ಷಣ ಸಂಸ್ಥೆಯಾದ್ದರಿಂದ ಅದು ತನ್ನೆಲ್ಲ ವೆಚ್ಚಕ್ಕೆ ಕೇಂದ್ರಸರ್ಕಾರದ ಬೊಕ್ಕಸದಿಂದ ಯು.ಜಿ.ಸಿ.ಯ ಮೂಲಕ ಪಡೆದುಕೊಳ್ಳಬೇಕಾಗುತ್ತದೆ. ಆಯಾ ರಾಜ್ಯಗಳಲ್ಲಿ ಏರ್ಪಡಿಸುವ ವಸತಿ ಉಪನ್ಯಾಸ ಮಾಲೆಗಳಿಗೆ ಬೇಕಾಗುವಷ್ಟು ಹಣವನ್ನು ಆಯಾ ರಾಜ್ಯ ಸರ್ಕಾರದಿಂದ ಪಡೆದುಕೊಳ್ಳಬಹುದು. ಇವುಗಳ ಜೊತೆಗೆ ವಿದ್ಯಾರ್ಥಿಗಳಿಂದ ಶುಲ್ಕದ ರೂಪದಲ್ಲೂ ದಾನಗಳಿಂದಲೂ ದತ್ತಿ ಪುದುವಟ್ಟುಗಳ ರೂಪದಲ್ಲೂ ಹಣ ಒದಗುತ್ತದೆ.

ಅಂಚೆ ಶಿಕ್ಷಣ ಮತ್ತು ಮುಕ್ತ ವಿಶ್ವವಿದ್ಯಾಲಯ : ಅಂಚೆ ಶಿಕ್ಷಣದಲ್ಲಿ ಸಾಂಪ್ರದಾಯಿಕ ವಿಶ್ವವಿದ್ಯಾಲಯ ನಿಷ್ಕರ್ಷಿಸಿರುವ ಎಲ್ಲಾ ಪ್ರವೇಶ ನಿಯಮಗಳನ್ನು ಅನುಸರಿಸಲಾಗುತ್ತಿದೆ. ವಿದ್ಯಾರ್ಥಿ ಪಡೆದಿರುವ ಸಾಂಪ್ರದಾಯಿಕ ಶಿಕ್ಷಣಾರ್ಹತೆ, ಅವನು ಪಿಯುಸಿ ತರಗತಿಯಲ್ಲಿ ವ್ಯಾಸಂಗಕ್ಕೆ ಆರಿಸಿಕೊಂಡಿದ್ದ ಸಂಬಂಧಿ ಅಥವಾ ಸಜಾತೀಯ (cognate) ವಿಷಯ ಈ ಅಂಶಗಳನ್ನು ಆಧಾರಮಾಡಿಕೊಂಡೇ ಪ್ರವೇಶಾವಕಾಶ ನೀಡುವುದು. ಆದರೆ ವಿದ್ಯಾರ್ಥಿಗಳಿಗೆ ಹಾಜರಾತಿಯಲ್ಲಿ ಮಾತ್ರ ವಿನಾಯಿತಿ ನೀಡಿರುತ್ತದೆ. ಮುಕ್ತ ವಿಶ್ವವಿದ್ಯಾಲಯದಲ್ಲಾದರೆ ಸಾಂಪ್ರದಾಯಿಕ ಶಿಕ್ಷಣಾರ್ಹತೆ ಮತ್ತು ಹಾಜರಾತಿ ಎರಡಕ್ಕೂ ವಿನಾಯಿತಿ ಇರುತ್ತದೆ. ಇವೆರಡೂ ವ್ಯವಸ್ಥೆಗಳ ಕಾರ್ಯಕ್ರಮಗಳಲ್ಲೂ ಸಾಮ್ಯವಿರುತ್ತದೆ. ಅಂಚೆ ಮತ್ತು ತೆರಪಿನ ಶಿಕ್ಷಣ ವ್ಯವಸ್ಥೆಯಲ್ಲೂ ವಸತಿ ಉಪನ್ಯಾಸಮಾಲೆಗೆ ಬದಲಾಗಿ ಸಂಪರ್ಕ ಕಾರ್ಯಕ್ರಮದ (contact programme) ವ್ಯವಸ್ಥೆಯಿರುತ್ತದೆ. ಅಗತ್ಯವೆನಿಸಿದರೆ ಅದೂ ಪ್ರಸಾರ ಪಾಠ

ಗಳನ್ನು ಕೈಗೊಳ್ಳಬಹುದು. ವಿದ್ಯಾರ್ಥಿಗಳು ತೆರಬೇಕಾದ ಶುಲ್ಕದ ಪ್ರಮಾಣದಲ್ಲೂ ಪರೀಕ್ಷಾ ವ್ಯವಸ್ಥೆಯಲ್ಲೂ ಸಾಮ್ಯವಿರುತ್ತದೆ. ಎಂದರೆ ಅಂಚೆ ಮತ್ತು ತೆರಪಿನ ಶಿಕ್ಷಣಕ್ಕೂ ಮುಕ್ತ ವಿಶ್ವವಿದ್ಯಾಲಯಕ್ಕೂ ಅಷ್ಟೇನೂ ವ್ಯತ್ಯಾಸವಿಲ್ಲ.

ಮೈಸೂರಿನಲ್ಲಿ ಪ್ರಾದೇಶಿಕ ಮುಕ್ತ ವಿಶ್ವವಿದ್ಯಾಲಯ : ಹೊಸದಾಗಿ ಒಂದು ಮುಕ್ತ ವಿಶ್ವವಿದ್ಯಾಲಯವನ್ನು ಆರಂಭಿಸಬೇಕೆಂದು ಆಲೋಚಿಸಿದ ಮೇಲೆ ಅದು ಸಂಘಟಿಸಿ ಅಸ್ತಿತ್ವಕ್ಕೆ ಬರಬೇಕಾದರೆ ಹಲವಾರು ವರ್ಷಗಳೇ ಬೇಕಾಗುತ್ತವೆ. ಅನಂತರ ಅವು ತನ್ನ ಕಾರ್ಯಕ್ರಮ ಗಳನ್ನು ರೂಪಿಸಿ ವ್ಯವಸ್ಥೆಗೊಳಿಸಿ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡಲು ಮತ್ತೆ ಹಲವು ವರ್ಷಗಳು ಬೇಕಾಗುತ್ತವೆ. ಈ ವಿಳಂಬವನ್ನು ತಪ್ಪಿಸಲು ಸದ್ಯದಲ್ಲಿ ಅಸ್ತಿತ್ವದಲ್ಲಿರುವ ಅಂಚೆ ಮತ್ತು ತೆರಪಿನ ಶಿಕ್ಷಣ ವಿಭಾಗವನ್ನು ಮುಕ್ತ ವಿಶ್ವವಿದ್ಯಾಲಯವಾಗಿ ಪರಿವರ್ತಿಸುವುದು ಬಹಳ ಸುಲಭ. ಮುಕ್ತ ವಿಶ್ವವಿದ್ಯಾಲಯಕ್ಕೆ ಅದನ್ನು ಮೂಲಕೇಂದ್ರವನ್ನಾಗಿ ಮಾಡಿಕೊಂಡು ಇನ್ನುಳಿದ ಅಗತ್ಯ ವ್ಯವಸ್ಥೆಯನ್ನು ಅಲ್ಲಿರತಕ್ಕ ಸಿಬ್ಬಂದಿಯ ಸಹಾಯದಿಂದ ಅತ್ಯಲ್ಪ ಕಾಲದಲ್ಲಿ ಏರ್ಪಡಿಸಿಕೊಂಡು ಯಾವ ವಿಳಂಬವೂ ಇಲ್ಲದೆ, ನೂತನ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರ ಬಹುದು.

ಸದ್ಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ನಡೆಸುತ್ತಿರುವ ಅಂಚೆ ಮತ್ತು ತೆರಪಿನ ಶಿಕ್ಷಣ ಇಡೀ ಭರತ ಖಂಡದಲ್ಲೇ ಸುವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿರುವುದೆಂಬ ಖ್ಯಾತಿಯನ್ನು ಪಡೆದಿದ್ದು ಜನಪ್ರಿಯತೆಯನ್ನು ಗಳಿಸಿರುವುದರ ಜೊತೆಗೆ ಆ ರೀತಿಯ ಶಿಕ್ಷಣ ಯಶಸ್ಸನ್ನು ಸಾಧಿಸಬಲ್ಲದೆಂದು ತೋರಿಸಿಕೊಟ್ಟು ತನ್ನ ಅಸ್ತಿತ್ವವನ್ನು ಸಾರ್ಥಕಗೊಳಿಸಿಕೊಂಡಿದೆ. ಆದ್ದ ರಿಂದ ದಕ್ಷಿಣದ ಪ್ರಾದೇಶಿಕ ಮುಕ್ತ ವಿಶ್ವವಿದ್ಯಾಲಯವನ್ನು ಇಲ್ಲಿ ಸ್ಥಾಪಿಸುವುದು ಸೂಕ್ತವೂ ಸುಲಭವೂ ಆದ ಕಾರ್ಯವೆಂದು ತೋರುತ್ತದೆ. ಸದ್ಯದಲ್ಲಿ ಅಸ್ತಿತ್ವದಲ್ಲಿರುವ ಮೈಸೂರು ವಿಶ್ವವಿದ್ಯಾಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ವಿಭಾಗವನ್ನು ಮುಕ್ತ ವಿಶ್ವ ವಿದ್ಯಾಲಯವಾಗಿ ಪರಿವರ್ತಿಸಲು 1) ಪಾರ್ಲಿಮೆಂಟು (ಅಥವಾ ರಾಜ್ಯವಿಧಾನಸಭೆ ?) ಶಾಸನ ವೊಂದರ ಮೂಲಕ ನೂತನ ವಿಶ್ವವಿದ್ಯಾಲಯವನ್ನು ಸಂಘಟಿಸಬೇಕು. 2) ವಿದ್ಯಾರ್ಥಿಗಳಿಗೆ ಹಾಜರಾತಿಯಂತೆ ಸಾಂಪ್ರದಾಯಿಕ ಶಿಕ್ಷಣಾರ್ಹತೆಯಲ್ಲೂ ವಿನಾಯಿತಿ ನೀಡಬೇಕು. ಮೇಲೆ ಸೂಚಿಸಿರುವಂತೆ ಸೆನೆಟ್, ಸಿಂಡಿಕೇಟ್, ಅಕೆಡೆಮಿಕ್ ಕೌನ್ಸಿಲ್ ಮುಂತಾದವನ್ನು ಶಾಸನದ ರೀತಿ ರಚಿಸಿ ಸದ್ಯದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಯನ್ನು ನೂತನ ವಿಶ್ವವಿದ್ಯಾಲಯದ ಸಿಬ್ಬಂದಿ ಯಾಗಿ ಪರಿವರ್ತಿಸಿಕೊಳ್ಳಬೇಕು. ಮೇಲೆ ಸೂಚಿಸಿದ ಸೌಲಭ್ಯಗಳ ದೃಷ್ಟಿಯಿಂದ ಭಾರತದಲ್ಲಿ ದಕ್ಷಿಣದ ಪ್ರಾದೇಶಿಕ ವಿಶ್ವವಿದ್ಯಾಲಯ ಮೈಸೂರಿನಲ್ಲಿ ಆರಂಭವಾದರೆ ಅದು ಭಾರತದ ಪ್ರಪ್ರಥಮ ಮುಕ್ತ ವಿಶ್ವವಿದ್ಯಾಲಯವೂ ಪ್ರಪಂಚದ ಎರಡನೆಯ ಮುಕ್ತ ವಿಶ್ವವಿದ್ಯಾಲಯವೂ ಆಗಬಹುದಾದ ಕೀರ್ತಿಗೆ ಪಾತ್ರವಾಗುತ್ತದೆ. ಈಚೆಗೆ ಇದು 25 ವರ್ಷ ತುಂಬಿದವರು ಪ್ರಥಮ ಪದವಿಗೂ 30 ವರ್ಷ ತುಂಬಿದವರು ಸ್ನಾತಕೋತ್ತರ ಪದವಿಗೂ ಕೂಡಲು (ಕೆಲವು ವಿಷಯಗಳಲ್ಲಿ ಮಾತ್ರ) ಯಾವ ವಿದ್ಯಾರ್ಹತೆಯಿಲ್ಲದವರಿಗೂ ಅವಕಾಶ ನೀಡಿ ಆ ಮುಖವಾಗಿ ಮತ್ತೊಂದು ಹೆಜ್ಜೆ ಮುಂದಿಟ್ಟಿದೆ.

ಟೀಕೆಗಳು ಮತ್ತು ಸಮಾಧಾನ : ಮುಕ್ತ ವಿಶ್ವವಿದ್ಯಾಲಯದ ಬಗ್ಗೆ ಸಂಪ್ರದಾಯ

ಬದ್ಧ ಕ್ಷೇತ್ರಗಳಿಂದ ಬಗೆಬಗೆಯ ಟೀಕೆಗಳು ಬರುತ್ತಿವೆ. ಅವುಗಳಲ್ಲಿ ಪ್ರಧಾನವಾದವನ್ನು ಇಲ್ಲಿ ಪರಿಶೀಲಿಸಬೇಕಾಗಿದೆ.

ಭಾರತದಲ್ಲಿ ಈಗಾಗಲೇ ಉನ್ನತ ಶಿಕ್ಷಣಕ್ಕೆ ಬೇಕಾದ ಹಾಗೆ ಸೌಲಭ್ಯವಿದ್ದು ವರ್ಷಂಪ್ರತಿ ಲಕ್ಷಗಟ್ಟಲೆ ಪದವೀಧರರು ಹೊರಬರುವಂತಾಗಿ ಆಗಲೆ ಉತ್ಕಟ ಸ್ಥಿತಿಯನ್ನು ಮುಟ್ಟಿರುವ ನಿರುದ್ಯೋಗ ಸಮಸ್ಯೆ ಮುಕ್ತ ವಿಶ್ವವಿದ್ಯಾಲಯದ ಆರಂಭದಿಂದ ಇನ್ನೂ ಉಲ್ಬಣಗೊಳ್ಳುತ್ತದೆಂಬುದು ಒಂದು ಟೀಕೆ. ನಿಜ, ಹೊರಬರುವ ಪದವೀಧರರ ಸಂಖ್ಯೆಯೇನೋ ಹೆಚ್ಚಾಗುತ್ತದೆ. ಆದರೆ ಮುಕ್ತವಿಶ್ವವಿದ್ಯಾಲಯಕ್ಕೆ ಸೇರತಕ್ಕವರೆಲ್ಲ ಆಗಲೆ ಉದ್ಯೋಗನಿರತವಾಗಿರುವ ವಯಸ್ಕರು. ಅವರು ಪದವಿಗಳನ್ನು ಪಡೆದರೂ ತಮ್ಮ ಉದ್ಯೋಗದಲ್ಲಿ ಉನ್ನತಿಗಾಗಿ ಪ್ರಯತ್ನಿಸಬಹುದು. ಆದರೆ ಅವರು ಶಿಕ್ಷಣ ಪಡೆಯುವುದರಿಂದ ನಿರುದ್ಯೋಗ ಸಮಸ್ಯೆ ಅಷ್ಟೇನೂ ಹೆಚ್ಚಲಾರದು. ಜೊತೆಗೆ ಅವರಲ್ಲನೇಕರು ಕೇವಲ ಪದವಿಗಾಗಿ ಜ್ಞಾನಾರ್ಜನೆ ಮಾಡತಕ್ಕವರಾಗಿದ್ದು ಉದ್ಯೋಗಾಕಾಂಕ್ಷಿಗಳಾಗಿರುವುದಿಲ್ಲ. ತಾವು ಖಾಸಗಿಯಾಗಿ ವ್ಯಾಸಂಗ ಮಾಡಿ ಪಾಂಡಿತ್ಯ ಸಾಧಿಸಿರುವ ಸಾಹಸದ ಕುರುಹಿಗಾಗಿ ಪದವಿ ಪಡೆಯುವವರೂ ಇರುತ್ತಾರೆ.

ಎರಡನೆಯದಾಗಿ ಗುರುಗಳ ಆದರ್ಶದ ಪ್ರಭಾವ ಶಿಷ್ಯರ ಜೀವನದ ಮೇಲೆ ಸತ್ಪರಿಣಾಮ ಮಾಡಿಸುವುದು ಶಿಕ್ಷಣದಿಂದ ಸಾಧನೆಯಾಗಬೇಕಾದ ಒಂದು ಪ್ರಧಾನ ಅಂಶವಾಗಿದ್ದು ಮುಕ್ತ ವಿಶ್ವವಿದ್ಯಾಲಯದಲ್ಲಿ ಆ ಸತ್ಪರಿಣಾಮಕ್ಕೆ ಅವಕಾಶವೇ ಇಲ್ಲವಾಗಿ ಅದಷ್ಟರಮಟ್ಟಿಗೆ ಅದು ಒದಗಿಸಬಹುದಾದ ಶಿಕ್ಷಣ ಸೌಲಭ್ಯ ವೈಫಲ್ಯಕ್ಕೆ ಎಡೆಗೊಡುವುದೆಂಬುದು ಮತ್ತೊಂದು ಟೀಕೆ. ಈ ಟೀಕೆ ಅಂಚೆ ಮತ್ತು ತೆರಪಿನ ಶಿಕ್ಷಣಕ್ಕೂ ಅನ್ವಯಿಸುವುದಲ್ಲವೆ ? ಸಾಂಪ್ರದಾಯಿಕ ವಿಶ್ವವಿದ್ಯಾಲಯದಲ್ಲಿ ಈ ಉದ್ದೇಶ ಎಷ್ಟರಮಟ್ಟಿಗೆ ಸಾಧನೆಯಾಗುತ್ತಿದೆಯೆಂದು ಅಂಥವರು ಆಲೋಚಿಸಲಿ. ಗುರುಗಳು ಆದರ್ಶದ ವ್ಯಕ್ತಿಗಳಾದರೇನೋ ಆ ಪರಿಣಾಮ ವಿಹಿತವಾಗಿರಬಹುದು. ಹಾಗಿಲ್ಲದಾಗ ಆಗಬಹುದಾದ ಪರಿಣಾಮ ಅನರ್ಥಕ್ಕೆ ಎಡೆಗೊಡುವುದಿಲ್ಲವೆ ? ಮೇಲಾಗಿ ಅವರ ಆದರ್ಶದ ಪ್ರಭಾವ ಎಳೆಯ ಮಕ್ಕಳ ಮೇಲೆ ಪರಿಣಾಮಕಾರಿಯಾಗುವ ಮಟ್ಟಿಗೆ ವಯಸ್ಕರ ಮೇಲೆ ಆಗಲಾರದು. ಅವರು ಅಂದಿಗಾಗಲೆ ತಮ್ಮ ಜೀವನವನ್ನು ನಿರ್ದಿಷ್ಟ ಮುಂಬಿನಲ್ಲಿ ರೂಪಿಸಿಕೊಂಡಿದ್ದು ನೂತನ ಆದರ್ಶಗಳನ್ನು ಅಷ್ಟಾಗಿ ಹುಡುಕಹೋಗಲು ಪ್ರಯತ್ನಿಸುತ್ತಿರಲಾರರು. ಅಲ್ಲದೆ ಮುಕ್ತವಿಶ್ವವಿದ್ಯಾಲಯದ ಕಾರ್ಯಕ್ರಮದಲ್ಲಿ ಅಧ್ಯಾಪಕರನ್ನು ನೋಡುವ ಅವಕಾಶ ಇಲ್ಲದೇ ಇಲ್ಲ. ವಸತಿ ಉಪನ್ಯಾಸಮಾಲೆಯಲ್ಲಿ ಆ ಅವಕಾಶ ಇದೆ. ಟೆಲಿವಿಷನ್ ಪಾಠದಲ್ಲಿ ಅಧ್ಯಾಪಕರನ್ನು ನೋಡಬಹುದು. ರೇಡಿಯೋ ಪಾಠಗಳಲ್ಲಿ ಅವರ ಧ್ವನಿಯನ್ನು ಕೇಳಬಹುದು. ಆದ್ದರಿಂದ ಈ ಟೀಕೆ ಅಷ್ಟೇನೂ ಸಾಧುವೆನಿಸಲಾರದು.

ಮೂರನೆಯದಾಗಿ, ಸಾಮಾಜಿಕ ನ್ಯಾಯ, ಸಮಾನ ಸೌಲಭ್ಯ ಮುಂತಾದ ತತ್ವದೃಷ್ಟಿಯ ಹೆಸರಿನಲ್ಲಿ ದಾರಿಯಲ್ಲಿ ಹೋಗುವ ದಾಸಯ್ಯಗಳಿಗೆಲ್ಲ ಪದವೀ ತರಗತಿಗೆ ಸೇರಲು ಅವಕಾಶವಿತ್ತರೆ ಶಿಕ್ಷಣದ ಗುಣಮಟ್ಟದ ಪಾಡೇನು ? ಪದವಿಗಳಿಗೆ ಬೆಲೆಯೇನು ? ಎಂಬುದು ಮತ್ತೊಂದು ಟೀಕೆ. ನಿಜ, ಹಾಗಾಗಬಾರದು. ಆದರೆ ಹಾಗಾಗುವುದೆಂದು ಹೇಗೆ ಹೇಳುವುದು ? ಇಂಗ್ಲೆಂಡಿನಲ್ಲೂ ಮುಕ್ತ ವಿಶ್ವವಿದ್ಯಾಲಯದ ಬಗ್ಗೆ ಈ ಟೀಕೆ ಮಾಡಲಾಗಿತ್ತು ; ಅಂಚೆ ಮತ್ತು ತೆರಪಿನ ಶಿಕ್ಷಣದ ಬಗ್ಗೆಯೂ ನಮ್ಮ ದೇಶದಲ್ಲಿ ಇದೇ ಟೀಕೆಯನ್ನು ಮೊದಮೊದಲು ಮಾಡಲಾಗಿತ್ತು.

ಆದರೆ ಇವೆರಡು ಸಂದರ್ಭಗಳೂ ಆ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ಬರೆದಿದ್ದ ಉತ್ತರಗಳು ಅಂಥ ಭೀತಿಗೆ ಅವಕಾಶವಿಲ್ಲವೆಂಬುದನ್ನು ಸ್ಪಷ್ಟಪಡಿಸಿವೆ. ಗುಣಮಟ್ಟವನ್ನು ಕಾಪಾಡಿಕೊಂಡು ಬರುವ ಹೊಣೆಗಾರಿಕೆಯನ್ನು ಹೊರುವುದಕ್ಕಾಗಿಯೆ ಮುಕ್ತ ವಿಶ್ವವಿದ್ಯಾಲಯದ ವಿದ್ವನ್ಮಂಡಲಿಗಳಲ್ಲೂ ಪರೀಕ್ಷಾಮಂಡಲಿಗಳಲ್ಲೂ ಮೌಲ್ಯಮಾಪನದಲ್ಲೂ ಸಾಂಪ್ರದಾಯಿಕ ವಿಶ್ವವಿದ್ಯಾಲಯದ ಪ್ರತಿನಿಧಿಗಳನ್ನು ಸೇರಿಸಿಕೊಂಡಿರುತ್ತದೆ.

ಕೊನೆಯದಾಗಿ, ಎಲ್ಲ ರೀತಿಯ ಪ್ರವೇಶಾವಶ್ಯಕತೆಗಳನ್ನೂ ತೆಗೆದುಹಾಕಿ ಮುಕ್ತ ವಿಶ್ವವಿದ್ಯಾಲಯ ಸದ್ಯದಲ್ಲಿ ಅಸ್ತಿತ್ವದಲ್ಲಿರುವ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಿಗೆ ಪ್ರತಿಸ್ಪರ್ಧಿಯಾಗಿ ಪರಿಣಮಿಸಿ ಅವುಗಳ ಅವನತಿಗೆ ಕಾರಣವಾಗಬಹುದೆಂಬುದು ಮಗದೊಂದು ಟೀಕೆ. ಸದ್ಯದಲ್ಲಿ ಪ್ರವೇಶಾವಕಾಶಕ್ಕಾಗಿ ನೂಕುನುಗ್ಗಲನ್ನನುಭವಿಸುತ್ತಿರುವ ಆ ವಿಶ್ವವಿದ್ಯಾಲಯಗಳಲ್ಲಿ ಮುಕ್ತವಿಶ್ವವಿದ್ಯಾಲಯದ ಸ್ಥಾಪನೆಯಿಂದ ಪ್ರವೇಶದ ಒತ್ತಡ ಸ್ವಲ್ಪಮಟ್ಟಿಗಾದರೂ ಕಡಮೆಯಾಗುತ್ತದೆ. ಅದರಿಂದ ಅಲ್ಲಿನ ಶಿಕ್ಷಣ ಕಾರ್ಯಕ್ರಮಗಳು ಸುಸೂತ್ರವಾಗಿ ನೆರವೇರುವುದರ ಜೊತೆಗೆ ವಿದ್ಯಾರ್ಥಿಗಳಲ್ಲಿ ಶಿಸ್ತು ನೆಲಸುವಂತೆ ಮಾಡುವುದು ಸಾಧ್ಯವಾಗುತ್ತದೆ. ಜೊತೆಗೆ ವಿಶ್ವವಿದ್ಯಾಲಯದ ಆಡಳಿತ ದಕ್ಷತೆಯೂ ಹೆಚ್ಚುತ್ತದೆ. ಎಂದರೆ ಮುಕ್ತವಿಶ್ವವಿದ್ಯಾಲಯ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಿಗೆ ಪ್ರತಿಸ್ಪರ್ಧಿಯಾಗುವುದರ ಬದಲು ಅವುಗಳನ್ನು ಕೊರೆದು ತಿನ್ನುತ್ತಿರುವ ಹಲವು ಉತ್ಕಟ ಸಮಸ್ಯೆಗಳನ್ನು ನಿವಾರಿಸಲು ಸಹಾಯ ಮಾಡುತ್ತದೆ.

ಒಟ್ಟಿನಲ್ಲಿ ಮುಕ್ತ ವಿಶ್ವವಿದ್ಯಾಲಯದ ಬಗ್ಗೆ ಬರುತ್ತಿರುವ ಟೀಕೆಗಳು ಮೊದಲ ನೋಟಕ್ಕೆ ವಾಸ್ತವವೆಂದು ತೋರಬಹುದಾದರೂ ಸೂಕ್ಷ್ಮವಾಗಿ ಆಲೋಚಿಸಿದಾಗ ಆ ಯೋಜನೆಯನ್ನು ಕೈಬಿಡಬೇಕಾಗುವಷ್ಟು ಸತ್ಯಾಂಶದಿಂದ ಕೂಡಿಲ್ಲವೆಂಬ ಅಂಶ ಸ್ಪಷ್ಟಪಡುತ್ತದೆ.

ಉಪಸಂಹಾರ : ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯ ಇಂಗ್ಲೆಂಡು ಮುಕ್ತ ವಿಶ್ವವಿದ್ಯಾಲಯವನ್ನು ಆರಂಭಿಸಿದಂದಿನಿಂದ ಭಾರತದಲ್ಲೂ ಆರಂಭಿಸುವ ಆಲೋಚನೆಯನ್ನು ಮಾಡುತ್ತಲೇ ಇದೆ. ಅಂದಿಗಂದಿಗೆ ಆ ಬಗ್ಗೆ ಆಶಾಭಾವನೆಯನ್ನೂ ವ್ಯಕ್ತಪಡಿಸುತ್ತ ಬಂದಿದೆ. ಅದರ ದೃಷ್ಟಿಯಲ್ಲಿ ಅಖಂಡ ಭಾರತಕ್ಕೆಲ್ಲ ಒಂದು ಮುಕ್ತ ವಿಶ್ವವಿದ್ಯಾಲಯವನ್ನು ಆರಂಭಿಸುವ ಆಲೋಚನೆ ಇದೆ. ದೇಶಾದ್ಯಂತ ಟೆಲಿವಿಷನ್ ಮತ್ತು ರೇಡಿಯೋ ಕೇಂದ್ರಗಳ ವ್ಯವಸ್ಥೆ, ವಸತಿ ಉಪನ್ಯಾಸ ಮಾಲೆಗಳ ವ್ಯವಸ್ಥೆ, ಪ್ರಾಧ್ಯಾಪಕರ ಮತ್ತು ಇತರ ಸಿಬ್ಬಂದಿಯ ನೇಮಕ ಇವೆಲ್ಲ ಅಗಾಧ ಪ್ರಮಾಣದ ಧನವ್ಯಯಕ್ಕೆ ಅವಕಾಶವಾಗುವುದರಲ್ಲಿ ಅನುಮಾನವಿಲ್ಲ. ಈ ಅನಿವಾರ್ಯದಿಂದಲೋ ಏನೊ ಆ ಕಾರ್ಯ ಇನ್ನೂ ಫಲಿಸದಾಗಿದೆ. ಆದರೆ ಮುಕ್ತ ವಿಶ್ವವಿದ್ಯಾಲಯಗಳನ್ನು ಪ್ರಾದೇಶಿಕವಾಗಿ ಆರಂಭಿಸಿ ಸದ್ಯದಲ್ಲಿ ಅಸ್ತಿತ್ವದಲ್ಲಿರುವ ಅಂಚೆ ಶಿಕ್ಷಣ ವಿಭಾಗವನ್ನೆ ಅದರ ಕೇಂದ್ರವನ್ನಾಗಿ ಮಾಡಿಕೊಂಡರೆ ಆ ಕಾರ್ಯ ಶೀಘ್ರವಾಗಿ ಆಗುವುದಲ್ಲದೆ ಅಧಿಕ ಧನವ್ಯಯವೂ ಬೇಕಾಗುವುದಿಲ್ಲ.

ಭಾರತದ ರಾಜಮನೆತನಗಳಲ್ಲಿ ಪ್ರಜಾಹಿತೈಷಿಗಳೆಂದು ಖ್ಯಾತಿ ಗಳಿಸಿದ ಮೈಸೂರರಸರ ರಾಜಧಾನಿಯಾಗಿದ್ದ ಮೈಸೂರು ನಗರ ರಾಜತ್ವ ಇಲ್ಲವಾದಮೇಲೆ ಕಳೆಗುಂದುತ್ತ ಬರುತ್ತಿದೆ.

ಇಂಥ ಐತಿಹಾಸಿಕ ಮಹತ್ವದ ನಗರಗಳ ಪ್ರಾಮುಖ್ಯ ಕುಂದದಂತೆ ಮಾಡುವುದು ಅಗತ್ಯ. ಸದ್ಯದಲ್ಲಿ ಆ ಮುಖವಾಗಿ ಕರ್ನಾಟಕ ಸರ್ಕಾರ ಯತ್ನ ನಡೆಸುತ್ತಿದೆ. ಇಲ್ಲಿ ಆರೋಗ್ಯ ವಿಶ್ವ ವಿದ್ಯಾಲಯವನ್ನು ಸ್ಥಾಪಿಸುವ ತರದೂದು ನಡೆಯುತ್ತಿದೆ. ಜೊತೆಗೆ ಮುಕ್ತ ವಿಶ್ವವಿದ್ಯಾಲಯವೂ ಇಲ್ಲಿ ಏರ್ಪಡುವುದಾದರೆ ನಶಿಸುತ್ತಿರುವ ಈ ಐತಿಹಾಸಿಕ ನಗರದ ಪ್ರಾಮುಖ್ಯ ಎಂದಿನಂತೆ ಉಳಿದುಕೊಂಡು ಬರಲು ಅವಕಾಶವಾದೀತು.

ಪಿ. ಆರ್. ತಿಪ್ಪೇಸ್ವಾಮಿ

ಕುಶಲ ಲೋಹಶಿಲ್ಪಿ ಎನ್. ವಿ. ಚಿನ್ನಾಚಾರ್

ಸಾಂಸ್ಕೃತಿಕ ಕೇಂದ್ರವಾದ ಮೈಸೂರು ನಗರ ಕಲಾವಿದರ ನೆಲೆವೀಡು. ಇಲ್ಲಿಲ್ಲದ ಕಲಾವಿದರಿಲ್ಲ. ಶಿಲ್ಪ ಚಿತ್ರ ಸಂಗೀತ ನೃತ್ಯ ಮುಂತಾದ ಲಲಿತ ಕಲಾರಂಗದಲ್ಲಿ ನುರಿತ ಕಲಾವಿದರು ಸಹಸ್ರಾರು ವರ್ಷಗಳಿಂದ ಕನ್ನಡ ನಾಡಿನ ಕೀರ್ತಿಯನ್ನು ಬೆಳಗುತ್ತ ಬಂದಿದ್ದಾರೆ. ಆದರೆ ಅವರ ಜೀವನದಲ್ಲಿ ಕಷ್ಟ ಕಾರ್ಪಣ್ಯಗಳನ್ನು ಪುಂಖಾನುಪುಂಖವಾಗಿ ಕಾಣಬಹುದಾಗಿದೆ. ಅನೇಕ ನೈಜ ಕಲಾವಿದರು ನಿರ್ಲಕ್ಷಿಸಲ್ಪಟ್ಟು ಅವರಿಗೆ ನಿರುತ್ಸಾಹವನ್ನು ತರುವ ಸನ್ನಿವೇಶಗಳು ಕೂಡಿ ಬಂದರೂ ತಮ್ಮ ಕಲಾಭ್ಯಾಸವನ್ನು ಮುಂದುವರಿಸಿದ ಹಠವಾದಿಗಳನ್ನು ಇಲ್ಲಿ ಕಾಣಬಹುದು. ಆದರೆ ಅಂಥವರು ತುಂಬ ವಿರಳ. ಅಂಥವರ ಪಂಕ್ತಿಯಲ್ಲಿ ಶಿಲ್ಪ ಕಲೆಯ ನಿಷ್ಣಾತರಾಗಿದ್ದ ದಿ. ಎನ್. ವಿ. ಚಿನ್ನಾಚಾರ್ಯರು ಅಗ್ರಗಣ್ಯರು. ಇವರ ಶಿಲ್ಪಕೃತಿಗಳನ್ನು ಐದು ಆರು ದಶಕಗಳಲ್ಲಿ ಕಂಡು ಕೊಂಡಾಡದವರಿಲ್ಲ.

ಒಮ್ಮೆ ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿಗಳು ಶಿಲ್ಪಿ ಚಿನ್ನಾಚಾರ್ಯರ ಕಲಾಕೃತಿಗಳನ್ನು ಕಂಡು ಮಂತ್ರಮುಗ್ಧರಾಗಿ. "My heart was full of appreciation and my tongue was active in expression. Not content with it, I belauded your work in writing both to the Dewan and to the Superintendent of Chamarajendra Technical Institute, Mysore," ಎಂದು ಹೇಳಿರುತ್ತಾರೆ. ಚಿನ್ನಾಚಾರ್ಯರ ಕೃತಿಗಳೆಂದರೆ ಅಷ್ಟು ಜೀವಂತ ಕೃತಿಗಳು. ಲೋಹದಲ್ಲೂ ಲಾಲಿತ್ಯವನ್ನು ಮೂಡಿಸಬಲ್ಲ ಐಂದ್ರಜಾಲಿಕ ವಿದ್ಯೆ ಅವರದಾಗಿತ್ತು. ಅಮೋಘ ಕಲಾಕುಶಲತೆಯಲ್ಲಿ ಶ್ರೀಯುತರು ಅದ್ವಿತೀಯ ಪ್ರೌಢಿಮೆಯನ್ನು ಗಳಿಸಿದ್ದರು.

ಚಿನ್ನಾಚಾರ್ಯರು ರಚಿಸಿರುವ ಕೃತಿಗಳೆಲ್ಲ ಬಹುಮಟ್ಟಿಗೆ ಮನಮೋಹಕ ಮೂರ್ತಿಗಳು. ಇವುಗಳಲ್ಲಿ ಹಸ್ತವಿನ್ಯಾಸ ಮುದ್ರೆಗಳಾಗಲಿ, ಆಯುಧಗಳಾಗಲಿ, ಎಲ್ಲವೂ ಶಾಸ್ತ್ರೋಕ್ತವಾಗಿ ಮೂಡಿಬಂದಿರುತ್ತವೆ. ಇವರು ರಚಿಸಿರುವ ಉಗ್ರಮೂರ್ತಿಗಳಲ್ಲಿ ಶ್ರೀ ಚಾಮುಂಡೇಶ್ವರಿಯ ವಿಗ್ರಹವೂ ಒಂದು. ಇದು ಆಕಾರದಲ್ಲಿ ದೊಡ್ಡದಾಗಿಯೂ ಅನೇಕ ಬಾಹುಗಳನ್ನುಳ್ಳದ್ದಾಗಿಯೂ ಶೋಭಿಸುತ್ತದೆ. ಮುಖದಲ್ಲಿ ಕೋರೆ ದವಡೆ. ಕತ್ತಿನಲ್ಲಿ ರುಂಡಮಾಲೆ—ಇಂತಹ ಮೂರ್ತಿಯನ್ನು ರಚಿಸುವುದೆಂದರೆ ಆಚಾರ್ಯರಿಗೆ ಅಪಾರ ಉತ್ಸಾಹ ಬರುತ್ತಿತ್ತು.

ಚಿನ್ನಾಚಾರ್ಯರಿಗೆ ಶಿಲ್ಪಕಲೆ ರಕ್ತಗತವಾಗಿ ಬಂದಿತ್ತು. ಇವರ ವಂಶದ ಮೂಲ ನಿವಾಸ ಲೋಹಶಿಲ್ಪಕ್ಕೆ ಖ್ಯಾತಿಗೊಂಡ ನಾಗಮಂಗಲ. ಅಲ್ಲಿ ಇವರು 1893ರ ಮಾರ್ಚ್ 23ರಂದು ಜನಿಸಿದ್ದರು. ಇವರ ತಂದೆ ಲೋಹಶಿಲ್ಪದಲ್ಲಿ ಖ್ಯಾತರಾದ ಕಂಪನಿ ವೆಂಕಟಾಚಾರ್ಯರು.

ವೆಂಕಟಾಚಾರ್ಯರ ಆರು ಜನ ಮಕ್ಕಳಲ್ಲಿ ಚಿನ್ನಾಚಾರ್ಯರೇ ದೊಡ್ಡವರು. ಇವರ ಪೂರ್ವಜರು ತ್ರಿಕಾಲ ಅಗ್ನಿಹೋತ್ರಿಗಳಾಗಿ, ದೀಕ್ಷಾಬದ್ಧರಾಗಿ, ಶಿಲ್ಪಕಲೆಯಲ್ಲಿ ಪಂಡಿತರಾಗಿ, ಶಿಲ್ಪ ಆಗಮ ಶಾಸ್ತ್ರ ನಿಪುಣರಾಗಿದ್ದರು. ಇವರು ಕಟ್ಟಿಸಿದ ಕಾಳಿಕಾಂಬ ದೇವಸ್ಥಾನ ಈಗಲೂ ನಾಗಮಂಗಲ ದಲ್ಲಿದೆ. ಅಲ್ಲಿಯ ಶಿಲಾವಿಗ್ರಹ ಮತ್ತು ಉತ್ಸವ ಮೂರ್ತಿಯನ್ನು ಸ್ವತಃ ಚಿನ್ನಾಚಾರ್ಯರ ಪೂರ್ವಿಕರೇ ಮಾಡಿ ಸ್ಥಾಪಿಸಿದರು. ಚಿನ್ನಾಚಾರ್ಯರ ತಾತ ನೀಲಾಚಾರ್ಯರು ಲೋಹಶಿಲ್ಪದಲ್ಲಿ ನುರಿತ ಶಿಲ್ಪಿಗಳೆಂದು ಅಂದಿಗೇ ಹೆಸರು ಗಳಿಸಿದ್ದರು.

ಚಿನ್ನಾಚಾರ್ಯರು ಬಾಲ್ಯದಿಂದಲೂ ತಮ್ಮ ತಂದೆಯವರು ಮಾಡುತ್ತಿದ್ದ ಕಂಚಿನ ವಿಗ್ರಹ ಗಳನ್ನು ನೋಡಿ ನೋಡಿ, ಮನಸ್ಸು ಆ ಕಲೆಯ ಕಡೆ ಸೆಳೆದು, ಚಿಕ್ಕಂದಿನಿಂದಲೇ ಒರಟು ಒರಟಾಗಿ ಕರಡು ವಿಗ್ರಹಗಳನ್ನು ಮನಬಂದಂತೆ ಮಾಡಲು ಕಾತರಪಡುತ್ತಿದ್ದರು. ಮಗನ ಬುದ್ಧಿಶಕ್ತಿ ವಂಶಪಾರಂಪರ್ಯವಾದ ವೃತ್ತಿಯ ಕಡೆ ಹರಿದಿರುವುದನ್ನು ತಂದೆ ಮನಗಂಡು ಅಪರಿ ಮಿತವಾಗಿ ಆನಂದಪಡುತ್ತಿದ್ದರು. ತಮ್ಮ ವಂಶದ ಕೀರ್ತಿ ಸ್ಥಿರವಾಗಿ ಉಳಿಯುವ ಸೂಚನೆ ಯನ್ನು ಮಗನ ಜಾಣ್ಮೆ ತೋರುತ್ತಾ ಬಂದಿತು. ಹಿಡಿದ ಕೆಲಸವನ್ನು ಬಿಡದೆ ಮುಂದು ವರಿಸುವ ಮನೋಭಾವ ಈ ಹುಡುಗನದಾಯಿತು. ಚಿನ್ನಾಚಾರ್ಯರ ಹತ್ತನೆ ವಯಸ್ಸಿನಲ್ಲಿ ಬ್ರಹ್ಮೋಪದೇಶ ಮಾಡಲಾಯಿತು. ಬಾಲಕ ಚಿನ್ನಾಚಾರ್ಯರು ಆ ವೇಳೆಗೆ ಮೂರ್ತಿ ವಿಗ್ರಹ ಗಳನ್ನು ಸೂಕ್ಷ್ಮವಾಗಿಯೂ ನಯವಾಗಿಯೂ ಪ್ರಮಾಣಕ್ಕೆ ತಕ್ಕಂತೆಯೂ ಕಡೆಯಬಲ್ಲವ ರಾಗಿದ್ದುದಕ್ಕೆ ತಂದೆಯ ಅಪರಿಮಿತ ಪ್ರೋತ್ಸಾಹವೇ ಕಾರಣವೆನ್ನಬೇಕು.

ಚಿನ್ನಾಚಾರ್ಯರು ಅರುವತ್ತೆಂಟು ವರ್ಷಗಳ ಹಿಂದೆಯೇ ತಮ್ಮ ಹುಟ್ಟೂರಾದ ನಾಗ ಮಂಗಲವನ್ನು ಬಿಟ್ಟು ಮೈಸೂರಿಗೆ ಬಂದು ನೆಲಸಿದರು. ಇಲ್ಲಿಗೆ ಬಂದಮೇಲೆ ತಂದೆಮಕ್ಕಳಲ್ಲಿ ಸುಪ್ತವಾಗಿದ್ದ ಶಿಲ್ಪಕಲೆ ಪರಿಮಳದಂತೆ ಎಲ್ಲೆಡೆಯಲ್ಲೂ ಹರಡಿಕೊಂಡಿತು. ಪಂಚಲೋಹದ ವಿಗ್ರಹದ ಕೆತ್ತನೆಯಲ್ಲಿ ಇವರಿಬ್ಬರಷ್ಟು ಖ್ಯಾತಿ ಪಡೆದ ಶಿಲ್ಪ ಚತುರರು ಯಾರೂ ಇರಲಿಲ್ಲ ವೆಂದರೂ ಅತಿಶಯೋಕ್ತಿಯಾಗಲಾರದು.

ಚಿನ್ನಾಚಾರ್ಯರ ತಂದೆ ವೆಂಕಟಾಚಾರ್ಯರ ಕೀರ್ತಿ ವಿದೇಶದಲ್ಲೂ ಹರಡಿತ್ತು. ಲಂಡನ್ನಿನಲ್ಲಿ ಜರುಗಿದ ವಿಶ್ವಕಲಾಪ್ರದರ್ಶನದಲ್ಲಿ ಇವರ ಕೃತಿಗೆ ವಿಕ್ಟೋರಿಯ ರಾಣಿಯವರ ಸ್ವರ್ಣಪದಕ ದೊರೆತಿತ್ತು. ಮೈಸೂರಿನಲ್ಲಿ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯ ಕಟ್ಟಡವನ್ನು ನಜರ್‌ಬಾದಿನಿಂದ ಈಗಿನ ಸ್ಥಳಕ್ಕೆ ವರ್ಗಾಯಿಸಿದಾಗ ಚಿನ್ನಾಚಾರ್ಯರ ತಂದೆಯವರ ಸೇವೆ ಯನ್ನು ಅಂದಿನ ಸೂಪರಿಂಟೆಂಡೆಂಟ್ ಡಿ. ಸುಬ್ಬಸ್ವಾಮಿ ಅಯ್ಯರ್ ಅವರು ಪಡೆದುಕೊಂಡಿ ದ್ದರು. ಅವರು ಶಾಲೆಯ ಲೋಹ ವಿಭಾಗಕ್ಕೆ ಬೇಕಾದ ವಸ್ತುಗಳನ್ನು ಮಾಡಿಕೊಟ್ಟರು. ಚಾಮ ರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯ ಹೊಸ ಕಟ್ಟಡದ ಶಂಕುಸ್ಥಾಪನೆ 1901ರ ಜನವರಿ 30ರಂದು ವೈಭವದಿಂದ ಜರಿಗಿತು. ಈ ಸಮಾರಂಭಕ್ಕೆ ಬೇಕಾದ ಕರಂಡವೊಂದನ್ನು ನಿರ್ಮಿ ಸುವ ಸದವಕಾಶ ಚಿನ್ನಾಚಾರ್ಯರ ತಂದೆಯವರಿಗೆ ದೊರೆಯಿತು. ಇವರು $1\frac{1}{2}$ಅಡಿ ಉದ್ದದ ಸೇರಿನಾಕಾರದ ಕರಂಡವೊಂದನ್ನು ನಿರ್ಮಿಸಿ ಅದರ ಸುತ್ತಲೂ ಅಂದಿಗೆ ಅಪ್ರತಿಮ ಎನಿಸಿದ ಕುಸುರಿ ಕೆಲಸವನ್ನು ಮಾಡಿಕೊಟ್ಟರು. ಈ ಕರಂಡದ ಮುಚ್ಚಳದ ಮೇಲ್ಭಾಗದಲ್ಲಿ ವಿರಾಟ್ ವಿಶ್ವಕರ್ಮನ ಮೂರ್ತಿಯನ್ನು ಸ್ಥಾಪಿಸಲಾಗಿತ್ತು. ಶಂಕುಸ್ಥಾಪನೆಯ ಕಾರ್ಯಕ್ರಮ

ನಾಲ್ವಡಿ ಕೃಷ್ಣರಾಜ ಒಡೆಯರ ಆಧ್ಯಕ್ಷತೆಯಲ್ಲಿ ಪ್ರಿನ್ಸ್ ಆಫ್ ವೇಲ್ಸರ ಹಸ್ತದಿಂದ ನೆರವೇರಿತು. ಶಿಲ್ಪಿ ವೆಂಕಟಾಚಾರ್ಯರು ನಿರ್ಮಿಸಿದ ಕರಂಡದ ತುಂಬ ವಜ್ರವೈಡೂರ್ಯಗಳನ್ನು ತುಂಬಿ ಕಟ್ಟಡದ ಉತ್ತರ ದಿಕ್ಕಿನ ಭೂಮಿಯೊಳಗೆ ಇಡಲಾಯಿತು. ಕರಂಡ ನಿರ್ಮಿಸಿದ ಶಿಲ್ಪಿ ವೆಂಕಟಾಚಾರ್ಯರನ್ನು ಪ್ರಿನ್ಸ್ ಆಫ್ ವೇಲ್ಸ್ ಸನ್ಮಾನಿಸಿದರು. ಆನಂತರ ಕೆಲವೇ ವರ್ಷಗಳಲ್ಲಿ ಚಿನ್ನಾಚಾರ್ಯರ ತಂದೆ ತೀರಿಕೊಂಡರು.

ಒಮ್ಮೆ ಬೊಂಬಾಯಿಗೆ ಹೋಗಿಬರುವ ಸದವಕಾಶ ಚಿನ್ನಾಚಾರ್ಯರಿಗೆ ದೊರೆಯಿತು. ಚಿನ್ನಾಚಾರ್ಯರು ತಮ್ಮ ಜೊತೆಯಲ್ಲಿ ಕೋದಂಡರಾಮ, ಸೀತೆ, ಲಕ್ಷ್ಮಣ ಮತ್ತು ಹನುಮಂತನ ಲೋಹವಿಗ್ರಹಗಳನ್ನು ತೆಗೆದುಕೊಂಡು ಹೋಗಿದ್ದರು. ಅವುಗಳ ಮಾಟಕ್ಕೆ, ಸೊಗಸಿಗೆ ಹಲವರು ಗಣ್ಯರು ಚಿನ್ನಾಚಾರ್ಯರನ್ನು ಬಹುವಾಗಿ ಪ್ರಶಂಸಿಸಿದರು. ಬೊಂಬಾಯಿಯಿಂದ ಹೈದರಾಬಾದಿಗೆ ಬರುವ ದಾರಿಯಲ್ಲಿ ಅಜಂತ ಎಲ್ಲೋರ ಗುಹೆಗಳಲ್ಲಿನ ಕಲಾಕೃತಿಗಳನ್ನು ಅವರು ಈಕ್ಷಿಸಿದರು. ಅಲ್ಲಿಯ ಜೀವಂತ ಕಲೆ ಇವರ ಕಲಾಜೀವನವನ್ನೇ ಬದಲಾಯಿಸಿ ನಿರಂತರ ಸ್ಫೂರ್ತಿಗೆ ಕಾರಣವಾಯಿತು. ಹೈದರಾಬಾದ್ ನಗರದಲ್ಲಿದ್ದಷ್ಟು ದಿವಸಗಳೂ ಅಲ್ಲಿನ ಅನೇಕ ಪ್ರತಿಷ್ಠಿತ ವ್ಯಕ್ತಿಗಳನ್ನು ಅವರು ಭೇಟಿಮಾಡಿದರು. ಲೆಫ್ಟಿನೆಂಟ್ ಕರ್ನಲ್ ದೇವರಾಜ ಅರಸರ ಪುತ್ರ ರಾಜಕುಮಾರ್ ದೇವರಾಜ ಅರಸು ಅವರ ಸಹಕಾರ ಪ್ರೋತ್ಸಾಹದಿಂದ ಅಲ್ಲಿನ ರೆಸಿಡೆಂಟರನ್ನು ಸಂದರ್ಶಿಸುವಂತಾಯಿತು. ಆ ವೇಳೆಗೆ ಎಡ್ವರ್ಡ್ ಚಕ್ರವರ್ತಿ ಅಲ್ಲಿಗೆ ಭೇಟಿ ನೀಡಿದರು. ಚಕ್ರವರ್ತಿಗೆ ಕಾಣಿಕೆಯಾಗಿ ನೀಡಿದ ಅಪರೂಪದ ಕೃತಿಗಳನ್ನು ಚಿನ್ನಾಚಾರ್ಯರಿಂದ ಮಾಡಿಸಿಕೊಡಲು ಅವಕಾಶ ದೊರಕಿತು. ಇದರಿಂದ ಮೈಸೂರಿನ ಶಿಲ್ಪಕಲೆಯ ಕೀರ್ತಿ ಹೆಚ್ಚಿತು. ಅವು ಮೂರು ಅಡಿ ಎತ್ತರದಲ್ಲಿ ಟೆನ್ನಿಸ್ ರೂಪಶ್ರೀಯರ (ಒಂದು ಜೊತೆ) ಪ್ಲಾಸ್ಟರ್ ಕೃತಿಗಳು. ಕೇವಲ ಅಲ್ಪ ಅವಧಿಯಲ್ಲೇ ಅವುಗಳನ್ನು ರಚಿಸಿಕೊಡಲಾಗಿತ್ತು. ಚಕ್ರವರ್ತಿಗಳು ಆ ಕೃತಿಗಳ ಸೊಬಗಿಗೆ ಮನಸೋತು ಚಿನ್ನಾಚಾರ್ಯರನ್ನು ಅಭಿನಂದಿಸಿದರು. ಅನಂತರ ಚಿನ್ನಾಚಾರ್ಯರು ಸರ್ ಸಾಲಾರ್‌ಜಂಗ್ ಬಹದ್ದೂರರ ಭಾವಚಿತ್ರವನ್ನು ರಚಿಸಿಕೊಟ್ಟರು. ಈ ಕೃತಿ ಅಲ್ಲಿನ ಕೈಗಾರಿಕಾ ಡೈರೆಕ್ಟರ್ ಜನಾಬ್ ಮಹಮದ್ ರಹಮತುಲ್ಲಾರವರ ಗಮನಕ್ಕೂ ಬಂತು. ಅವರು "The plaques have been executed with considerable artistic care; they have been generally admired", ಎಂದು ಪ್ರಶಂಸೆ ಮಾಡಿದ್ದಾರೆ. ಇಷ್ಟೇ ಅಲ್ಲದೆ ಸಿಕಂದರಾಬಾದಿನ ಕೋಟ್ಯಧೀಶ್ವರರಾದ ಮುತ್ಯಾಲ ರಾಮಣ್ಣನವರ ಪ್ರತಿಮೆಯನ್ನು ಪಂಚಲೋಹದಲ್ಲಿ ನಿರ್ಮಿಸುವ ಸಾಹಸದಲ್ಲಿ ಚಿನ್ನಾಚಾರ್ಯರು ಜಯಗಳಿಸಿದರು. ತೈಲಚಿತ್ರದಲ್ಲೂ ತೋರದಷ್ಟು ಸೌಂದರ್ಯವೂ ಜೀವಕಳೆಯೂ ಈ ಪ್ರತಿಮೆಯಲ್ಲಿ ಕಾಣುವಂತಾಯಿತು. ಇದು ಅವರ ಕೀರ್ತಿಗೆ ದಾರಿಮಾಡಿತು. ಅನಂತರ ಸಿಕಂದರಾಬಾದಿನಿಂದ ಅವರು ಮೈಸೂರಿಗೆ ಆಗಮಿಸಿದರು.

ಚಿನ್ನಾಚಾರ್ಯರ ಕಲಾಕುಶಲತೆಯ ಗುಟ್ಟನ್ನರಿತ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯ ಮುಖ್ಯ ಅಧಿಕಾರಿಯಾಗಿದ್ದ ಎಸ್. ರಾಮಸ್ವಾಮಿ ಅಯ್ಯಂಗಾರ್ಯರೂ, ಆಗ ಸಂಸ್ಥಾನದ ದಿವಾನರಾಗಿದ್ದ ಸರ್ ಮಿರ್ಜಾರವರೂ ಚಿನ್ನಾಚಾರ್ಯರಿಗೆ ಬೆಂಬಲವಾಗಿ ನಿಂತು ಉತ್ತೇಜನ ನೀಡಿದರು. ಅಣ್ಣಾಮಲೈ ವಿಶ್ವವಿದ್ಯಾಲಯದ ಕೋರಿಕೆಯ ಮೇಲೆ ಚಿನ್ನಾಚಾರ್ಯರು 'ನಟರಾಜ'

ಮತ್ತು 'ಗೋವಿಂದರಾಜ'ರ ಪಂಚಲೋಹದ ವಿಗ್ರಹಗಳನ್ನು 1939ರಲ್ಲಿ ಮಾಡಿ ಕಳುಹಿಸಿದರು. ಮದರಾಸು ಗವರ್ನರರು ಸಭೆಯಲ್ಲಿ ಜರತಾರಿ ಪೀತಾಂಬರದ ಬಹುಮಾನದೊಡನೆ 'ಶ್ರೀ ವಿಶ್ವಕರ್ಮ ಶಿಲ್ಪಕಲಾನಿಧಿ' ಎಂಬ ಬಿರುದನ್ನು ಕೊಟ್ಟರು. ಶ್ರೀಯುತರ ಬಗ್ಗೆ, ಅವರ ಶಿಲ್ಪಕಲೆಯ ಬಗ್ಗೆ ತಮಿಳು ನಾಡಿನ ಪತ್ರಿಕೆಗಳು ಪ್ರಶಂಸೆಯ ಮಾತುಗಳನ್ನು ಬರೆದುವು.

ಚಿನ್ನಾಚಾರ್ಯರು ಚಾಮರಾಜೇಂದ್ರ ವೃತ್ತಿಶಿಕ್ಷಣ ಶಾಲೆಯ ಲೋಹವಿಭಾಗದಲ್ಲಿ ಸುಮಾರು 18 ವರ್ಷಗಳ ಕಾಲ ಉತ್ತಮ ಸೇವೆಯನ್ನು ಸಲ್ಲಿಸಿದರು. ಅನಂತರ ಇವರ ಸೋದರರರೂ ನುರಿತ ಲೋಹ ಶಿಲ್ಪಿಗಳೂ ಆದ ಎನ್. ವಿ. ಶಾಮಾಚಾರ್, ಎನ್. ವಿ. ಸೂರ್ಯನಾರಾಯಣಾಚಾರ್, ಮತ್ತು ಎನ್. ವಿ. ವಿಶ್ವರೂಪಾಚಾರ್ ಇವರು ಕ್ರಮವಾಗಿ ಆ ವಿಭಾಗದಲ್ಲಿ ಕೆಲಸ ಮಾಡಿ ಶಾಲೆಯ ಘನತೆಯನ್ನು ಕಾಪಾಡಿಕೊಂಡು ಬಂದರು.

ಒಮ್ಮೆ ಕಲಾಶಾಲೆಗೆ ವಾಷಿಂಗ್‌ಟನ್ನಿನ 'ನ್ಯಾಷನಲ್ ಜಿಯಾಗ್ರಾಫಿಕಲ್' ಪತ್ರಿಕೆಯವರು ಭೇಟಿಯಿತ್ತರು. ಆ ಸಂದರ್ಭದಲ್ಲಿ ಚಿನ್ನಾಚಾರ್ಯರು ತಮ್ಮ ನಾಟ್ಯ ಸರಸ್ವತಿಯನ್ನು ಕಡೆಯುತ್ತಿದ್ದರು. ಚಿನ್ನಾಚಾರ್ಯರು ಕಲೆಯಲ್ಲಿ ಉದ್ಯುಕ್ತರಾಗಿದ್ದುದರ ಛಾಯಾ ಚಿತ್ರಗಳನ್ನು ಅವರು ತೆಗೆದುಕೊಂಡುಹೋಗಿ ತಮ್ಮ ಪತ್ರಿಕೆಯಲ್ಲಿ ಪ್ರಚುರಪಡಿಸಿ, ಶ್ರೀಯುತರ ಕಲೆಯ ಬಗ್ಗೆ ತುಂಬ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಚಿನ್ನಾಚಾರ್ಯರಿಗೆ ಲೋಹದಂತಹ ಗಟ್ಟಿಮುಟ್ಟಿನ ಶರೀರವೇ ಇದ್ದಿತು. ಅವರು ಆಚಾರಶೀಲರೂ ಖಂಡಿತವಾದಿಗಳೂ ಆಗಿದ್ದರು. ಕಲೆಯ ಹೆಸರಿನಲ್ಲಿ ಅನ್ಯಾಯ ಎಂದರೆ ಅವರಿಗೆ ಆಗುತ್ತಿರಲಿಲ್ಲ. ಒಮ್ಮೆ ಚಾಣಗಳನ್ನು ಹಿಡಿದು ದಿಟ್ಟ ಮನಸ್ಸಿನಿಂದ ಶಿಲ್ಪರಚನೆಯಲ್ಲಿ ಆಸಕ್ತರಾಗಿದ್ದಾಗ ಯಾರಾದರೂ ಆತುರಪಡಿಸಿದಲ್ಲಿ ತತ್‌ಕ್ಷಣ ಅಸ್ಪಷಿಸುವಷ್ಟು ಕೋಪ ಬರುತ್ತಿತ್ತು. ಆದರೆ ಅದು ಕ್ಷಣಿಕ. ಮರುಕ್ಷಣದಲ್ಲಿ ಅವರು ಸುಪ್ರಸನ್ನರಾಗುತ್ತಿದ್ದರು.

ಶಿಲ್ಪಕಲೆಯಲ್ಲಿ ಪರಿಣತರಾದ ಚಿನ್ನಾಚಾರ್ಯರು ತಮ್ಮ ಜೀವನವನ್ನು ಹೆಚ್ಚು ಹೆಚ್ಚು ಸುಧಾರಿಸಿಕೊಳ್ಳಲು ಉದ್ಯುಕ್ತರಾದರು. ಧರ್ಮದಿಂದಲೇ ಸ್ಫೂರ್ತಿಗೊಂಡದ್ದು ಇವರ ವಂಶ. "ಧರ್ಮದ ದಾರಿಯಿಂದಲೇ ಕಲೆ ನಡೆಸಬೇಕು. ಕಲೆ ಧರ್ಮದ ಛಾಯಾನುವರ್ತಿಯಾಗಿರಬೇಕು." ಎಂಬುದು ಇವರು ತಳೆದ ನಿರ್ಧಾರ. ಇವರು ಶಾಸ್ತ್ರೀಯ ಗ್ರಂಥಗಳನ್ನೆಲ್ಲ ಸತತವಾಗಿ ಅಧ್ಯಯನ ಮಾಡಿ ಶಿಲ್ಪಶಾಸ್ತ್ರ ಪ್ರವೀಣರಾದರು.

ಎಲ್ಲಿ ಕಲಾವಿದನ ಮನಸ್ಸು ಧರ್ಮಜಿಜ್ಞಾಸುವಿನ ಮನಸ್ಸಿನಂತಿರುವುದೋ ಅಲ್ಲಿ ಕಲೆ ಮತ್ತು ಧರ್ಮಗಳ ಮಧುರ ಸಂಯೋಗವನ್ನು ನಾವು ಕಾಣುತ್ತೇವೆ. ಅಂತಹ ಅಪ್ರತಿಮ ಮನೋಭಾವವನ್ನು ಪಡೆದ ಈ ಹುಟ್ಟು ಶಿಲ್ಪಿ ಜೀವಕಳೆಯುಳ್ಳ ಅನೇಕ ಕೃತಿಗಳನ್ನು ಕಡೆದಿದ್ದಾರೆ. ನಾಡಿನಲ್ಲಿ ಹಲವು ಸಾವಿರ ವರ್ಷಗಳಿಂದಲೂ ಬೆಳೆದು ಬಂದ ಸಂಸ್ಕೃತಿಯ ಪರಂಪರೆಯನ್ನು ಸ್ಥಿರವಾಗಿ ನಿಲ್ಲಿಸಬಲ್ಲ ಕಲಾವಿದರಲ್ಲಿ ಚಿನ್ನಾಚಾರ್ಯರೂ ಒಬ್ಬರಾಗಿದ್ದರು.

"ಹುಟ್ಟಿದೊಡನೆ ಬಂದ ಪ್ರತಿಭೆ, ಕಸರಿಲ್ಲದ ತಿಳಿವು. ಬೇಸರಿಲ್ಲದ ಕಲಿವು ಇದ್ದವನಿಗೆ ಸರಸ್ವತಿಯು ಒಲಿಯುವಳು" ಎಂಬ ಉಕ್ತಿ ಚಿನ್ನಾಚಾರ್ಯರ ಜೀವನಕ್ಕೆ ಒಪ್ಪುವಂಥದು. ಒಬ್ಬ ಕಲಾವಿದನ ಕೃತಿಯಲ್ಲಿ ರೂಪ, ರೇಖೆ, ಪ್ರಮಾಣ, ವರ್ಣಗಳಲ್ಲಿ ಎಷ್ಟೇ ಹೊಂದಿಕೆಯಿದ್ದರೂ ಅವನ ಕೃತಿಗಳಲ್ಲಿ ಜೀವಕಳೆ ಇಲ್ಲದಿದ್ದರೆ ಅದು ಉತ್ತಮ ಕೃತಿಯಾಗದು. ಕೃತಿ



ವೀರಭದ್ರಸ್ವಾಮಿ—ಮೇಣದ ಕೃತಿ





ಬಾಲತಾಂಡವ ಕೃಷ್ಣ—ಪಂಚಲೋಹ ಶಿಲ್ಪ



ಮುತ್ಯಾಲ ರಾಮಣ್ಣನವರ ರೂಪಶಿಲ್ಪ—ಪಂಚಲೋಹ ಕೃತಿ

ಯಲ್ಲಿ ತೋರುವ ಜೀವಂತ ಶಕ್ತಿಯಿಂದಲೇ ಅವನ ಪಾಂಡಿತ್ಯ ಸ್ಪಷ್ಟವಾಗಬೇಕು. ಈ ಫಲ ದೊರೆಯಲು ಅಮೋಘ ಅಭ್ಯಾಸ, ಅಪಾರ ಅನುಭವ ಅತ್ಯಗತ್ಯ. ತನ್ನ ಸಾಮಗ್ರಿಗಳು ಜೀವಂತವೆಂದು ತಿಳಿದು ಬಹು ಎಚ್ಚರಿಕೆಯಿಂದ ರೂಪುಗೊಳಿಸಿ ಜೀವಂತ ದೃಶ್ಯಗಳನ್ನಾಗಿ ಸೃಷ್ಟಿಸುವವನು ನಿಜವಾದ ಕಲಾವಿದ. ಆಗ ಅವನ ಕೃತಿಗಳು ಉಸಿರಾಡುತ್ತ ಮಾತನಾಡುತ್ತ ಜೀವಂತವಾಗಿರುತ್ತವೆ. ಇಂಥ ಶಾಸ್ತ್ರಪೂರ್ಣ ಜೀವಂತ ಕಲಾಮೂರ್ತಿಗಳನ್ನು ಚಿನ್ನಾಚಾರ್ಯರಿಂದ ನಾವು ಪಡೆದಿದ್ದೇವೆ. ಭಕ್ತಿಮಯವಾಗಿ ಕೈಜೋಡಿಸಿ ನಿಂತಿರುವ ಗಂಭೀರ ಮುದ್ರೆಯ ನಾಲ್ವಡಿ ಕೃಷ್ಣರಾಜ ಒಡೆಯರ 6 ಅಡಿ ಉದ್ದದ ಪಂಚಲೋಹದ ಪ್ರತಿಮೆ ಅಂಥವುಗಳಲ್ಲಿ ಒಂದು. ಸಾವಿರಾರು ಜನರ ಪ್ರೀತ್ಯಾದರಕ್ಕೆ ಪಾತ್ರವಾಗಿ ಬೇಲೂರಿನ ದೇವಾಲಯವೊಂದರಲ್ಲಿದೆ.

ಇವರು ರಚಿಸಿಕೊಟ್ಟ ಶ್ರೀ ಚಾಮುಂಡಾಂಬಿಕೆಯ ವಿಗ್ರಹ ಈಗಲೂ ಭರತಪುರದ ಅರಮನೆಯಲ್ಲಿದೆ. ಚಿನ್ನಾಚಾರ್ಯರ ಅನೇಕ ಮೂರ್ತಿಗಳಿಗೆ ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಬಹುಮಾನಗಳು ಬಂದಿವೆ. 1925ರಲ್ಲಿ ಚಿನ್ನಾಚಾರ್ಯರು ರಚಿಸಿದ ಶ್ರೀನಿವಾಸ ಬೆಳ್ಳಿಯ ವಿಗ್ರಹವೂ ಅಗಾಧ ಕೆತ್ತನೆಯ ಬಾಗಿಲವಾಡವೂ ಅಪ್ರತಿಮವಾದವು. ಅದಕ್ಕೆ ಶ್ರೀ ಮದ್ರುವರಾಜರ ಬಹುಮಾನ ದೊರೆಯಿತು. ಇವರು ರಚಿಸಿದ ಪಂಚಲೋಹದ ನಟರಾಜ ಮತ್ತು ನಾಟ್ಯಸರಸ್ವತಿ ವಿಗ್ರಹಗಳು ಬೆಂಗಳೂರಿನ ಆಕಾಶವಾಣಿಯಲ್ಲಿವೆ. ಕೆ. ವಿ. ಅಯ್ಯರ್ ಅವರ ಶಾಂತಲಾ ಕಾದಂಬರಿಯ ರಕ್ಷಾಪುಟದ ಮೇಲೆ ಇದರ ಚಿತ್ರ ಇದೆ. ಶ್ರೀ ಕೂಡಲಿ ಮಠದಲ್ಲಿ ಚಿನ್ನಾಚಾರ್ಯರು ಕೆತ್ತಿದ ಬೆಳ್ಳಿಯ ಪಲ್ಲಕ್ಕಿಯಿದೆ.

ಚಿನ್ನಾಚಾರ್ಯರು ರಚಿಸಿರುವ ಮೂರ್ತಿಗಳಲ್ಲಿ ನಾಟ್ಯಸರಸ್ವತಿ, ಅಂಬೆಗಾಲ ಕೃಷ್ಣ, ನಟರಾಜ, ಶ್ರೀನಿವಾಸ ಮುಖ್ಯವಾದವು. ಮಾನವನ ಪ್ರತಿಮೆ ಮಾಡುವುದರಲ್ಲಿ ಕೈಹಾಕಿ ಇವರು ಜಯಗಳಿಸಿದುದರ ಫಲವಾಗಿ ಹಿಂದಿನ ಶ್ರೀ ಕೃಷ್ಣರಾಜ ಒಡೆಯರ ಮತ್ತು ಸಿಕಂದರಾಬಾದಿನ ಸಾಹುಕಾರರ ಪ್ರತಿಮೆಗಳು ಪ್ರಸಿದ್ಧವಾದವು ಮತ್ತು ಕಲಾಪೂರ್ಣವಾದವು.

ಬೆಂಗಳೂರಿನಲ್ಲಿರುವ ಅಖಿಲ ಭಾರತ ಡಿಸೈನ್ ಸೆಂಟರ್‌ನಲ್ಲಿ 1953ರ ಡಿಸೆಂಬರ್ 1ರಂದು ಚಿನ್ನಾಚಾರ್ಯರನ್ನು ಲೋಹದ ಶಿಲ್ಪಿಗಳಾಗಿ ಸೇರಿಸಿಕೊಂಡುದರಿಂದ ಆ ಕೇಂದ್ರಕ್ಕೆ ಅಪೂರ್ವ ಶೋಭೆಯುಂಟಾಯಿತು. ಅಲ್ಲಿ ಇವರ ಕಲೆಗಾರಿಕೆಯನ್ನು ಮನಗಂಡು ಮೆಚ್ಚಿದ ಕಲಾ ವಿಮರ್ಶಕರೊಬ್ಬರು 1956ರ ಜುಲೈ ತಿಂಗಳ 'ಸ್ಪೆಕ್ಟೇಟರ್' ಪತ್ರಿಕೆಯಲ್ಲಿ, "A master carver in any medium, he can recreate the marvels of Belur or Halebid on bronze, stone or wood. Mr. Chinnachar has to his credit a record of work that any artisan could well be proud of," ಎಂದು ಬರೆದಿದ್ದಾರೆ. ಆಗ ಆ ಕೇಂದ್ರದ ಡೈರೆಕ್ಟರಾಗಿದ್ದ ಅಸಿತ ಕುಮಾರ್ ಹಲ್ದಾರ್ ಎಂಬ ಬಂಗಾಳಿ ಕಲಾವಿದರಿಗೂ ಚಿನ್ನಾಚಾರ್ಯರಿಗೂ ಮೊದಮೊದಲು ವಿಶ್ವಾಸ ಮತ್ತು ಮೈತ್ರಿಭಾವ ಇತ್ತಾದರೂ ಬರಬರುತ್ತ ಅನ್ಯರಿಂದಾಗಿ ಸರಿಬೀಳದೆ ಹೋದುದರಿಂದಾಗಿ ಕೇವಲ ಹದಿನಾಲ್ಕು ತಿಂಗಳಲ್ಲೇ ಇವರು ರಾಜೀನಾಮೆ ಸಲ್ಲಿಸಿ ಹೊರಬರಬೇಕಾಗಿ

ಬಂತು. ಕರ್ನಾಟಕ ರಾಜ್ಯ ಸರಕಾರ 1969ರಲ್ಲಿ ಇವರಿಗೆ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ಇವರು ಬೆಂಗಳೂರಿನಿಂದ ಮೈಸೂರಿಗೆ ಹಿಂದಿರುಗಿ ಸ್ವತಂತ್ರ ವೃತ್ತಿಗೆ ಇಳಿದ ಮೇಲೆ ಕಷ್ಟಗಳ ಪರಂಪರೆಗಳು ಎದುರಾದುವು. ಚಿನ್ನಾಚಾರ್ಯರು ಜೀವನದಲ್ಲಿ ಹೆಚ್ಚಾಗಿ ಕಹಿಯನ್ನೆ ಕಂಡವರಾಗಿದ್ದರು. ಆದರೂ ಅವಾವುದನ್ನೂ ಹಚ್ಚಿಕೊಳ್ಳುವ ಸ್ವಭಾವ ಅವರದಾಗಿರಲಿಲ್ಲ. ತಮ್ಮ ತಂದೆ ತೀರಿಕೊಂಡ ಕೆಲವೇ ದಿನಗಳಲ್ಲಿ ಇವರ ತಾಯಿಯೂ ತೀರಿಕೊಂಡರು. ಪುತ್ರರಿಲ್ಲವೆಂದು ಎಂದೂ ಕೊರಗಿದವರಲ್ಲ ಇವರು. ಚಿನ್ನಾಚಾರ್ಯರಿಗೆ ಕೆಲವೇ ಜನ ಆಪ್ತ ಮಿತ್ರರು. ಟೈಗರ್ ವರದಾಚಾರ್, ಸಂಗೀತರತ್ನ ವಾಸುದೇವಾಚಾರ್, ಅಸ್ಥಾನ ವಿದ್ವಾನ್ ಬಿಡಾರಂ ಕೃಷ್ಣಪ್ಪ ಮತ್ತು ಸುಪ್ರಸಿದ್ಧ ಸಂಗೀತಗಾರ ಭೈರವಿ ಕೆಂಪೇಗೌಡ ಇವರೇ ಮುಂತಾದವರು ಇವರ ಮಿತ್ರರು. ಚಿನ್ನಾಚಾರ್ಯರ ಕೊನೆಯ ದಿನಗಳಲ್ಲೂ ಇವರು ಯಾವುದಾದರೂ ಒಂದು ಮೂರ್ತಿಯನ್ನು ಮೇಣದಲ್ಲಿ ರೂಪಿಸುತ್ತಿದ್ದರು. ಪತ್ನಿ ಮಕ್ಕಳಿಲ್ಲದೆ ಸಾಕುಮಗಳ ಆಶ್ರಯದಲ್ಲಿ ಸುಖವಾಗಿದ್ದರೂ ಯಾವುದೋ ಅವ್ಯಕ್ತ ಕೊರತೆ ಅವರನ್ನು ಕಾಡುವಂತೆ ಭಾಸವಾಗುತ್ತಿತ್ತು. 1976ರ ಫೆಬ್ರುವರಿ 8ರಂದು ಚಿನ್ನಾಚಾರ್ಯರು ದಿವಂಗತರಾದರು. ಎಂಬತ್ತು ಮೂರು ವರ್ಷಗಳ ಸಾರ್ಥಕ ಬದುಕನ್ನು ಬಾಳಿದ ಇಂಥ ಶಿಲ್ಪಿ ನಾಡಿನಿಂದ ಕಣ್ಮರೆಯಾದರೂ ಇವರ ಶಿಲ್ಪಕೃತಿಗಳು ನಮ್ಮ ಮುಂದಿದ್ದು ಕರ್ನಾಟಕದ ಕಲಾಕೀರ್ತಿಯನ್ನು ಮೆರೆಸುತ್ತಿವೆ.

ಎಚ್. ಆರ್. ರಘುನಾಥ ಭಟ್

ಬಾಗೂರಿನ ಒಂದು ಅಪೂರ್ವ ಕಂಚು ಶಿಲ್ಪ

ಬಾಗೂರು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಕಸಬಾ ಹೋಬಳಿಯಲ್ಲಿರುವ ಒಂದು ಹಳ್ಳಿ. ಇದು ಹೊಸದುರ್ಗದ ವಾಯುವ್ಯಕ್ಕೆ ಸುಮಾರು 10 ಕಿಮೀ. ದೂರದಲ್ಲಿದೆ, ಜನಸಂಖ್ಯೆ 2,345 (1971). ಇದು ಐತಿಹಾಸಿಕವಾಗಿ ಪ್ರಮುಖವಾದ ಪಟ್ಟಣವಾಗಿತ್ತೆಂಬುದು ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಇದುವರೆಗೆ ನಮಗೆ ತಿಳಿದುಬಂದಿರುವಂತೆ ಈ ಗ್ರಾಮದ ಪಂಚಾಯಿತಿ ಭವನದ ಹಿಂದೆ, ಕಾಲುವೆ ಬಳಿ, ಬಿದ್ದಿರುವ ಶಿಲಾಶಾಸನವೆ ಬಾಗೂರಿನ ಅತ್ಯಂತ ಪ್ರಾಚೀನ ಶಾಸನ ($2\frac{1}{2}' \times 1\frac{3}{4}'$). ಪೂರ್ವದ ಹಳಗನ್ನಡದಲ್ಲಿ ಬರೆದಿರುವ ಈ ಪುಟ್ಟ ಶಾಸನ 8–9ನೆಯ ಶತಮಾನದ್ದಾಗಿರಬೇಕು.[1] 'ಬಾಗೂರುಸ್ಥಳ[2]' 'ಬಾಗೂರು ಸೀಮೆ'[3] 'ಬಾಗೂರ ಚರಂತಿ,'[4] 'ಬಾಗೆ ಊರು'[5]. ಎಂದು ಮುಂತಾಗಿ ಶಾಸನಗಳಲ್ಲಿ ಬಣ್ಣಿಸಿರುವ ಈ ಊರು ವಿಜಯನಗರ ಪಾಳೆಯಗಾರರ ಕಾಲದಲ್ಲಿ (16–17ನೆಯ ಶತಮಾನ) ಪ್ರಭಾವಶಾಲಿ ಪಟ್ಟಣವಾಗಿತ್ತೆಂದೂ ಹೇಳಬಹುದು. 'ಮಣಿನಾಗ ಪುರಾಧಿಪತಿ', 'ಸಿಂಧೂಗೋವಿಂದ', 'ಧವಲಾಂಕ' ಮುಂತಾದ ಬಿರುದಾವಳಿ ಪಡೆದ ಬೇಲೂರು ನಾಯಕರಲ್ಲಿ ಕೆಲವರು ಬಾಗೂರಿನಲ್ಲಿ ಆಳಿದ್ದುಂಟು. ಈ ರಾಜವಂಶದ ಎಱೆ[3]ಕೃಷ್ಣನಾಯಕನಿಗೆ ಬಾಗೂರು ಸೀಮೆಯನ್ನು ದತ್ತಿಯಾಗಿ ನೀಡಲಾಗಿತ್ತು[6]. ವಿಜಯನಗರ–ಸದಾಶಿವರಾಯನ ಕಾಲದಲ್ಲಿ ಆಳುತ್ತಿದ್ದ ಈತ ಬಾಗೂರಿನ ಚೆನ್ನಕೇಶವ ದೇವಾಲಯಕ್ಕೆ ದಾನದತ್ತಿಗಳನ್ನು ಬಿಟ್ಟಿದ್ದ. ಅಲ್ಲದೆ 1554ರಲ್ಲಿ ಬಾಗೂರಿನ ಪೇಟೆಯನ್ನು ಜೀರ್ಣೋದ್ಧಾರ ಮಾಡಿಸಿ ಅದಕ್ಕೆ 'ಕೃಷ್ಣಾಪುರ' ಎಂದು ನಾಮಕರಣಮಾಡಿದ್ದುಂಟು[7].

---

1 *MAR* 1941, ಪು. 139. ಗಂಗ ಶ್ರೀಪುರುಷ ಮತ್ತು ಶಿವಮಾರನ ಕಾಲದ ಶಾಸನಗಳಲ್ಲಿ ಕಂಡುಬರುವ ಬಾಗೆ ಊರು ಈ ಬಾಗೂರು ಆಗಿರಬಹುದು ; ಆರ್. ನರಸಿಂಹಾಚಾರ್ ಅವರು ಹೇಳಿರುವಂತೆ ಚನ್ನರಾಯಪಟ್ಟಣ ಜಿಲ್ಲೆಯ ಬಾಗೂರು ಆಗಿರಲಿಕ್ಕಿಲ್ಲ. ನೋಡಿ–MAR 1939, ಪು. 121-5

2 *EC V* cn 194

3 ಅದೇ, XI, HK. 71, 72, 73, 112, 114, 119, 121

4 ಅದೇ HK 79, 80

5 *MAR* 1939, ಪು. 120, ಸಾಲು–2

6 *EC* XI, *HK* 114

7 ಅದೇ HK 112

ವಿಜಯನಗರದ ಪಾಳೆಯಗಾರರ ಕಾಲದಲ್ಲಿ ಕಟ್ಟಿರಬಹುದಾದ ಬಾಗೂರು ಚೆನ್ನಕೇಶವ ದೇವಾಲಯ ರಾಜ್ಯದ ಪ್ರಮುಖ ಮುಜರಾಯಿ ಸಂಸ್ಥೆಗಳಲ್ಲೊಂದು.[8] ಪ್ರತಿವರ್ಷ (ಮಾರ್ಚ್ ತಿಂಗಳಲ್ಲಿ) ರಥೋತ್ಸವ ಜರುಗುತ್ತದೆ. ಈ ಸಂದರ್ಭದಲ್ಲಿ ನೋಡಬಹುದಾದ ಉತ್ಸವ ಮೂರ್ತಿಗಳಲ್ಲಿ ಕೋದಂಡರಾಮನ ಒಂದು ಕಂಚು ಶಿಲ್ಪ ನಿಜಕ್ಕೂ ಅಪೂರ್ವವಾದ್ದು. ಸ್ಥಳೀಯ ದೇವಾಲಯದ ಅರ್ಚಕರು ತಿಳಿಸುವ ಪ್ರಕಾರ ಬಾಗೂರಿನ ಮೂಡಲಕೆರೆಯಲ್ಲಿ (ಊರಿನ ಪೂರ್ವಕ್ಕಿರುವ ಕೆರೆ) ಹೂತುಹೋಗಿತ್ತೆನ್ನಲಾದ ಈ ಕಂಚು ಶಿಲ್ಪ ಸುಮಾರು 1869ರಷ್ಟು ಹಿಂದೆ ದೊರಕಿತು. ಆದರೆ ಇದರ ಮೂಲದ ಬಗೆಗೆ ಸ್ಪಷ್ಟವಾದ ಮಾಹಿತಿ ದೊರೆತಿಲ್ಲ. ಅಲ್ಲದೆ ಈ ವಿಗ್ರಹಕ್ಕೆ ಸಂಬಂಧಿಸಿದಂತೆ ಲಕ್ಷ್ಮಣ ಸೀತೆಯರ ವಿಗ್ರಹಗಳೂ ಸಿಕ್ಕಿಲ್ಲ.

ಕೋದಂಡರಾಮನ ಮನೋಹರವಾದ ವಿಗ್ರಹ ಸುಮಾರು 62.4 ಸೆಂಮೀ. ಎತ್ತರವಿದ್ದು 13.6 ಸೆಂಮೀ. ಎತ್ತರದ ಪದ್ಮಪೀಠದ ಮೇಲೆ 'ತ್ರಿಭಂಗಸ್ಥಾನ'ದಲ್ಲಿ ನಿಂತುಕೊಂಡಿದೆ. ಇದರ ತೂಕ ಸುಮಾರು 30 ಕೆಜಿ. ಇರಬಹುದು. ಮೇಲಕ್ಕೆತ್ತಿದ ಎಡಗೈ ಬಿಲ್ಲು ಹಿಡಿದುಕೊಳ್ಳುವ ಮುದ್ರೆಯಲ್ಲಿದ್ದರೆ, ಬಲಗೈ ಕಟಕಾಮುದ್ರೆಯನ್ನು ಸೂಚಿಸುತ್ತದೆ. ಇದನ್ನು ಕಟಕಾಮುಖವೆಂದೂ, ಸಿಂಹಕರಣಮುದ್ರೆಯೆಂದೂ ಕರೆಯುತ್ತಾರೆ. ಸಾಮಾನ್ಯವಾಗಿ ಒಂದು ವಸ್ತುವನ್ನು ಹಿಡಿದುಕೊಳ್ಳುವುದನ್ನು ಈ ಮುದ್ರೆ ನಿರ್ದೇಶಿಸುವುದಾದರೂ ಅನುಗ್ರಹ ಭಾವವೂ ಇದರಲ್ಲಿ ಸೂಚಿತವಾಗಿದೆಯೆನ್ನಬಹುದು.

ರಾಮ **'ಕಿರೀಟ ಮುಕುಟ'** ಧರಿಸಿದ್ದಾನೆ. ಇದೊಂದು ಅಂಡೆಯಾಕಾರದ ಕಿರೀಟವಾಗಿದ್ದು ಇದರ ಅಗ್ರಭಾಗ ಶಂಕುವಿನಾಕೃತಿಯಲ್ಲಿದೆ. ಇದರ ತುದಿಯಲ್ಲಿ ಮೊಗ್ಗೆಯಾಕಾರದ ಗುಪ್ಪಟೆಯಿದೆ. ಕಿರೀಟದ ಮೇಲ್ಭಾಗದಲ್ಲಿ ಸೂಕ್ಷ್ಮವಾದ ಕೆತ್ತನೆ ಕೆಲಸದ ಅಲಂಕರಣೆ ತುಂಬಿದೆ (ಚಿತ್ರ ೩).

ವಿಗ್ರಹದ ತಲೆಯ ಹಿಂದೆ **'ಶಿರಶ್ಚಕ್ರ'**ವಿದೆ. ಇದು ಎಂಟು ದಳದ ಪದ್ಮವಿನ್ಯಾಸವನ್ನೊಳಗೊಂಡಿರುವುದು. ಚಕ್ರದ ಕೇಂದ್ರ ಭಾಗದಿಂದ ಪುಟ್ಟ ಕುಚ್ಚು ತೂಗಾಡುತ್ತಿರುತ್ತದೆ. ಚಕ್ರದ ಸುತ್ತಲೂ ವೃತ್ತಾಕಾರದ ಪಟ್ಟಿಕೆಯಿದೆ. ಇದೊಂದು ಚೋಳ ಕಂಚು ಶಿಲ್ಪದ ಲಕ್ಷಣ (ಚಿತ್ರ ೨).

ಶಿರಶ್ಚಕ್ರದ ಕೆಳಭಾಗದಲ್ಲಿರುವ ಜಟೆ ಕಲಾತ್ಮಕವಾಗಿದೆ. ಎರಡು ಹಂತಗಳಲ್ಲಿ ಗುಂಗುರು ಕೂದಲುಗಳನ್ನು (ಕಟ್ಟಿದೆ) ಹಾಗೆಯೆ ಇಳಿಬಿಟ್ಟಿದೆ (ಚಿತ್ರ ೨).

ಭುಜದ ಮೇಲೆ ಇಳಿಬಿಟ್ಟಂತಿರುವ **'ಮಕರ ಕುಂಡಲ'**ಗಳನ್ನು ಧರಿಸಿದೆ. ಇಲ್ಲಿ ಮಕರದ ಸೊಂಡಿ ಹೆಚ್ಚು ಉದ್ದವಾಗಿರದೆ ಸಾಂಪ್ರದಾಯಿಕವಾಗಿ ನಿರ್ದೇಶಿಸಲ್ಪಟ್ಟಿದೆ. ಇದರ ಬಾಯಿಂದ ಹೊರಟ ಕುಚ್ಚುಗಳು ಎರಡೂ ಭುಜಗಳ ಮೇಲೆ ಇಳಿಬಿಟ್ಟಿದೆ (ಚಿತ್ರ ೪).

ರಿಬ್ಬನ್‌ಪಟ್ಟಿಯಂತಿರುವ **ಯಜ್ಞೋಪವೀತ** (ಜನಿವಾರ) ಧರಿಸಿದ್ದು ಇದು ಉದರಬಂಧಕ್ಕೆ ತಾಗುತ್ತಿದೆ. **ಉದರಬಂಧ** ಸರಳವಾದ ಅಲಂಕರಣೆಯನ್ನೊಳಗೊಂಡ ಪಟ್ಟಿಯಾಗಿದ್ದು

---

8 *Mysore State Gazetteer*, Chitradurga District, Bangalore, 1967, ಪು. 375

ಮಾನವಿಕ ಕರ್ಣಾಟಕ

ಸಂಪುಟ ೫

೧೯೭೪-೭೫

ಸೂಚಿ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ

ವಿಷಯ ಸೂಚಿ

ವಿಷಯ ಸೂಚಿ

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

ಮಾನವಿಕ ಕರ್ಣಾಟಕ

ಪ್ರಬುದ್ಧ ಕರ್ಣಾಟಕ

ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸ ಗಂಗೋತ್ರಿ, ಮೈಸೂರು–೫೭೦೦೦೬